ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 18

ಮೇ 04, 2008

ರೂ. 5/-







ಮೇ ದಿನ - 2008 -

ವಿಧಾನಸಭಾ ಚುನಾವಣೆ :

ದುಡಿಯುವ ಜನತೆಯ ಮುಂದಿದೆ ಬಹುದೊಡ್ಡ ಸವಾಲು



ಬಳ್ಳಾರಿ : ಹಣದೈತ್ಯರ ಹಣಾಹಣಿ



ಮೇ ದಿನದ ಪ್ರಣಾಳಿಕೆ :

ಉತ್ತಮ ಜೀವನಕ್ಕಾಗಿ ಹೋರಾಡುವ ಪ್ರತಿಜ್ಞೆ

ಇವರು ದುಡಿವ ಜನರ ದನಿಗಳು











ಲಂಬಾಣಿಗಳು ಇಲ್ಲಿ ಒತ್ತೆಯಾಳುಗಳು



ಇದೋ ಬಂದ ಬಣ್ಣದ 'ಹರಿಶ್ಚಂದ್ರ'

ಇದ್ದದ್ದು ಇದ್ದಾಂಗ....

ಜಗದೆಲ್ಲೆಡೆ ಇಣುಕಿ ಹಾಕುವ ಆ ಮೂಗು

"ಇರಾನ್ ಅಧ್ಯಕ್ಷ ಅಹಮದನೆಜಾದ್ ಅವರ ಭೇಟಿಯ ಸಂದರ್ಭದಲ್ಲಿ ಭಾರತವು ಕಠಿಣವಾಗಿ ವರ್ತಿಸಬೇಕು. ಯುರೇನಿಯಂ ಸಂಸ್ಕರಣೆಯ ಕಾರ್ಯಕ್ರಮವನ್ನು ರದ್ದುಪಡಿಸುವಂತೆ ಭಾರತ ಇರಾನ್‌ನ್ನು ಒತ್ತಾಯಿಸಬೇಕು. ಇದಲ್ಲದೇ ಭಾರತವು ಇರಾನ್ ಅಂತರರಾಷ್ಟ್ರೀಯ ರಂಗದಲ್ಲಿ ಅನಪೇಕ್ಷಿತ ಚಟುವಟಿಕೆಗಳನ್ನು ನಿಲ್ಲಿಸಿ, ಜವಾಬ್ದಾರಿಯುತವಾಗಿ ವರ್ತಿಸುವಂತೆ ಕೇಳಬೇಕೆಂದು ಅಮೇರಿಕಾ ಬಯಸುತ್ತದೆ.'

– ಟಾಮ್ ಕೇಸಿ,

ಅಮೇರಿಕಾದ ವಿದೇಶಾಂಗ ವ್ಯವಹಾರ ಸಚಿವಾಲಯದ ವಕ್ತಾರ

★

ಮೂಗು ತೂರಿಸಬೇಡಿ

"ಇರಾನ್ ಅಣ್ವಸ್ತ್ರ ತಯಾರಿಸುತ್ತಿದೆಯೋ ಇಲ್ಲವೋ ಎಂದು ತೀರ್ಮಾನಿಸುವ ಜವಾಬ್ದಾರಿಯನ್ನು ನಿಮಷ್ಟಕ್ಕೇ ನೀವೇ ತೆಗೆದುಕೊಳ್ಳಬೇಡಿ. ಅದನ್ನು ಅಂತರರಾಷ್ಟ್ರೀಯ ಅಣುಶಕ್ತಿ ಆಯೋಗಕ್ಕೆ ಬಿಡಿ."

– ಪ್ರಣಬ್ ಮುಖರ್ಜಿ

ಭಾರತದ ವಿದೇಶಾಂಗ ಸಚಿವ

★

ಸಮನ್ಸ್ ನೀಡಿ

"ಇದು ಭಾರತದ ವಿಚಾರದಲ್ಲಿ ಅಮೇರಿಕಾ ಮಾಡಿರುವ ನೇರ ಹಸ್ತಕ್ಷೇಪವಾಗಿದೆ. ಇದಕ್ಕೆ ವಕ್ತಾರರು ತಕ್ಕ ಉತ್ತರ ನೀಡಿದ್ದಾರೆ. ಆದರೆ ಅದಷ್ಟೇ ಸಾಲದು. ಭಾರತದಲ್ಲಿರುವ ಅಮೇರಿಕಾದ ರಾಯಭಾರಿಗೆ ಸಮನ್ಸ್ ನೀಡಿ, ಭಾರತ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಬೇಕು. ಅಮೇರಿಕಾದ ಹೇಳಿಕೆಯು ಸಾಮ್ರಾಜ್ಯಶಾಹಿ ಧೋರಣೆಯಾದ್ದಾಗಿದೆ ಇದನ್ನು ನಾವು ಕಟುವಾಗಿ ಖಂಡಿಸುತ್ತೇವೆ".

– ಬೃಂದಾಕಾರಟ್,

ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯೆ

★

ಈ ಸಂಗತಿ

ಕ್ರಿಮಿನಲ್ ಐಡಿಯಾ

ಕಳೆದ ಚುನಾವನೆಯಲ್ಲಿ ಚಾಮರಾಜ ಪೇಟೆ ಕ್ಷೇತ್ರದಿಂದ ರೌಡಿಗಳು ಅತಿ ಹೆಚ್ಚಾಗಿ ಕಣಕ್ಕೆ ಇಳಿದರು ಯಾಕೆ ಗೊತ್ತೇ?

ಬಂಧನದಿಂದ ತಪ್ಪಿಸಿಕೊಳ್ಳಲು! ಯಾಕೆಂದ್ರೆ ಮತದಾನ ಪೂರ್ವದಲ್ಲಿ ಪೋಲೀಸರು ಶಾಂತಿ, ಸುರಕ್ಷತೆಯ ದೃಷ್ಟಿಯಲ್ಲೆಂದು ಬಂಧಿಸಿ ಜೈಲಿಗೆ ತಳ್ತಾರಲ್ಲಾ! ಅದಕ್ಕೆ ಅಭ್ಯರ್ಥಿಗಳಾಗಿ ಬಿಟ್ರೆ ತಮ್ಮ ನೆಚ್ಚಿನ ನಾಯಕರ ಪರವಾಗಿ ಕೆಲ್ಸ ಮಾಡಬಹುದಲ್ಲ!

–ಹೇಗಿದೆ 'ಕ್ರಿಮಿನಲ್' ಐಡಿಯಾ!

●

ಹೇಳ್ಬೇಕು ಅಂದ್ರೆ ಕನಿಷ್ಠ ಹತ್ತು ನಿಮಿಷಬೇಕು

ಎಂ.ಎಲ್.ಸಿ.ಯಾಗಿ ಇದ್ರೂ ಅವರಿಗೆ ಮತ್ತೆ ಎಂ.ಎಲ್.ಎ. ಆಗಲಿಕ್ಕೆ ಸ್ಪರ್ಧೆಗೆ ಯಾಕೆ ಟಿಕೆಟ್ ಕೊಟ್ರಿ?

ಇದು ಈ ಟಿ.ವಿ. ಕನ್ನಡದಲ್ಲಿ ಗನ್ ಪಾಯಿಂಟ್ ಪ್ರೋಗ್ರಾಂನಲ್ಲಿ ಸದಾನಂದಗೌಡರಿಗೆ, ಶೋಭಾ ಕರಂದ್ಲಾಜೆ ಕುರಿತು ಹಿರಿಯ ಪತ್ರಕರ್ತ ಶ್ರೀಧರ್ ಪ್ರಶ್ನೆ:

'ಅವರು ಮಹಿಳಾ ಅಭ್ಯರ್ಥಿ'

'ಹಾಗಾದರೆ ಅರವಿಂದ ಲಿಂಬಾವಳಿ'..

'ನೋಡಿ ನಾನು ಒಂದು ವಿಷಯ ಹೇಳಿಯೇ ಬಿಡುತ್ತೇನೆ. ಅವರಿಬ್ಬರೂ ಪಕ್ಷದ ಪೂರ್ಣಾವಧಿ ಕಾರ್ಯಕರ್ತರು ಅವರಿಗೆ ಅದಕ್ಕಾಗಿಯೇ ಅವಕಾಶ' ಸದಾನಂದರ ಸದಾ ಆನಂದದ ಉತ್ತರ

ಶ್ರೀಧರ್ ಬಿಡಬೇಕಲ್ಲ! 'ನಿಮ್ಮ ಪಕ್ಷದಲ್ಲಿ ಬೇರೆ ಯಾರೂ ಪೂರ್ಣಾವಧಿ ಕಾರ್ಯಕರ್ತರಿಲ್ಲವೇ'

ಇಲ್ಲ ಇವರಿಬ್ಬರೇ... ನಾನು ಅಲ್ಲ, ಯಡಿಯೂರಪ್ಪ ಅಲ್ಲ.. ಅನಂತಕುಮಾರ್ ಅಲ್ಲ... ಅವರಿಬ್ಬರೇ? ಅದರ ಬಗ್ಗೆ ಹೇಳಲು ಏನೆಂದರೂ 10 ನಿಮಿಷ ಬೇಕಾದೀತು!

ಹೇಳಲು ಅವರು ತಯಾರಿದ್ದರೂ ಕೇಳಿಸಿಕೊಳ್ಳಲು ಯಾರೂ ಸಿದ್ದರಿಲ್ಲದ ಕಾರಣ... ಪ್ರಶ್ನೆ ಮತ್ತೊಂದು ಕೇಳಬೇಕಾಯಿತು.

●

ಅನೈತಿಕ ಮೌಲ್ಯಗಳ ಅಗತ್ಯತೆ?!

ದೂರದರ್ಶನದ ಆಕಾಶವಾಣಿಯಲ್ಲಿ ರಾಷ್ಟ್ರೀಯ ಪಕ್ಷಗಳಿಗೆ ಮತದಾರರಿಗೆ ಮನವಿ ಮಾಡಲು ಸಮಯ ನಿರ್ಧರಿಸುವ ಸಭೆ ಚುನಾವಣಾದಿಕಾರಿಗಳ ಕಛೇರಿಯಲ್ಲಿ....

ಹಾಗೆಯೇ ಪ್ಯಾನಲ್ ಚರ್ಚೆಗೂ ಕೆಲವು ವಿಷಯಗಳ ಪ್ರಸ್ತಾಪ ಯಾವ್ಯಾವೂ ಅಂತಾ ಚರ್ಚೆ 'ರಾಜಕೀಯ ಮತ್ತು ನೈತಿಕ ಮೌಲ್ಯಗಳು' ಇರಲಿ... ಒಂದು ಸಲಹೆ.

'ಬೇಡ್ರೀ... ನೈತಿಕ ಮೌಲ್ಯ ಚರ್ಚೆಯ ವಿಷಯಬೇಕಿಲ್ಲ' 'ಅದ್ಯಾಕೆ' ತಕ್ಷಣ ಬಂದೀತು ಆಕ್ಷೇಪ! ವಿಷಯ ಬೇಡ ಎಂದವರಾರು? ನಿಮ್ಮ ಊಹೆ ಸರಿ.. ಅವರು ಬಿಜೆಪಿಯ ಪ್ರತಿನಿಧಿ....ಇದನ್ನು ಕೇಳಿದಾಗ ಎಲ್ಲರೂ ಘೊಳ್ಳೆಂದು ನಕ್ಕರು. ನಗದೇ ಇನ್ನೇನು? ಅಕ್ರಮ ಸಾರಾಯಿ, ಅಕ್ರಮ ಹಣ, ಅಕ್ರಮ ಬನಿಯನ್, ಸೀರೆಗಳ ವಶ ಇತ್ಯಾದಿ ದಿನವಿಡೀ ಬಿಜೆಪಿಯದ್ದೇ ಸುದ್ದಿ!

ಏನಿದ್ರೂ ಚರ್ಚೆ ಮಾಡೋದಿದ್ರೇ' 'ಅನೈತಿಕ ಮೌಲ್ಯಗಳ ಅಗತ್ಯತೆ ಇರಲಿ ಅನ್ನುತ್ತಿದ್ದಾರೆಯೋ ಏನೋ?'

ಚುಚ್ಚುಮದ್ದು

ಪ್ರಚೋದನೆಯಾ?

■ ಸಮಾನ ಕಾನೂನು ಜಾರಿಗೆ ತನ್ನಿ ಗೋಹತ್ಯೆ ಬೇಡ, ಎಲ್ಲರೂ ರಾಷ್ಟ್ರಗೀತೆ ಹಾಡಿ, ಅಫ್ಜಲ್ ಗುರುಗೆ ಗಲ್ಲು ಶಿಕ್ಷೆ ನೀಡಿ, ಹಿಂದೂಗಳ ಸಂಖ್ಯೆ ಕಡಿಮೆಯಾಗಿ ಮುಸ್ಲಿಂ ಸಂಖ್ಯೆ ಹೆಚ್ಚುತ್ತಿದೆ ಎಂದು ವಾಸ್ತವ ಸಂಗತಿ ಹೇಳುವುದನ್ನು ಪ್ರಚೋದನಕಾರಿ ಎನ್ನುತ್ತೀರಾ?

– ಪ್ರಮೋದ್ ಮುತಾಲಿಕ್

ಅಧ್ಯಕ್ಷ, ರಾಷ್ಟ್ರೀಯ ಹಿಂದೂ ಸೇನೆ

ಯಾಕಲ್ಲ?

ದೇಶಕ್ಕೆ ಮುಸ್ಲಿಮ ರ ಕೊಡುಗೆ ಮುಸ್ಲಿಮರ ಶೈಕ್ಷಣಿಕ, ಆರ್ಥಿಕ ಹಿಂದುಳಿದಿರುವಿಕೆ, ಬಿಪಿಎಲ್ ರೇಷನ್ ಕಾರ್ಡ್ ಸಮಸ್ಯೆ, ಉದ್ಯೋಗ ಖಾತ್ರಿ ಯೋಜನೆ ಜಾರಿ ವಿಷಯ, ಬೆಲೆ ಏರಿಕೆ, ಸರಬ್‌ಜೀತ್ ಸಿಂಗ್ ಪ್ರಶ್ನೆ, ಭಾರತದ ಮೇಲೆ ಅಮೇರಿಕಾದ ಸವಾರಿ ಯತ್ನ ಇವುಗಳ ಬಗ್ಗೆ ಎಲ್ಲಾ ನೀವು ಮಾತಾಡಲ್ಲ. ಜೊತೆಗೆ ಇವನ್ನೆಲ್ಲಾ ಮರೆಸೋ ಮಾತಾಡ್ತೀರಲ್ಲ. ಅದು ಪ್ರಚೋದನೆ ಅಲ್ವೆ?

ಮುಖ್ಯಮಂತ್ರಿಯಾದರೂ ಆಶ್ಚಯವಿಲ್ಲ!

■ ಕೋಮುವಾದ ವಿರುದ್ಧ ನನ್ನ ಹೋರಾಟವಾಗಿತ್ತು. ಆದರೆ ಬಿಜೆಪಿಯನ್ನು ಕೋಮುವಾದಿ ಎಂದು ಎಲ್ಲಿಯೂ ಹೇಳಿಲ್ಲ. ಈವರೆಗೆ ಯಾವುದೇ ಪಕ್ಷ ದಲಿತರನ್ನು ಮುಖ್ಯಮಂತ್ರಿ ಮಾಡಿಲ್ಲ. ಆ ಕೆಲಸವನ್ನು ಬಿಜೆಪಿ ಮಾಡಲಿದೆ. ನಾನೇ ಮುಖ್ಯಮಂತ್ರಿಯಾದರೂ ಆಶ್ಚರ್ಯವಿಲ್ಲ.

– ಸುಭಾಷ್ ಭರಣಿ,

ನಿವೃತ್ತ ಐಪಿಎಸ್ ಅಧಿಕಾರಿ, ಕಾಂಗ್ರೆಸ್ ಟಿಕೆಟ್ ಸಿಗದೆ ಬಿಜೆಪಿ ಸೇರಿದವರು

ಅಯ್ಯೋ ನಿಮ್ಮ ಭ್ರಮೆಯೇ?

ತಿರಸ್ಕರಿಸಿ

■ 'ಆರ್ಥಿಕ ಅಭಿವೃದ್ಧಿಗೆ ಪ್ರಾಧಾನ್ಯ ನೀಡದಿದ್ದರೆ ಭಾರತ ಬಡರಾಷ್ಟವಾಗಿಯೇ ಉಳಿಯಲಿದೆ. ಪ್ರಗತಿಯನ್ನು ಸಹಿಸಿಕೊಳ್ಳದ ಯಾವುದೇ ಸಿದ್ದಾಂತವನ್ನು ತಿರಸ್ಕರಿಸಲೇಬೇಕು'

ಪಿ.ಚಿದಂಬರಂ

ಎಡಪಕ್ಷಗಳನ್ನು ಪರೋಕ್ಷವಾಗಿ ಟೀಕಿಸುತ್ತಾ,

ಬೆಲೆಗಳು ಹೀಗೆ ಏರುತ್ತಿದ್ದರೆ ಜನರು ನೀವು, ನಿಮ್ಮ ಪಕ್ಷವನ್ನೇ ತಿರಸ್ಕರಿಸುತ್ತಾರೆ. ಎಚ್ಚರ....

ಅಸಮಾನತೆ ಮತ್ತು ಮೌಢ್ಯತೆಯ ವಿರಾಟ್ ರೂಪಗಳು

ಅದೊಂದು ಪುಟ್ಟ ಹಳ್ಳಿ. ಹಾಗಂತ ಅದು ಕುಗ್ರಾಮವಲ್ಲ. ಅಲ್ಲಿ ಕರೆಂಟ್ ಇದೆ. ಸಾಕಷ್ಟು ಜನ ಸರಕಾರಿ ನೌಕದಾರರಿದ್ದಾರೆ. ರಂಗೋಲಿ ಕೆಳಗೆ ನುಸುಳುವಂತಹ ರಾಜಕೀಯ ಪುಡಾರಿಗಳಿದ್ದಾರೆ. ಮಿಗಿಲಾಗಿ ಒಬ್ಬ ಕೆ.ಎ.ಎಸ್. ಅಧಿಕಾರಿಯನ್ನು ಆ ಊರು ನಾಡಿಗೆ ಕೊಟ್ಟಿದೆ. ಕೆಲ ಡಾಕ್ಟರೇಟ್‌ಗಳನ್ನು ತನ್ನ ಮುಡಿಗೇರಿಸಿಕೊಂಡಿದೆ. ಹಾಗಂತ ಆ ಊರಲ್ಲಿ ಸ್ವರ್ಗವೇ ಬಂದು ನೆಲೆಸಿಲ್ಲ. ಆ ಊರಿನ ಚಹಾದಂಗಡಿಯಲ್ಲಿ ದಲಿತರಿಗೆ ಚಹಾ ಕುಡಿಯಲು ಪ್ರತ್ಯೇಕವಾದ ಲೋಟಾಗಳಿವೆ.. ಅಲ್ಲಿನ ತಳ ಸಮುದಾಯದ ಜನ ಕಟಿಂಗ್ ಮಾಡಿಸಲು ದೂರದ ಪಟ್ಟಣಕ್ಕೆ ಹೋಗಬೇಕು. ಫ್ಯೂಡಲ್ ವ್ಯವಸ್ಥೆಯ ಬೇರುಗಳು ಅಲ್ಲಿ ಆಳವಾಗಿ ಬೇರೂರಿವೆ. ದಲಿತರ, ಬಡವರ ಗುಡಿಸಲುಗಳ ಒಳಗೆ ಅಕ್ಷರಗಳು ಇನ್ನೂ ಕಾಲಿಟ್ಟಿಲ್ಲ. ಇದು ಬರೀ ಆ ಊರಿನ ಕತೆಯೊಂದೇ ಅಲ್ಲ. ಸುವರ್ಣ ಕರ್ನಾಟಕದ ನೂರಾರು ಗ್ರಾಮಗಳ ಕತೆಯೂ ಆಗಿದೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತು ಆರು ದಶಕಗಳು ಸುಮ್ಮನೆ ಕಾಲನ ಒಳಗೆ ಒಂದಾಗಿ ಹೋಗಿವೆ. ಈ ಅಸಮಾನತೆ, ಮೌಢ್ಯತೆಯ ವಿರುದ್ಧ ವ್ಯಾಪಕವಾದ ಪ್ರತಿಭಟನೆಗಳು, ಸೆಮಿನಾರುಗಳು, ಪುಸ್ತಕಗಳು ಬರುತ್ತಲೇ ಇವೆ. ಇಷ್ಟೆಲ್ಲ ಸಕಾರಾತ್ಮ ಕ ಸ್ಪಂದನೆಗಳ ನಡುವೆಯೂ ಅಸಮಾನತೆ, ಅವಮಾನ, ಅಸ್ಪೃಶ್ಯತೆ, ಸ್ತ್ರೀ ಶೋಷಣೆ, ಮೌಢ್ಯತೆಗಳು ಮಾತ್ರ ಜಪ್ಪಯ್ಯ ಅನ್ನದೇ ಗೂಟ ಹೊಡೆದುಕೊಂಡು ಕುಳಿತಿರುವುದು ನಮ್ಮನ್ನು ಆತಂಕಕ್ಕೆ, ತಲ್ಲಣಗಳಿಗೆ ಈಡು ಮಾಡಿದೆ.

ಇತ್ತೀಚೆಗೆ ಸಿಂಧಗಿಯಲ್ಲಿ ಮಹಿಳೆಯೊಬ್ಬಳು ದೇವರಿಗೆ ಹರಕೆ ತೀರಿಸಲು ಬೆತ್ತಲೆ ಸೇವೆ ಕೈಗೊಂಡ ವರದಿ ಪ್ರಕಟವಾಗಿದೆ. ಆ ಮಹಿಳೆಯ ಮನೆಯಲ್ಲಿ ಒಬ್ಬ ಎಂಜನೀಯರ್, ಇನ್ನೊಬ್ಬ ಶಿಕ್ಷಕ ಇರುವುದನ್ನು ನಾವು ಗಮನಿಸಬೇಕಿದೆ. ಈ ಸಾಫ್ಟವೇರ್ ಯುಗದಲ್ಲಿ, ಸಾಕ್ಷರತೆಯುನ್ನು ಪಡೆದುಕೊಂಡವರ ಮನೆಯಲ್ಲಿ ಹೀಗೆ ಮೌಢ್ಯತೆಯ ಪರಮಾವಧಿಯ ಮೆರವಣಿಗೆ ನಡೆದಿರುವುದು ನಮ್ಮ ವಾಸ್ತವ ಸಮಾಜದ

ನಗ್ನ ಸತ್ಯವನ್ನು ಬಿಚ್ಚಿಡುತ್ತಿದೆ.

ಬಳ್ಳಾರಿ ಜಿಲ್ಲೆಯ ಸಿರಗುಪ್ಪಾ ತಾಲ್ಲೂಕಿನ ಬಲಕುಂದಿಯ ಬೇಡರ ರಾಮಪ್ಪ ಎನ್ನುವಾತ ಪ್ರತಿನಿತ್ಯ ತಮ್ಮೂರಿನ ಗುಡ್ಡದ ಮೇಲಿರುವ ಈಶ್ವರನನ್ನು ಪೂಜಿಸುವಾಗ ರಕ್ತ ತರ್ಪಣ ನೀಡುತ್ತಿದ್ದ. ಇತ್ತೀಚೆಗೆ ಪೂಜಿಸುವಾಗ ಭಕ್ತಿಯ ಉನ್ಮಾದದಲ್ಲಿ ತನ್ನ ಎಡಗೈ ಹೆಬ್ಬೆರಳನ್ನು ತುಂಡರಿಸಿಕೊಂಡು ಏನೂ ಅರಿಯದ ಆ ಕಲ್ಲು ಮೂರ್ತಿಗೆ ಅರ್ಪಿಸಿದ ಘಟನೆಯ ವರದಿ ನಮ್ಮನ್ನು ಬೆಚ್ಚಿಬೀಳಿಸುತ್ತಿದೆ.

ಪುರೋಹಿತಶಾಹಿ ವರ್ಗ ನಮ್ಮ ತಳ ಸಮುದಾಯದ ಮನಸ್ಸುಗಳ ಮೇಲೆ ಕೈಗೊಂಡ ಸವಾರಿಯ ಹೆಜ್ಜೆಗಳು ಇನ್ನೂ ಜೀವಂತ ಇರುವುದನ್ನು, ಆಳ್ವಿಕೆ ನಡೆಸುತ್ತಿರುವುದನ್ನು ಈ ಎರಡು ಘಟನೆಗಳು ಸ್ಪಷ್ಟ ಪಡಿಸುತ್ತವೆ.

ಈ ತೆರಹದ ಮೌಢ್ಯತೆಯ ಘಟನೆಗಳು ಪ್ರತಿನಿತ್ಯವೂ ನೂರಾರು ಜರುಗುತ್ತವೆ, ನಾಡಿನಲ್ಲಿ ಇನ್ನೂ ಅವೈಜ್ಞಾನಿಕತೆ ಢಾಗಿದೆ. ಇಂತಹ ಮೌಢ್ಯತೆಯ ವಿಷಬೀಜಗಳನ್ನು ಪುರೋಹಿತಶಾಹಿಯ ಕಾಣದ ಕೈಗಳು ವ್ಯವಸ್ಥಿತವಾಗಿ ಬಿತ್ತನೆ ಮಾಡುತ್ತಿವೆ. ಪ್ರಗತಿಪರ, ಜೀವಪರ, ವಿಚಾರಧಾರೆಯುಳ್ಳ ಮನಸ್ಸುಗಳು ಅಲ್ಲಿ ಸಾಕ್ಷರತೆ, ವೈಚಾರಿಕತೆ, ಸಮಾನತೆ ನೆಲೆಸುವಂತೆ ಮಾಡುವಲ್ಲಿ ಶ್ರಮಿಸುವ ತುರ್ತಿದೆ.

– ಟಿ.ಎಸ್.ಗೊರವರ

ಸಂಪಾದಕೀಯ

ಬದಲಾಗುವ ರಾಗಾಲಾಪನೆ

'ಬಂಡಾಯ ಮತ್ತು ಪಕ್ಷಾಂತರಗಳು' ಕ್ಷಣ ಕ್ಷಣದ ವಿದ್ಯಾಮಾನಗಳಾಗುತ್ತಿವೆ. ಆ ಹಿಂದಿನ ಗಳಿಗೆಯವರೆಗೂ ಆ ಪಕ್ಷದ ಅಥವಾ ನಾಯಕರ 'ನಿಷ್ಠ' ರಾಗಿದ್ದವರು ವಿಧಾನಸಭೆಯ ಚುನಾವಣೆಯಲ್ಲಿ ಸ್ಪರ್ಧಿಸಲು 'ಟಿಕೆಟ್' ಸಿಗಲಿಲ್ಲ ಎಂಬ ಕಾರಣಕ್ಕೆ ಬೇರೊಂದು ಪಕ್ಷದ ಬಾಗಿಲು ಬಡಿದು ನಾಯಕರ ನಿಷ್ಠೆ ತೋರಿಸುವುದು ನಿಜಕ್ಕೂ ಸಂದರ್ಭ ಸಾಧಕತೆಯ ಸಂಗತಿ. ಅಂತಹದೊಂದು ಪಕ್ಷದಲ್ಲಿರುವಾಗ, ಅಥವಾ ಬಿಟ್ಟು ಬೇರೊಂದು ಪಕ್ಷ ಸೇರಿದಾಗ ಕೊಡುವ ಕಾರಣ, ಆ ತತ್ವ ಸಿದ್ಧಾಂತಕ್ಕೆ ಮನಸೋತ ಹೇಳಿಕೆಗಳು ವಾಕರಿಕೆ ತರುವಂತಹದ್ದಾಗಿದೆ.

ಈ ಬಾರಿ ಚುನಾವಣಾ ಕಣದಲ್ಲಿ ಸ್ಪರ್ಧಿಸಲು ಆಕಾಂಕ್ಷಿಗಳ ಸಂಖ್ಯೆ ವಿಪರೀತವಾಗಿತ್ತು. ಇದರಲ್ಲಿ 'ಜನರ ಸೇವೆ' ಗಿಂತ ವೈಯಕ್ತಿಕ ಹಿತಾಸಕ್ತಿಗಳಷ್ಟೇ ಮೇಲುಗೈ ಪಡೆದಿದ್ದುದರಲ್ಲಿ ಅಧಿಕಾರ, ಹಣಗಳಿಕೆ, ಸ್ಥಾನದ ಲೆಕ್ಕಾಚಾರವೇ ಪ್ರಧಾನ. ಇಂತಹ ಸ್ಪರ್ಧೆಯೊಂದು ಪ್ರಜಾಸತ್ತಾತ್ಮಕ ಆಶಯ ಎನ್ನುವುದಕ್ಕಿಂತ ಇತ್ತೀಚೆಗೆ ದೈತ್ಯಾಕಾರದಲ್ಲಿ ಬೆಳೆದು ನಿಂತಿರುವ ಭೂ ದಂಧೆ ಹಾಗೂ ಗಣಿಗಾರಿಕೆಯ ಹಣವೇ ಮೇಲುಗೈ ಸಾಧಿಸುವ ಪ್ರಯತ್ನಗಳು. ಹೀಗಾಗಿ ಇಂತಹ ಉದ್ದೇಶ ಇಟ್ಟುಕೊಂಡೇ ಸಮಾಜಸೇವೆಗೆ ಇಳಿದವರು, ವಿವಿಧ ಪಕ್ಷಗಳನ್ನು ಸೇರಿದವರು ಆಕಾಂಕ್ಷೆ ಈಡೇರದಿದ್ದಾಗ ಇಂತಹ ಬಂಡಾಯ, ಪಕ್ಷಾಂತರಗಳು ಅತೀ ಸಹಜವೆಂಬಂತೆ ನಡೆದು ಹೋಗಿವೆ.

ಇಂತಹ ಬಂಡಾಯದ ಬೆಂಕಿ ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳಲ್ಲಿ ಭುಗಿಲೆದ್ದಿದೆ. ಇಂತಹ ಬಂಡಾಯವೇ ಈ ಪಕ್ಷಗಳಿಗೆ ಅಧಿಕೃತ ಅಭ್ಯರ್ಥಿಗಳನ್ನು ಸೋಲಿಸುವಷ್ಟು ಮಟ್ಟಿಗೆ ಜೋರಾಗಿದೆ. ಅಷ್ಟಿಷ್ಟು ಬಂಡಾಯ ಶಮನಗೊಳಿಸುವುದಾಗಿ ಹೇಳಿಕೊಂಡರೂ ಅದರ ಹಾನಿಯಿಂದ ಈ ಪಕ್ಷಗಳು ತಪ್ಪಿಸಿಕೊಳ್ಳಲಾರವು. ಇದು ಅವರೇ ಮಾಡಿದ ಕೃತ್ಯಕ್ಕೆ ಪ್ರತಿಫಲವೇ.

ಈ ಬಂಡಾಯದ ಸರಣಿಯಲ್ಲಿ ಈಗ ಮಾಜಿ ಕೇಂದ್ರ ಸಚಿವ, ಹಿರಿಯ ಕಾಂಗ್ರೆಸ್ಸಿನ ಜಾಫರ್ ಷರೀಫ್‌ರವರು ರಾಜೀನಾಮೆ ಸಲ್ಲಿಸಿರುವುದು ಆಶ್ಚರ್ಯಕರ ಬೆಳವಣಿಗೆಯಾಗಿದೆ. ಹಲವಾರು ದಶಕಗಳಿಂದಲೂ ಕಾಂಗ್ರೆಸ್ ಪಕ್ಷದಲ್ಲೇ ನಿಷ್ಠರಾಗಿ ದೇಶದ ರಾಜಕಾರಣವನ್ನು ಕಾಂಗ್ರೆಸ್‌ನ ಒಳ, ಹೊರಗನ್ನು ಬಲ್ಲ ಅವರು ಬಂಡಾಯವೆದ್ದು ತಮ್ಮ ಅತೃಪ್ತಿಯ ಬಿಸಿಯನ್ನು ಹೈಕಮಾಂಡಿಗೆ ತಲುಪಿಸಿದ್ದಾರೆ. ತಾವು ಬಯಸಿದ ಬೆಂಬಲಿಗರಿಗೆ ಕೆಲವರಿಗಾದರೂ ಟಿಕೆಟ್ ನೀಡಲಿಲ್ಲ ಎಂಬ ಅತೃಪ್ತಿ ಇದರೊಂದಿಗೆ ಸೇರಿದೆ. ಖರ್ಗೆ, ಸಿದ್ಧರಾಮಯ್ಯ ಮುಂತಾದವರು ತಮಗಾದ ಇಂತಹ ಸ್ಥಿತಿಯನ್ನು ತೋಡಿಕೊಂಡಿರುವುದು ಪರಿಸ್ಥಿತಿಯ ಗಂಭೀರತೆಗೆ ಸಾಕ್ಷಿ.


ಇಂದು ಚುನಾವಣೆ ರಾಜಕೀಯ ಪಕ್ಷದ ನೀತಿ ಕಾರ್ಯಕ್ರಮದ ಮೇಲೆ ನಡೆಯುವುದರ ಬದಲು ಹಣ-ತೋಳ್ಬಲ, ಹಾಗೆಯೇ ಗೆಲ್ಲುವ 'ಕುದುರೆ' ಎಂಬ ಪರಿಗಣನೆಯೇ ಮುಖ್ಯವಾಗಿರುವುದು ದೊಡ್ಡ ದುರಂತ. ಪಕ್ಷವೊಂದರ 'ಟಿಕೆಟ್' ಕೋಟ್ಯಾಂತರ ರೂಪಾಯಿಗಳಿಗೆ ಹರಾಜಾಗಿ ಮಾರಾಟವಾಗಿವೆ. ಅಧಿಕಾರಕ್ಕೆ ಹತ್ತಿರ ಎಂಬ ಪಕ್ಷಗಳಲ್ಲಿ (ಅದಕ್ಕಾಗಿ ಅಂತಹ ಸ್ಥಿತಿಯನ್ನು ಸೃಷ್ಟಿಸುವ ಮಾಧ್ಯಮಗಳು) ವಹಿವಾಟು ಜೋರಾಗಿದೆ. ಹೀಗಾಗಿ ಅಕ್ರಮವಾಗಿ ದುಡ್ಡು ಮಾಡಿದ ದಂಧೆಗಾರರು ರಾಜಕಾರಣವನ್ನು ವ್ಯಾಪಾರ ವಹಿವಾಟಿಗೆ ಇಳಿಸಿದ್ದಾರೆ. 100 ಕ್ಷೇತ್ರಗಳ ಬಿ ಫಾರಂಗಳನ್ನು ತನಗೆ ಕೊಡುವಂತೆ ಗಣಿ ಕುಖ್ಯಾತಿಯ ಜನಾರ್ಧನ ರೆಡ್ಡಿ ಕೇಳಿದ್ದು ಬಹಿರಂಗವಾಗಿದೆ. ಅದಕ್ಕೆ ತಕ್ಕ ಕಪ್ಪವನ್ನು ನೀಡಿ ಗೆಲ್ಲಿಸಿಕೊಳ್ಳುವುದಾಗಿ ಆತ ಹೇಳಿದ್ದು ಬಿಜೆಪಿ ತಲುಪಿರುವ ತಾತ್ವಿಕ, ನೈತಿಕ ದಿವಾಳಿತನಕ್ಕೆ ಸಾಕ್ಷಿಯಾಗಿದೆ. ಹೀಗೆ ಗೆದ್ದವರು ಜನರ ಹಿತದ ಪ್ರಶ್ನೆಗಳನ್ನು ಹೇಗೆ ಅರ್ಥಮಾಡಿಕೊಂಡಾರು? ನಾಡಿನ ಪ್ರಗತಿಗಾಗಿ ಏನು ಹೊಸ ಶಾಸನಗಳನ್ನು ತಂದಾರು? ಇಂತಹದ್ದೇ ಸ್ಥಿತಿ ಆವರಿಸಿದ್ದರಿಂದಲೇ ಇಡೀ ಕೃಷಿ, ಕೈಗಾರಿಕೆ ಸಣ್ಣ ವಾಣಿಜ್ಯ ರಂಗವೇ ನಾಶ ಹೊಂದುವ ಎಪಿಎಂಸಿ ಕಾಯ್ದೆ ಮಂಡಿಸುವಾಗ ಏನೂ ಹೆಚ್ಚಿನ ಚರ್ಚೆಯೇ ಇಲ್ಲದೆ ಅಂಗೀಕಾರವಾದದ್ದು, ಉದಾರೀಕರಣ- ಜಾಗತೀಕರಣದ ತೀವ್ರ ಧಾಳಿಯ ಸಂದರ್ಭದಲ್ಲಿ ಇಂತಹ ಹೌದಪ್ಪಗಳನ್ನೇ ಈ ಎಲ್ಲರೂ ಬಯಸುತ್ತಿರುವುದು.

ಈ ಎಲ್ಲ ವಿದ್ಯಾಮಾನಗಳನ್ನು ಗಮನಿಸಿದರೆ ಬಂಡವಾಳಶಾಹಿ ಪಕ್ಷಗಳ ನಡುವೆಯೇ ಭಿನ್ನತೆ ಎಂಬುದೇ ಇಲ್ಲವಾಗಿ ಬಿಟ್ಟಿರುವುದು ಗೋಚರವಾಗುತ್ತದೆ. ತಮ್ಮದೇ ಪಕ್ಷ ತತ್ವ ನಿಷ್ಠೆಯೆಂದೂ, ಬಡಜನರ ಪಕ್ಷವೆಂದೂ ಹೇಳಿಕೊಂಡರೂ ಆಯಾ ಪಕ್ಷಗಳ ರಾಜಕೀಯ ಗುರುತುಗಳು ಮಾಯವಾಗಿ ನಗ್ನವಾಗಿ ಬಿಟ್ಟಿವೆ. ಇವೆಲ್ಲಾ ಒಂದೇ ಎಂಬುದು ಜನರಿಗೆ ಅರ್ಥವಾಗುತ್ತಿದೆ. ಯಾಕೆಂದರೆ ಭೂ ಮಾಲೀಕ-ಬಂಡವಾಳಗಾರರು, ಇಂತಹ ನೀತಿ ವಿಧಾನ ಅನುಸರಿಸುತ್ತಿರುವವರು ಎಷ್ಟೊಂದು ಸರಾಗವಾಗಿ ಆ ಈ ಪಕ್ಷಗಳಿಗೆ ಸರಾಗವಾಗಿ ಹಾಡುತ್ತಿರುವ ರಾಗವನ್ನು, ಪಕ್ಷವನ್ನು ಬದಲಿಸುತ್ತಿದ್ದಾರೆ. ವಿಶ್ವಬ್ಯಾಂಕ್-ವಿದೇಶಿ ಹಣಕಾಸು ಸಂಸ್ಥೆಗಳು, ಉದಾರೀಕರಣದ ವಕ್ತಾರರೇ ಸರ್ಕಾರದ ನೀತಿಗಳನ್ನು ರೂಪಿಸುತ್ತಿರುವಾಗ ಅದನ್ನೇ ಜಾರಿಗೊಳಿಸಲು ಈ ಪಕ್ಷಗಳು ಬದ್ಧವಾಗಿರುವಾಗ ಜನಪರ ಚಿಂತನೆ, ಅಂತಹ ರಾಜಕಾರಣ ಇವರಿಗ್ಯಾರಿಗೂ ಬೇಡ... ಆದ್ದರಿಂದಲೇ ಅವರೆಲ್ಲಾ 'ಸಮಾನ ಮನಸ್ಕ' ಪಕ್ಷಗಳಾಗಿರುವುದು.

ಹೀಗಿರುವಾಗಲೇ ಎಲ್ಲಾ ಪಕ್ಷಗಳನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವುದು ಹಾದಿ ತಪ್ಪಿದ ರಾಜಕೀಯ ಚಿಂತನೆಯಾಗುವುದು. ನಮ್ಮ ಸಮಾಜದ ವಾಸ್ತವಿಕ ಅರಿವು ಹಾಗೂ ನಡೆಸಬೇಕಾದ ಹೋರಾಟದ ಸ್ವರೂಪದ ಬಗ್ಗೆ ಎಚ್ಚರವಿರಲೇಬೇಕು. ಯಾಕೆಂದರೆ ಬಂಡವಾಳಶಾಹಿ ಪಕ್ಷಗಳಲ್ಲೇ ಅತ್ಯಂತ ತೀವ್ರ ಬಲ ಪ್ರತಿಗಾಮಿಯಾಗಿರುವ ಕೋಮುವಾದಿ ಫಾಶಿಸ್ಟರನ್ನು ಎದುರಿಸುವ ಸಂದರ್ಭದಲ್ಲಿ ಸಿನಿಕರಾಗಲೂಬಾರದು.

ಇಂತಹ ಸಂದರ್ಭದಲ್ಲಿ ಈ ಎಲ್ಲಾ ಬಗೆಯ ವಂಚನೆಯನ್ನು ಜನರೆದುರು ತೆರೆದಿಡುವುದಾಗಬೇಕಿದೆ. ಸಂಪನ್ಮೂಲ, ಒಳಗೊಂಡು ಹಲವಾರು ಮಿತಿಗಳ ನಡುವೆಯೂ ಕೋಮುವಾದಿಗಳು ಅಧಿಕಾರ ಹಿಡಿಯದಂತೆ ಪ್ರತಿರೋಧದ ರಾಜಕೀಯ ಹೋರಾಟ ನಡೆಯಬೇಕಿದೆ. ಜಾತ್ಯಾತೀತ ಸರ್ಕಾರ ರಚನೆಯಾಗಬೇಕಿದೆ.

ಹಾದುಹೋಗುವ ಹಾದಿಯಲ್ಲಿ....



ಎಸ್.ವೈ.ಗುರುಶಾಂತ್

ಕಳೆದೊಂದು ತಿಂಗಳ ಹಿಂದೆ ಮಂಗಳೂರಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದೆ. ದಶಕದ ನಂತರವೂ ಮರೀಚಿಕೆಯೇ ತಮ್ಮ ಪಾಲಿಗೆ ಎಂದೇ ಬಹುತೇಕರು ಭಾವಿಸಿ ಬಿಟ್ಟಿದ್ದ ರೈಲು ಬೆಂಗಳೂರು-ಮಂಗಳೂರು ನಡುವೆ ಓಡಿದಾಗ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ಅದೇ ಪ್ರೀತಿ, ಉತ್ಸುಕತೆಯನ್ನು ಬೋಗಿಯಲ್ಲಿದ್ದ ಸಹ ಪ್ರಯಾಣಿಕರು ತೋರಿದರು. ಬೆಳಗಿನ ಜಾವದಲ್ಲಿಯೇ ಹಳ್ಳಿಯ ಜನ ನಿಂತು ರೈಲಿಗೆ ಕೈ ಬೀಸಿ ಚಪ್ಪಾಳೆ ತಟ್ಟಿದರು. ಇಂತಹ ಭಾವನಾತ್ಮಕ ಸಂಬಂಧಗಳನ್ನು ಬೆಸೆದ ರೈಲು ಓಡಿಸದೇ ಸರ್ಕಾರ ಹಾಗೂ ಖಾಸಗಿ ಟ್ರಾವಲಿಂಗ್ ಲಾಬಿ ಅದೆಷ್ಟೋ ವರುಷಗಳು ಕಣ್ಣು ಮುಚ್ಚಾಲೆ ಮಾಡಿ ವಂಚಿಸಿದವಲ್ಲಾ ಎಂದು ಕೋಪ ಬಂತು. ಇರಲಿ, ಬೋಗಿಯಲ್ಲಿದ್ದ ಮಕ್ಕಳು, ಹಿರಿಯರು... ಎಲ್ಲರೂ ಖುಷಿ. ರೈಲಿನ ಗಾಲಿ ಉರುಳುತ್ತಿದ್ದಂತೆ ಆ ಉತ್ಸುಕತೆಯಲ್ಲೇ ಒಬ್ಬರನ್ನೊಬ್ಬರು ಪರಿಚಯಿಸಿಕೊಳ್ಳುವುದು ಸಾಗಿತು.

ಇಲ್ಲಿ ಜೊತೆಗಿದ್ದ ಕುಟುಂಬವೊಂದು ಟಿ.ಟಿ.ಇ.ಯ ಹಿಂದೆ ಸುತ್ತುವುದು ಕಂಡೆ. ಅವರಿಗೊಂದು ಬರ್ತ್ ಮಾತ್ರ ಸಿಕ್ಕಿತ್ತು. ಕನಿಷ್ಟ ಇನ್ನೊಂದಿದ್ದರೆ ಎರಡು ಮಕ್ಕಳನ್ನು ಹೇಗೋ ಅಡ್ಜೆಸ್ಟ್ ಮಾಡಿಕೊಳ್ಳಬಹುದೆಂದು ಪ್ರಯತ್ನಿಸುತ್ತಿದ್ದರು. ಕೊನೆಗೂ ಅದು ಸಿಕ್ಕಾಗ ಅವರಿಗೂ ಎಲ್ಲಿಲ್ಲದ ಖುಷಿ.

ಮರು ದಿನ ಬೆಳಿಗ್ಗೆ ಎದ್ದು ಸ್ವಲ್ಪ ಸಮಯವಾದಾಗ ಮತ್ತೆ -ಮಾತುಕತೆ, ನಿನ್ನೆ ಪರದಾಡಿದ್ದ ಕುಟುಂಬದ ಯುವಕನದೂ ಒಂದು ಪಾಲು. ಆದರೆ ಈ ಕಡೆ ಮಾತುಗಳು ಓಡಾಡಿದಾಗ ಬಹುತೇಕ ಪ್ರಶ್ನೆಗಳು ಬಿಜೆಪಿಗೆ ಅಧಿಕಾರ ವಂಚಿಸಲಾಗಿದೆ ಎಂಬುದು ಈ ಯುವಕನ ವಾದ, ವೈಖರಿ ನೋಡಿದಾಗ ಆತ ಸಂಘ ಪರಿವಾರದ ಕಟ್ಟಾ ಕಾರ್ಯಕರ್ತ ನೆಂಬುದಕ್ಕೆ ಅನುಮಾನವೇ ಇರಲಿಲ್ಲ. ಜೊತೆಗಿದ್ದ ಸಾಮಾನ್ಯರೂ ಕೂಡ ಅಂತಹುದೇ ವಾದ ಸಮರ್ಥನೆ ಹೂಡುತ್ತಿದ್ದರು. ಅವುಗಳಿಗೆ ಗಟ್ಟಿ ನೆಲೆಯಾಗಲೀ, ಹೋಗಲಿ ಸಹಜ ತರ್ಕವಾಗಲೀ ಇರುತ್ತಿರಲಿಲ್ಲ. ಆದರೆ ಕರಾವಳಿ ತೀರ ಎಷ್ಟೊಂದು ಕೋಮುವಾದದ ವೈರಸ್‌ಗೆ ಬಲಿಯಾಗಿದೆ ಎಂಬುದನ್ನು ಕಂಡು ಕೊಳ್ಳಬಹುದಿತ್ತು. ಅಷ್ಟು ಮಾತ್ರವಲ್ಲ. ಅದು ಅತ್ಯಂತ ಆಳಕ್ಕಿಳಿದಿರುವುದು. ನಾವು ಗ್ರಹಿಸದೇ ಹೋಗಿರುವ, ಗ್ರಹಿಸಬೇಕಾದ ಎಷ್ಟೋ ಸಂಗತಿಗಳು ಇವೆಯೆಂದು ತಿಳಿದಾಗ ಅಲ್ಲಿನ ಹಾಗೂ ಕರ್ನಾಟಕದ ಭವಿಷ್ಯದ ಬಗ್ಗೆ ಆತಂಕ ಹೆಚ್ಚಾಯಿತು.

ಕಾರ್ಯಕ್ರಮ ಮುಗಿದ ನಂತರ ಗೆಳೆಯ ಶಶಿಧರರವರು ದ್ವಿಚಕ್ರವಾಹನದಲ್ಲಿ ಬೋಳಾರಕ್ಕೆ ತಲುಪಿಸಲು ಹೊರಟರು. ಹಾದು ಹೋಗುವ ದಾರಿಯಲ್ಲೊಂದು ಉತ್ಸವ ಕಂಡೆವು. ನಿಂತು ನೋಡುವಾಗ ಅದು 'ನೇಮೋತ್ಸವ' ಅಲ್ಲಿ 'ಭೂತ' 'ಅರಾಧನೆ' ನಡೆಯುತ್ತಿತ್ತು. ಭೂತ ಮೈಮೇಲೆ ಬಂದಿದ್ದ (ಬರಿಸಿಕೊಂಡಿದ್ದ) ವ್ಯಕ್ತಿ ಕೋಳಿಗಳನ್ನು ಹಾಗೇ ಹಲ್ಲುಗಳಿಂದ ಕಿತ್ತು ರಕ್ತ ಕುಡಿದು ಹಸಿ ಮಾಂಸವನ್ನೇ ತಿನ್ನುತ್ತಿದ್ದುದು. ಯಾಕೋ ವಿಪರೀತ ಎನ್ನಿಸಿತ್ತು. ಕಿವಿಗಡಚಿಕ್ಕುವ ವಾದ್ಯ ಭೇರಿ ತಾಡನ ನಮ್ಮ ಭಾವನೆಗಳು ಚದುರದಂತೆ ಹಿಡಿದಿಡುತ್ತಿದ್ದವು ಅದೂ ಮರೆಯಾಗಿಸುತ್ತಿದ್ದವು.

ಭೂತ, ಕೋಲ, ದೆವ್ವ, ನೇಮ ಇತ್ಯಾದಿಗಳು ಕರಾವಳಿಯಲ್ಲಿ ಹೊಸದೇನಲ್ಲ. ಅವು ಅವರ ಜನಪದ ಸಂಸ್ಕೃತಿಯ, ಜೀವನದ ಅವಿಭಾಜ್ಯ ಅಂಗಗಳು.. ಬಹುತೇಕ ಇಂತಹವುಗಳು ವೈಯಕ್ತಿಕ ನೆಲೆಯಲ್ಲಿ ನಡೆಯುವಂತಹವು. ವ್ಯಾಪಕವಾಗಿ ಸಾಮೂಹಿಕ-ಸಾರ್ವಜನಿಕ ಸ್ವರೂಪದಲ್ಲಿ ಆಚರಿಸಲ್ಪಡುತ್ತಿವೆ. ನಾವು ನೋಡಿದ 'ನೇಮ' ವೂ ಹಾಗೆಯೇ...ಲಕ್ಷಾಂತರ ರೂ.ಗಳ ಬಜೆಟ್... ವಿಶೇಷವೆಂದರೆ ಇಂತಹ ಪ್ರತಿಯೊಂದರಲ್ಲಿಯೂ ಬಹುತೇಕ ಸಂಘ ಪರಿವಾರಗಳ ನೇತೃತ್ವವಿರುತ್ತದೆ. ಇವುಗಳನ್ನು ಅತ್ಯಂತ ಜಾಗರೂಕತೆಯಿಂದ ಬಳಸುತ್ತಾರೆ. ಸಣ್ಣಪುಟ್ಟ ಘಟನೆಗಳನ್ನು ಕೂಡ ಕೋಮು ಆಧಾರದಲ್ಲಿಯೇ ಅರ್ಥೈಸುವುದು, ಬೆಂಬಲಿಸುವುದು- ಅದು ಒಂದು ರಾಜಕೀಯ ಉದ್ದೇಶಕ್ಕೆ ಕೊಂಡೊಯ್ಯುವುದು.. ಎಲ್ಲವೂ 'ಶಿಸ್ತು ಬದ್ಧತೆ' ಸಮಾನತೆ ಇದು ಮಾತ್ರವಲ್ಲ. ಯಕ್ಷಗಾನ, ಕೃಷ್ಣ ಜನ್ಮಾಷ್ಟಮಿ, ಇತ್ಯಾದಿಗಳು.... ಹಾಗೆಯೇ ಕರಾವಳಿಯಲ್ಲಿ ಸಂಭವಿಸುವ ಪ್ರತಿಯೊಂದಕ್ಕೂ ಹತ್ತಾರು ವರುಷಗಳ ಅವಿರತ ಸಿದ್ಧತೆಯಿದೆ. ಸ್ವಾತಂತ್ರ್ಯ ಪೂರ್ವ ದಿಂದಲೇ ಅಲ್ಲಿ ಆರ್‌ಎಸ್‌ಎಸ್ ಕೆಲಸ ಮಾಡುತ್ತಿತ್ತು ಎಂಬುದು ಸಂಗತಿಗಳನ್ನು ಅರ್ಥೈಸಿ ಕೊಳ್ಳಲು ಸಹಾಯಕವಾದೀತು..

ಬೆಂಗಳೂರು



ಇದು ನೆನಪಾದದ್ದು ಯಾಕೆಂದರೆ... ಇತ್ತೀಚೆಗೆ ಬೆಂಗಳೂರಿನಲ್ಲಿ ಅತ್ಯಂತ ಸುಪ್ರಸಿದ್ಧವಾದ ಧರ್ಮರಾಯ ಕರಗ (ಬೆಂಗಳೂರು ಕರಗ) ನಡೆಯಿತು. ಈ ಕರಗ ಉತ್ಸವ ಅತ್ಯಂತ ಪ್ರಧಾನವಾದ ಹಬ್ಬ. ಬಹುತೇಕವಾಗಿ ವಹ್ನಿಕುಲ (ತಿಗಳರು) ದವರದ್ದೇ ಹಬ್ಬವಾದರೂ ಇತರೆ ಜಾತಿ-ಜನಾಂಗಗಳೂ ಇದನ್ನು ಆಚರಿಸುತ್ತಾರೆ.'ಕರಗ' ಹೊತ್ತವರು ಅಲ್ಲಿನ ದೇವಾಲಯಗಳಿಗೂ, ಮಸೀದಿ ದರ್ಗಾಗಳಿಗೂ ಭೇಟಿ ನೀಡಿ ಪರಸ್ಪರ ಗೌರವ ಸ್ವೀಕರಿಸಲಾಗುತ್ತದೆ. ಪೂಜಿಸಲಾಗುತ್ತದೆ. ಕೋಮು ಸಾಮರಸ್ಯ ಬೆಳೆಸುವ ಇಂತಹ ಹಬ್ಬಗಳೂ ಈಗಲೂ ಜೀವಂತ ವಾಗಿರುವುದು ಜನರ ಒಗ್ಗಟ್ಟು ಕಾಯುವಲ್ಲಿ ವಿಶಿಷ್ಟ ಕೊಡುಗೆ ನೀಡುವುದು ಗಮನಾರ್ಹ.

ಗಣತಂತ್ರ ಮತ್ತು ಮಮತಾಜ್ ಆಲಿಖಾನರ ಸಂಕಟಗಳು

ಪ್ರೊ. ಮಮತಾಜ್ ಅಲಿಖಾನ್ ಅನ್ನೋ ಅಂತ ಪುಣ್ಯಾತ್ಮರೊಬ್ಬರಿಗೆ ಎಲ್ಲ ಪತ್ರಿಕೆಗಳ ವಾಚಕರವಾಣಿ ಮತ್ತಿತರ ಅಂಕಣಗಳಿಗೆ ಪತ್ರ/ಲೇಖನ ಬರೆದು ಆರ್‌ಎಸ್‌ಎಸ್‌ನ್ನು, ಬಿಜೆಪಿಯನ್ನು ಅವರ ಸಿದ್ಧಾಂತವನ್ನು ಬೆಂಬಲಿಸುವುದೇ ಕೆಲಸ. ಬರೀ ಬರೆಯುವುದಲ್ಲ ಅವರು ಸಂಘ ಪರಿವಾರದ ಸಭೆ ಸಮಾರಂಭಗಳಲ್ಲಿ ಪಾಲ್ಗೊಂಡು ಅಲ್ಪಸಂಖ್ಯಾತರು ಯಾರೂ ಆರ್‌ಎಸ್‌ಎಸ್ ಬಗ್ಗೆ ಹೆದರಬೇಕಿಲ್ಲ ಅಂತಲೂ ಮತ್ತು ಎಲ್ಲರೂ ಸಂಘ ಪರಿವಾರದ ಕಾರ್ಯಕ್ರಮ-ವಿಚಾರಗಳನ್ನು ಬೆಂಬಲಿಸಬೇಕು ಅಂತಲೂ ಆರ್‌ಎಸ್‌ಎಸ್ ಪರವಾಗಿ ಪುಂಗಿ ಊದುತ್ತಿರುತ್ತಾರೆ.

ಸದ್ಯಕ್ಕೆ ವಿಷಯ ಏನಪ್ಪಾ ಅಂದ್ರೆ. 'ಜಗತ್ತಿನ ಏಕೈಕ ಹಿಂದೂ ರಾಷ್ಟ್ರ'ವಾಗಿದ್ದ ನೇಪಾಳದಲ್ಲಿ ಆಗಿರೋ ಬೆಳವಣಿಗೆಯಿಂದ ಅವರ ಮನಸ್ಸಿಗೆ ಬಹಳ ನೋವಾಗಿದೆಯಂತೆ. ಒಂದು ತಿಂಗಳೊಳಗಾಗಿ ಅರಮನೆ ಖಾಲಿ ಮಾಡಿ ಅಂತ ಅಲ್ಲಿಯ ರಾಜನಿಗೆ ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದವರು ಹೇಳಿದರೆ ಅದರಿಂದ ಇವರಿಗೆ ದುಃಖವೋ ದುಃಖ. ಅಲ್ಲಿದ್ದದ್ದು ಹಿಂದೂ ರಾಷ್ಟ್ರ ಅಂತೆ. ಅಲ್ಲಿ ಅಲ್ಪಸಂಖ್ಯಾತರು ಬಹುಸಂಖ್ಯಾತರು ಅನ್ಯೋನ್ಯವಾಗಿದ್ದರಂತೆ.

ಅಲ್ಲಿ ಎಲ್ಲಾ ಚೆನ್ನಾಗಿದ್ದಿದ್ದರೆ ಪ್ರಾಣದ ಹಂಗು ತೊರೆದು ಲಕ್ಷ ಲಕ್ಷ ಜನ ಯಾಕೆ ಬೀದಿಗೆ ಬರ್‍ತಾ ಇದ್ರು ರಾಜ ಪ್ರಭುತ್ವದ ವಿರುದ್ಧ!? ಇದ್ದ ಜಗತ್ತಿನ ಏಕೈಕ ಹಿಂದೂ ರಾಷ್ಟ್ರವನ್ನು ಜನತೆ ಕಿತ್ತೊಗೆಯಬೇಕಾದರೆ ಅದಕ್ಕೆ ಕಾರಣವಾದರೂ ಏನೂ ಅಂತ ಯೋಚಿಸುವ ಶ್ರಮವನ್ನೇ ತೆಗೆದುಕೊಳ್ಳಲಿಲ್ಲ ಖಾನ್ ಸಾಹೇಬರು. ನಾವೂ ಅದನ್ನೇ ಮಾಡಬೇಕು ಅಂತಾರೆ.

ನೇಪಾಳ ಒಂದು ಆಧುನಿಕ ಗಣತಂತ್ರವಾಗುವ ಕಡೆಗೆ ಹೆಜ್ಜೆ ಇಡುತ್ತಾ ಇದ್ದರೆ, 'ನೇಪಾಳ ತಾಲಿಬಾನರ ವಶಕ್ಕೆ ಹೋಗುತ್ತಿದೆ' ಅನ್ನುತ್ತಾರೆ. ಹಿಂದೂ ತಾಲಿಬಾರರ ಬಗ್ಗೆ ಎಂದೂ ಮಾತನಾಡದ ಮಮತಾಜ್‌ರಿಗೆ ಜನ ನಿಜಕ್ಕೂ ಮಾವೋವಾದಿಗಳಿಗೆ ಮತ ನೀಡಿದರೆ ಅಂತ ಅನುಮಾನ.

ನೇಪಾಳದ ಬೆಳವಣಿಗೆಯಿಂದ ಸಂಘ ಪರಿವಾರಕ್ಕೆ ಏನು ಸಂಕಟ ಆಗಿದೆಯೋ ಪಾಪ ಅದೇ ಸಂಕಟ ಮಮತಾಜ್ ಅಲಿ ಖಾನ್‌ರಿಗೂ ಆಗಿದೆ. ಸಂಘ ಪರಿವಾರ ಹೇಗೆ ಪ್ರಜಾಪ್ರಭುತ್ವಕ್ಕೆ ವಿರುದ್ಧ ಇದೆ. ಅನ್ನೊದಕ್ಕೆ ಇದೇ ಸಾಕ್ಷಿ.

ಇಲ್ಲಿ ಇನ್ನೊಂದು ವಿಶೇಷ ವಿಷಯ ಇದೆ ಗಮನಿಸಿ. ಶಸಸ್ತ್ರ ಹೋರಾಟದ ಹಾದಿ ತೊರೆದು ಪ್ರಜಾಸತ್ತಾತ್ಮಕವಾದ ಚುನಾವಣೆ ಮೂಲಕ ಗೆದ್ದು ಬಂದಿರೋ ಮಾವೋವಾದಿಗಳನ್ನು ಇವರು ಭಯೋತ್ಪಾದಕರು ಅಂತಾರೆ. ಅಗೋ ಅಮೇರಿಕಾದವರೂನೂ ಅದನ್ನೇ ಹೇಳ್ತಿದ್ದಾರೆ.

ಸಂಘ ಪರಿವಾರದ ಆಲೋಚನೆಗೂ ಅಮೇರಿಕಾದ ಆಲೋಚನೆಗೂ ಎಷ್ಟೊಂದು ಹೋಲಿಕೆ ಇದೆ. ಅಲ್ವಾ!

ಇದೇಕೆ ಹೀಗೆ?

ಇದು ಚುನಾವಣೆ ಭರಾಟೆಯ ಕಾಲ. ಸೀರೆ, ಮೂಗುತಿ, ಪಾಕೀಟು, ನೋಟು ಹಂಚೋ ಕಡೆ, ಹಲವಾರು ಕಡೆ ನೂಕು ನುಗ್ಗಲು ಅಂತ ವರದಿ ಕೇಳಿ ಬರ್‍ತಾ ಇದೆ.

ಇಂಥ ಸುದ್ದಿ ಕೇಳಿದಾಗೆಲ್ಲಾ ನಮಗೆ ನೆನಪಾಗೋದು ಕಳೆದ ಲೋಕಸಭಾ ಚುನಾವಣೆಗೆ ಮುಂಚೆ ಸನ್ಮಾನ್ಯ ವಾಜಪೇಯಿಯವರ 'ಜನ್ಮದಿನ'ದ ಅಂಗವಾಗಿ ಸೀರೆ ಹಂಚುವಾಗ ಉಂಟಾದ ಕಾಲ್ತುಳಿತಕ್ಕೆ ಸುಮಾರು 25 ಜನ ಮಹಿಳೆಯರು ಬಲಿಯಾದರಲ್ಲ ಅದು.

ಈಗ ಇಲ್ಲೊಂದು ದುರ್ಘಟನೆ ನಡೆದಿದೆ. ಇದು ಚುನಾವಣೆ ಸಮಾಚಾರ ಅಲ್ಲ. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ವರ್ದಯ ಪಾಳೆಂ ಅನ್ನೋ ಜಾಗದಲ್ಲಿ ಕುಡಿಯುವ ನೀರಿಗಾಗಿ ತಳ್ಳಾಟ ನಡೆದು ಕಾಲ್ತುಳಿತದಲ್ಲಿ 5 ಜನ ಜೀವ ಕಳೆದುಕೊಂಡಿದ್ದಾರೆ. ಅದು ಕಲ್ಕಿ ಭಗವಾನರ ಐಕ್ಯತಾ ವಿ.ವಿ.ಯ ಉದ್ಘಾಟನಾ ಸಮಾರಂಭ. ದೇವಮಾನವ 'ಕಲ್ಕಿ ಭಗವಾನ್'ರು ಜನರಿಗೆ ದರ್ಶನ ಕೊಡೋ ಕಾರ್ಯಕ್ರಮ ಇದ್ದಿದ್ದರಿಂದ ಅಲ್ಲಿ ಜನ ಪರಿಷೆ ಸೇರಿತ್ತಂತೆ!!

ಏನು ದುರಂತ ಇದು. ತಮ್ಮ ಸ್ವಂತ ನೆಲೆಯಲ್ಲೇ ನಡೆಯುವ ದುರಂತವನ್ನು ತಡೆಯಲಾರದವರು, ಅರಿಯಲಾರದವರು ದೇವಮಾನವರು, ಭಗವಾನರು ಹೇಗಾದರು. ಹೇಗಾದಾರೂ?

ಇದೇ ಆಂಧ್ರದಲ್ಲಿ ಹಿಂದೆ ಒಂದು ಘಟನೆ ನಡೆದಿತ್ತು. ವಿಪರೀತವಾದ ಸಾಲದಿಂದಾಗಿ ಮಾನಸಿಕ ಒತ್ತಡದಿಂದ ಕಂಗೆಟ್ಟ ಕುಟುಂಬವೊಂದು ಕಂಡ ಕಂಡ ದೇವರಿಗೆ ಮೊರೆ ಇಟ್ಟರು ಪ್ರಯೋಜನವಾಗಲಿಲ್ಲ. ಆಗ ಅವರಿಗೆ ನೆನಪಾಗಿದ್ದು ನಡೆದಾಡುವ ದೇವರು ಸಾಯಿಬಾಬಾ, ಅವರನ್ನು ಕಾಣಲೆಂದು ಹುಡುಕುತ್ತಾ ದಣಿದು ಆಶ್ರಮಕ್ಕೆ ಬಂದರು. ಆದರೆ ಅವರಿಗೆ ಆಶ್ರಮದೊಳಕ್ಕೆ ಪ್ರವೇಶವೇ ಸಿಗಲಿಲ್ಲ. ಇದರಿಂದ ಮತ್ತಷ್ಟು ನೊಂದ ಇಡೀ ಕುಟುಂಬ ಅಲ್ಲೇ, ಆತ್ಮಹತ್ಯೆಗೆ ಶರಣಾಗಿ ಹೋಯಿತು. ಏನೆಲ್ಲಾ ಪವಾಡ ಮಾಡುವ ದೇವಮಾನವರು, ಪವಾಡ ಪುರುಷರುಗಳಿಗೆ ತಮ್ಮ ಸ್ವಂತ ಕ್ಷೇತ್ರದಲ್ಲಿನ, ತಮ್ಮ ಕಾಲ ಬುಡದಲ್ಲಿರುವ ಸ್ವಂತ ಭಕ್ತರ ಹತಾಶೆ ಅರ್ಥವೇ ಆಗಲಿಲ್ಲ. ಇಂಥವರು ಲೋಕವನ್ನು ಉದ್ಧಾರ ಮಾಡುವುದು ಉಂಟೇ?

ಏನು ಮಾಯೇಯೋ?

ಇದೇನು ಮಾಯೇಯೋ, ಇದೇನು ಮರ್ಮವೋ! ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಮುಂತಾದ ಪಕ್ಷಗಳ ಅಭ್ಯರ್ಥಿಗಳು ಘೋಷಿಸಿರುವ ಆಸ್ತಿಪಾಸ್ತಿ ವಿವರ ನೋಡಿದರೆ ಆಶ್ಚರ್ಯವಾಗುತ್ತದೆ. ಕೋಟಿ ಕೋಟಿಗಳಿಗೆ ಲೆಕ್ಕವೇ ಇಲ್ಲ. ಒಬ್ಬೊಬ್ಬರದೂ ನೂರಾರು ಕೋಟಿಗಳ ಆಸ್ತಿ ಪಾಸ್ತಿ. ಅಧಿಕೃತವಾಗಿ ಘೋಷಿಸಿರುವುದೇ ಇಷ್ಟು. ಇನ್ನು ಹೇಳದ, ಘೋಷಿಸದ, ಬೇನಾಮಿ ಹೆಸರಿನ ಆಸ್ತಿ ಪಾಸ್ತಿ ಎಷ್ಟು ಎಂದು ಯಾರೂ ಕೇಳುವಂತಿಲ್ಲ. ಸುಮ್ಮನೆ ಊಹಿಸಿಕೊಳ್ಳ ಬೇಕಷ್ಟೆ.

ಬೆಂಗಳೂರಿನ ಬೊಮ್ಮನಹಳ್ಳಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕುಪೇಂದ್ರರೆಡ್ಡಿಯವರ ಘೋಷಿತ ಆಸ್ತಿ. 180.53 ಕೋಟಿ, ಎಂ.ಆರ್.ಸೀತಾರಾಂ 109.79 ಕೋಟಿ, ಕ್ಷೇತ್ರ ಮಲ್ಲೇಶ್ವರ, ವಿಜಯನಗರ ಕ್ಷೇತ್ರದ ಎಂ.ಕೃಷ್ಣಪ್ಪ ಅವರ ಆಸ್ತಿ ಕೇವಲ 94.34 ಕೋಟಿಗಳು ಮಾತ್ರ. ಗೋವಿಂದರಾಜನಗರ ಕ್ಷೇತ್ರದ ಅಭ್ಯರ್ಥಿ ಸೋಮಣ್ಣ ಅವರ ಕುಟುಂಬದ ಆಸ್ತಿ 21.16 ಕೋಟಿ ಮಾತ್ರ.

ಈ ವಿಷಯದಲ್ಲಿ ಭಾರತೀಯ ಜನತಾಪಕ್ಷ ಬಿಜೆಪಿಯ 'ದಾಖಲೆ'ಯನ್ನೂ ಕಮ್ಮಿ ಇಲ್ಲ. ಚಿಕ್ಕಪೇಟೆಯ ಬಿಜೆಪಿ ಅಭ್ಯರ್ಥಿ ಹೇಮಚಂದ್ರಸಾಗರ್ ಅವರ ಆಸ್ತಿ 71.06 ಕೋಟಿ. ಇನ್ನು ಗಣಿ ದೊರೆಗಳಾದ ಜನಾರ್ಧನ ರೆಡ್ಡಿ, ಶ್ರೀರಾಮುಲು, ಕಟ್ಟಾ ಮೊದಲಾದವರ ಆಸ್ತಿಪಾಸ್ತಿ ವಿಷಯ ಭಾರಿ ಜನಜನಿತ.


ಇನ್ನು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಆಸ್ತಿ 49.72 ಕೋಟಿ ಮಾತ್ರ. ಆದರೆ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಗಳ ವಿವರ ಕೇಳಿದರೆ ಕಮ್ಯುನಿಸ್ಟ್ ಚಳುವಳಿಯ ಪರಿಚಯವಿರದವರು ಹೀಗೂ ಉಂಟೇ ಅಂತ ಮೂಗಿನ ಮೇಲೆ ಬೆರಳಿಡುತ್ತಾರೆ. ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಕ್ಷೇತ್ರದ ಅಭ್ಯರ್ಥಿ ತಂಗರಾಜು ಅವರ ಆಸ್ತಿ ವಿವರ ನೋಡಿ, ಸ್ವಂತ ಮನೆ ಇಲ್ಲ. ವಾಹನ ಇಲ್ಲ. ಆದಾಯವೂ ಹೆಚ್ಚು ಇಲ್ಲ. ಅವರು ಕಮ್ಯುನಿಸ್ಟ್ ಪಕ್ಷ ಪೂರ್ಣಾವಧಿ ಕಾರ್ಯಕರ್ತರು. ಪೂರ್ಣಾವಧಿ ಕಾರ್ಯಕರ್ತ ವೇತನ ಇನ್ನು ಮೇಲೆ ಸಿಗಬೇಕಿದೆ ಅಷ್ಟೇ. ಈಗ ಸಿಗುತ್ತಿಲ್ಲ. ಇದು ಒಂದು ಉದಾಹರಣೆ ಅಷ್ಟೇ.

ಚಿಕ್ಕ ಚಿಕ್ಕ ಆಸೆ

ಕಾಂಗ್ರೆಸ್‌ನ ಪ್ರಣಾಳಿಕೆಯು ಮೊದಲ ಎಪಿಸೋಡ್ ಪ್ರಸಾರವಾಗಿದೆ. ಬಡವರಿಗೆ ಬಣ್ಣದ ಟೀವಿ. ಎರಡು ರೂಪಾಯಿಗೆ ಕೆ.ಜಿ. ಅಕ್ಕಿ ಇತ್ಯಾದಿ. ಇದು ರೀಮೇಕ್ ಪ್ರಣಾಳಿಕೆ, ಡಬ್ಬಿಂಗ್ ಪ್ರಣಾಳಿಕೆ ಅಂತ ವಿರೋಧಿಗಳು ಹೇಳಿದ್ದಾಯ್ತು. ಏನೇ ಆಗ್ಲಿ ಕಾಂಗ್ರೆಸ್‌ನೋರು ಸ್ವಲ್ಪ ಚುರುಕಾಗಿ ಬಿಟ್ಟಿದಾರೆ. ಯಾವ್ದಾದ್ರೂ ಪಾಯಿಂಟ್ ಕೇಳಿ ಅದು ಯಾಕ್ರೀ ಇಲ್ಲ ನಿಮ್ಮ ಪ್ರಣಾಳಿಕೆಯಲ್ಲಿ ಅಂದ್ರೆ, ಇದಿನ್ನೂ ಪ್ರಣಾಳಿಕೆಯ ಮೊದಲ ಕಂತು, ಮುಂದೆ ಕಾದು ನೋಡಿ ಅಂತಾರೆ. ಟೀವಿ ಧಾರಾವಾಹಿಯಂತೆ ಪ್ರಣಾಳಿಕೆಯನ್ನೂ ಅದಷ್ಟು ದೀರ್ಘವಾಗಿ ಎಳೆಯುವ ಬುದ್ಧಿವಂತಿಕೆ! ನಮ್ಮ ಪ್ರಣಾಳಿಕೆಯನ್ನು ಕಾಂಗ್ರೆಸ್‌ನೋರು ಕದ್ದು ಬಿಡ್ತಾರೆ ಅಂತ ದೇವೇಗೌಡರು ಅವರ ಪ್ರಣಾಳಿಕೆಯನ್ನು ಸಿಕ್ರೇಟ್ ಆಗಿ ಇಟ್ಟುಕೊಂಡಿದ್ದಾರಂತೆ.

ನೋಡಿ ಎಲ್ಲಿಗೆ ಬಂತು ಪರಿಸ್ಥಿತಿ! ಪತ್ರಿಕೆಗಳಲ್ಲಿ ಹಾಸ್ಯ ಲೇಖನ. ವಿಡಂಬನೆ ಬರೆಯುವವರಿಗೆ ಅವಕಾಶವೇ ಇಲ್ಲ. ಪತ್ರಿಕೆಗಳ ತುಂಬಾ ಇಂಥದ್ದೆ ಕಾಮಿಡಿಗಳು! ಅಲ್ಲ ಮಾತಿಗೆ ಹೇಳ್ತಿನಿ. ಅಷ್ಟು ಸುಲಭವಾಗಿ ಕದಿಯೋಕೆ ಅದೇನು ಯಡಿಯೂರಪ್ಪನ ಚಡ್ಡಿನೇ? (ಯಾರೋ ನನ್ನ ಚಡ್ಡಿ ಕದ್ದು ಮಾಟ ಮಾಡಿದ್ದಾರೆಅಂತ ಯಡ್ಡಿ ಅತ್ತದ್ದು ನೆನಪಿದೆ ತಾನೆ!)

ಸದಾ ಪ್ರಚಾರದಲ್ಲಿ, ಬಣ್ಣ ಬಣ್ಣದ ಪ್ರಣಾಳಿಕೆ ತರುವಲ್ಲಿ ಎಲ್ಲರಿಗಿಂತ ಮುಂಚೆ ಇರುತ್ತಿದ್ದ ಬಿಜೆಪಿಯವರು ಬಣ್ಣದ ಟೀವಿ ನೋಡಿ, ಫ್ಲಾಟ್ ಆಗಿದ್ದಾರೋ ಅಥವಾ ಟಿಕೆಟ್/ಬ್ಲಾಕ್ ಟಿಕೆಟ್ ಮಾರಾಟದಲ್ಲಿ ಬಿಸಿಯಾಗಿ ಬಣ್ಣದ ಪ್ರಣಾಳಿಕೆ ತಯಾರಿಸುವುದು ತಡವಾಗಿದೆಯೋ ಗೊತ್ತಿಲ್ಲ. ಒಂದು ಟಿಕೆಟ್‌ಗೆ ಕೆಲವರು 20 ಲಕ್ಷ ಅಂತಿದ್ದಾರೆ. ಇನ್ನೂ ಕೆಲವರು 50 ಲಕ್ಷ ಅಂತಿದ್ದಾರೆ. ವಾರೆ ವಾಹ್! ದೇಶ ಭಕ್ತಿ ಅಂದ್ರೆ ಇದು. ಬರೀ ಟಿಕೆಟ್‌ಗೆ ಇಷ್ಟಾದ್ರೆ ಇನ್ನು ಎಂ.ಎಲ್.ಎ. ಬೆಲೆ ಎಷ್ಟಾಗಬಹುದು? ಹರಾಜಾದ ಧೋನಿ ಗೀನಿ ಎಲ್ಲ ನಮ್ಮ ಎಂ.ಎಲ್.ಎ.ಗಳ ಮುಂದೆ ಬಹಳ 'ಚೀಪ್' ಆಗಿ ಬಿಡಬಹುದು.



ಬಿ.ಜೆ.ಪಿ.ಯವರು ಅದೇನೋ ಗುಜರಾತ್ ಮಾದರಿ ಅಂತಿದ್ರು. ಟಿಕೆಟ್ ಮಾರಾಟ ಗುಜರಾತ್ ಮಾದರಿ ಹೌದೋ ಅಲ್ವೋ ತಿಳಿತಿಲ್ಲ. ಮೋದಿಗೆ ಬಿಜೆಪಿ ಟಿಕೆಟ್ ಇಷ್ಟು ಒಳ್ಳೆ ರೇಟಿಗೆ ಮಾರಾಟ ಆಗ್ತಿರೋದು ನೋಡಿ ಹೊಟ್ಟೆ ಉರುಸ್ಕೊತಿರಬಹುದು. ಮುಂದಿನ ಬಾರಿ ಗುಜರಾತ್‌ನಲ್ಲಿ 'ಕರ್ನಾಟಕದ ಮಾದರಿ' ಟಿಕೆಟ್ ಮಾರಾಟ ಮಾಡಬಹುದು!

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ರೆಸಾರ್ಟ್ ರಾಜಕೀಯ ಶುರು ಮಾಡಿದರು. ಅದರಂತೆ ಬಿಜೆಪಿ ಕಾಂಗ್ರೆಸ್‌ನೋರೆಲ್ಲ ರೆಸಾರ್ಟ್‌ಗೆ ಹೋಗಿ ಟಿಕೆಟ್ ರಾಜಕೀಯ ಮಾಡ್ತಿದ್ದಾರೆ. ಆದ್ರೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಮಾತ್ರ ಪುರುಸೊತ್ತಿನಲ್ಲಿ ಗ್ರಾಮ ವಾಸ್ತವ್ಯ ಮಾಡ್ತಿದ್ದಾರೆ. ಅವರ ಪಿತಾಶ್ರೀಯವರ ಹಾರೈಕೆ / ಕನಸಿನಂತೆ ಅತಂತ್ರ ವಿಧಾನಸಭೆ ಆದರೆ ಆಗ ಮತ್ತೆ ಇವರ ರೆಸಾರ್ಟ್ ರಾಜಕೀಯ ಶುರುವಾಗಬಹುದು.

ಟಿಕೆಟ್ ಸಿಗದೋರ ಬಂಡಾಯ ಬಿಜೆಪಿಯಲ್ಲಿ ಜೋರಾಗಿದೆ. ಶಿಸ್ತಿನ ಪಕ್ಷವಲ್ಲವೇ ಅದು! ಏನ್ರೀ ಇಷ್ಟೊಂದು ಬಂಡಾಯ ಅಂತ ಕೇಳಿದ್ರೆ. ಕಾಂಗ್ರೆಸ್‌ನಲ್ಲೂ ಬಂಡಾಯ ಆಗುತ್ತೆ ನೋಡ್ತಿರಿ ಅಂದರು ಮಾಜಿ ಮುಖ್ಯಮಂತ್ರಿ ಯಡ್ಯೂರಪ್ಪನವರು. ಛೇ ಎಂಥಾ ಸ್ಥಿತಿ! ನಮ್ಮದು ಹೋರಾಟಗಾರರ ಪಕ್ಷ ಅದಕ್ಕೆ ಬಂಡಾಯ ಜಾಸ್ತಿ ಅಂತನಾದ್ರೂ ಹೇಳ್ಬೋದಾಗಿತ್ತು. ಅದು ಬಿಟ್ಟು ಕಾಂಗ್ರೆಸ್ ಬಿಜೆಪಿ ಎರಡೂ ಒಂದೇ ಅಂತ ಅವರೇ ಒಪ್ಪಿಕೊಂಡರಲ್ಲ.

ಈಗ ಬಂಡಾಯವಿಲ್ಲದ ಶಿಸ್ತಿನ ಪಕ್ಷ ಅಂದ್ರೆ ಡಿ.ಕೆ.ಆರ್.ಮಾತ್ರ! ಕರ್ನಾಟಕದಲ್ಲಿ ಹೊಸ ಹೊಸ ಪಕ್ಷಗಳು ರಂಗಗಳೂ ಹುಟ್‌ಕೊತಿವೆ. ಇದ್ಯಾವುದೂ ಹೊಸ ಪಕ್ಷ ಅಂತ ತಲೆ ಕೆರೆಯಬೇಡಿ. ಅದು ರಾಷ್ಟ್ರೀಯ ಅಧ್ಯಕ್ಷರನ್ನು ಹೊಂದಿರುವ ಪ್ರಾದೇಶಿಕ ಪಕ್ಷ. ಪ್ರಾದೇಶಿಕ ಪಕ್ಷವಾದ್ದರಿಂದ ಕನ್ನಡದಲ್ಲಿ ಹೇಳಿದರೆ ನಿಮಗೆ ಗೊತ್ತಾಗಬಹುದು. ಅದು ದೇ.ಕು.ರೇ ಪಕ್ಷ! ಇದರಲ್ಲಿ ಬಂಡಾಯಕ್ಕೆ ಸ್ವಲ್ಪವೂ ಅವಕಾಶವಿಲ್ಲ.

ಸ್ವಲ್ಪ ಆದರ್ಶಗಳನ್ನು ಉಳಿಸಿಕೊಂಡಿರುವ ಪಕ್ಷ ಅದು. ಆದರ್ಶ ಏನಪ್ಪ ಅಂದ್ರೆ. ತಮ್ಮ ಪಕ್ಷಕ್ಕೆ ಬಹುಮತ ಬರಬೇಕು ಅಂತ ದುರಾಸೆ ಇಲ್ಲ. ಬೇರೆ ಪಕ್ಷಗಳಿಗೆ ಬಹುಮತಕ್ಕೆ ಸ್ವಲ್ಪ ಕಡಿಮೆ ಬರಲಿ. ಅದನ್ನು ಭರಿಸುವಷ್ಟು ಸೀಟುಗಳು ಮಾತ್ರ ತಮ್ಮ ಪಕ್ಷಕ್ಕೆ ಸಾಕು ಎಂಬ ಚಿಕ್ಕ ಆಸೆ! ಎಲ್ಲ ಸಾಧುಸಂತರೂ, ದಾರ್ಶನಿಕರೂ, ಮಹಾತ್ಮರೂ ಚಿಕ್ಕ ಚಿಕ್ಕ ಆಸೆಪಡೋದು ತಪ್ಪಲ್ಲ, ದುರಾಸೆಪಡುವುದು ತಪ್ಪು ಅಂತ ತಾನೇ ಹೇಳೋದು?

ಬಳ್ಳಾರಿ : ಹಣ ದೈತ್ಯರ ಹಣಾಹಣಿ

ಯು.ಬಸವರಾಜು

ಗಣಿ ಕಾಂಚಾಣದ ರುದ್ರ ನರ್ತನ: ಎಲ್ಲೆಡೆ ಬೇಸಿಗೆ ಕಾಲವಿದ್ದರೇ, ಬಳ್ಳಾರಿಯಲ್ಲಿನ ಬಿರು ಬೇಸಿಗೆ. ಜನತೆಗೆ ಕೆಂಡದ ಮಳೆ ಹೊಯ್ದು ಅನುಭವ. ಇದರೊಂದಿಗೆ ಗಣಿಗಾರಿಕೆ ಹಾಗೂ ಅದರಿಂದಾಗಿ ಹಾಳಾದ ಹೆದ್ದಾರಿಗಳ ವಿಪರೀತ ದೂಳಿನ ಯಮ ಹಿಂಸೆ ಬೇರೆ. ನೀರೊಳಗೆ ಮಲಗಿರಬೇಕಾದ ಒತ್ತಡ. ವಿಪರೀತ ನೀರು ಬೇಡುವ ಈ ಕಾಲದಲ್ಲಿ ಬಳ್ಳಾರಿ ನಗರದಲ್ಲಿನ ಬಿಜೆಪಿ ನಗರ ಪಾಲಿಕೆ ದಯದಿಂದ 3 ದಿನಗಳಿಗೊಂದು ಗಂಟೆ ನೀರು ಮಾತ್ರ!

ಬಿಡಿ, ಇದಾವುದು ಈಗ ರಾಜ್ಯದ ಗಮನ ಸೆಳೆದ ವಿಚಾರವಲ್ಲ. ರಾಜ್ಯದಾದ್ಯಂತ ಚುನಾವಣೆ ಬಿಸಿ ಏರುತ್ತಿರುವಾಗ, ಬಳ್ಳಾರಿಯ ಗಣಿ ಬಂಡವಾಳ ಅದರ ಅಟ್ಟಹಾಸ ಮುಗಿಲು ಮುಟ್ಟಿದ ಅಹಂಭಾವದ ಪರಾಕಾಷ್ಠೆ, ರಾಜ್ಯದ ಗಮನ ಸೆಳೆದ ವಿಚಾರವಾಗಿದೆ. ಮಾಜಿ ಶಾಸಕ ಅನಿಲ್ ಲಾಡ್ ಅವರಿಗೆ ಬೆದರಿಕೆ ಹಾಕಿ ಮನೆ ಮೇಲೆ ದಾಳಿ ನಡೆಸಿದ ಮಾಜಿ ಸಚಿವ ಶ್ರೀರಾಮುಲು ಮತ್ತವರ ಬೆಂಬಲಿಗರ ದಾಳಿ ಹಾಗೂ ಬಳ್ಳಾರಿಯೆಡೆಗೆ ಹರಿದು ಬರುವಾಗ ರಾಜ್ಯದ 2 ಮೂಲೆಗಳಲ್ಲಿ ಸಿಕ್ಕಿಬಿದ್ದ 11 ಕೋಟಿಯಷ್ಟು ಹಣ. ಮೊನ್ನೆ ನಡೆದ ಈ 2 ಪ್ರಕರಣಗಳನ್ನು ಈ ನೆಲೆಯಲ್ಲಿ ಗುರುತಿಸಬಹುದಾಗಿದೆ.

> ಬಳ್ಳಾರಿಯ ರಾಜಕೀಯ ರಾಜ್ಯದ ಗಮನ ಸೆಳೆದಿದೆ. ಬಳ್ಳಾರಿಯ ರಾಜಕಾರಣಿಗಳು ಅದರಲ್ಲೂ ಬಿಜೆಪಿಯ ಗಣಿ ಗ್ಯಾಂಗ್ ಇಡೀ ರಾಜ್ಯ ರಾಜಕಾರಣವನ್ನೇ ನಿಯಂತ್ರಿಸಲು ತವಕಿಸುತ್ತಾರೆ. ಈ ಅಹಂಭಾವ, ದಾಷ್ಟ್ರದ ಮೂಲ ಏನು? ಏನಿದೆ ಈಗ ಜಿಲ್ಲೆಯ ರಾಜಕೀಯ ಪರಿಸ್ಥಿತಿ.

ರೆಡ್ಡಿ ಪಡೆದ ಗುತ್ತಿಗೆ

ಬಳ್ಳಾರಿ ಜನಾರ್ಧನ ರೆಡ್ಡಿ ಪಕ್ಷ (ಬಿಜೆಪಿ) ಈಗ ಬಳ್ಳಾರಿ, ರಾಯಚೂರು, ಕೊಪ್ಪಳ, ದಾವಣಗೆರೆ, ಚಿತ್ರದುರ್ಗ, ಗದಗಜಿಲ್ಲೆಯಲ್ಲಿ ನೇರ ಬಂಡವಾಳ ಹೂಡಿ ಕನಿಷ್ಠ 35 ಸ್ಥಾನಗಳಲ್ಲಿ ಬಿಜೆಪಿ ಗೆಲ್ಲಿಸಲು ಕಾಂಟ್ರಾಕ್ಟ್ ಪಡೆದಿದೆ. ಕಾರ್ಪೋರೇಟ್ ಕಂಪನಿ ಮಾದರಿಯಲ್ಲಿ ಕೆಲಸ ಮಾಡುವ ಈ ಪಕ್ಷಕ್ಕೆ ಚುನಾವಣಾ ಆಯೋಗ ವಿಧಾನಸಭಾ/ಪಾರ್ಲಿಮೆಂಟ್ ಕ್ಷೇತ್ರಗಳನ್ನು ಪುನರ್ ವಿಂಗಡಣೆಗೊಳಪಡಿಸಿ, ಈ ಆರು ಜಿಲ್ಲೆಗಳಲ್ಲಿ 3 ಜಿಲ್ಲೆಗಳಾದ ಚಿತ್ರದುರ್ಗ ಬಳ್ಳಾರಿ, ರಾಯಚೂರು ಜಿಲ್ಲೆಗಳ ಹೆಚ್ಚಿನ ಸ್ಥಾನಗಳನ್ನು ಎಸ್‌ಸಿ ಎಸ್‌ಟಿ ಮೀಸಲು ಸ್ಥಾನಗಳಾಗಿ ಘೋಷಿಸಿರುವುದು ವರದಾನವಾಗಿದೆ. ಅದೇ ರೀತಿ ಕೊಪ್ಪಳ -ಗದಗ-ದಾವಣಗೆರೆ ಜಿಲ್ಲೆಗಳು ಹಿಂದುಳಿದ ಪ್ರದೇಶಗಳಾಗಿವೆ ಮಾತ್ರವಲ್ಲ, ಪೋಟಿ ನೀಡಬಲ್ಲ ಬಂಡವಾಳಗಾರರು ಅಲ್ಲಿ ಅಷ್ಟಾಗಿ ಇಲ್ಲದಿರುವುದರಿಂದ ಈ ಪ್ರದೇಶ ಸುಲಭದ ತುತ್ತಾಗಿದೆಯೆಂದು ಭಾವಿಸಲಾಗಿತ್ತು.


ಜನಾರ್ಧನ ರೆಡ್ಡಿ

ಜನಾರ್ಧನ ರೆಡ್ಡಿಯವರು ಬಿಜೆಪಿಯನ್ನು ಗೆಲ್ಲಿಸಿಕೊಡುವುದಾಗಿ ಕೇಳಿದ್ದು ಉತ್ತರ ಕರ್ನಾಟಕದ ಎಲ್ಲಾ 100 ಕ್ಷೇತ್ರಗಳನ್ನು, ಆದರೆ ಬಿಜೆಪಿಯ ಒಳಜಗಳ ಅವರನ್ನು ನಿರ್ಬಂಧಿಸಿದ್ದು ಈ ಜಿಲ್ಲೆಗಳಿಗೆ ಮಾತ್ರ.

ರೆಡ್ಡಿಯವರ ಲೆಕ್ಕಾಚಾರ

ಕೇಂದ್ರದ ಬಿಜೆಪಿ ಮತ್ತು ಆರ್.ಎಸ್.ಎಸ್. ಜೊತೆ ನೇರ ಸಂಪರ್ಕವಿರುವ ಜನಾರ್ಧನರೆಡ್ಡಿಯವರಿಂದ ತಮ್ಮ ಮಹತ್ವಾಕಾಂಕ್ಷೆಯ ರಾಜ್ಯದ ಉಪ ಮುಖ್ಯಮಂತ್ರಿಯಾಗುವ ಹಾಗೂ ಶ್ರೀರಾಮುಲು ಸೇರಿದಂತೆ ತನ್ನ ಈರ್ವರು ಸಹೋದರದ್ವಯರು ಸಚಿವರಾಗುವಂತೆ ಮಾಡುವ ಕಾರ್ಯತಂತ್ರ ಹೆಣೆದಿದ್ದಾರೆ. ದಾವಣಗೆರೆಯ ಹರಪನಹಳ್ಳಿಯಿಂದ ಕಾಂಗ್ರೆಸ್ ಅಭ್ಯರ್ಥಿ ಎಂ.ಪಿ. ಪ್ರಕಾಶ್‌ಗೆದುರಾಗಿ ಒಬ್ಬ ಸೋದರ ಎಂ.ಪಿ.ಕರುಣಾಕರರೆಡ್ಡಿಯವರನ್ನು ಇನ್ನೊಬ್ಬ ಸೋದರ ಹಾಲಿ ಸೋಮಶೇಖರರೆಡ್ಡಿಯವರನ್ನು ಬಳ್ಳಾರಿ ನಗರ ಕ್ಷೇತ್ರದಿಂದ ಗೆಲ್ಲಿಸಿಕೊಂಡಲ್ಲಿ ಈ ಇಬ್ಬರು 2 ಜಿಲ್ಲೆಗಳನ್ನು ಪ್ರತಿನಿಧಿಸಿ ಮಂತ್ರಿಗಳಾದರೇ ಎಸ್.ಟಿ. ಕೋಟಾದಿಂದ ಶ್ರೀರಾಮುಲು ಮಂತ್ರಿಯಾಗಿಯೇ ಆಗುತ್ತಾರೆ ಎಂಬುದವರ ಲೆಕ್ಕಾಚಾರ.

ಜಿಲ್ಲೆಯಲ್ಲಿ 09ರಲ್ಲಿ 07 ಮೀಸಲು ಕ್ಷೇತ್ರಗಳಾಗಿರುವುದರಿಂದ, ವಿರೋಧ ರಾಜಕೀಯ ಗುಂಪು ರಾಜಕೀಯ ಭವಿಷ್ಯದ ದೃಷ್ಟಿಯಿಂದ ವಲಸೆ ಹೋಗಲೇಬೇಕು. ವಲಸೆ ಹೋದ ಜನ, ವಲಸೆ ಕ್ಷೇತ್ರದಲ್ಲಿ ತಮ್ಮ ಗೆಲುವಿಗಾಗಿ ಪರದಾಡುವುದು ಬಿಟ್ಟರೇ, ಮೀಸಲು ಕ್ಷೇತ್ರದ ತನ್ನ ಪಕ್ಷದ ಇತರೇ ಅಭ್ಯರ್ಥಿಗಳನ್ನು ಗೆಲ್ಲಿಸಲು ಅವರೇಕೆ ಬಂಡವಾಳ ಹೂಡಬಲ್ಲರು! ತಾವು ಸ್ಪರ್ಧಿಸಿದ ಕ್ಷೇತ್ರ ಬಿಟ್ಟು ಇಲ್ಲಿಗೇಕೆ ಬರಬಲ್ಲರು.. ಅಷ್ಟಕ್ಕೂ ಅವರಿಗೆ ಬಹಳವೆಂದರೆ ಮಂತ್ರಿಯಾಗುವ ಕನಸಿರಬಹುದಷ್ಟೇ. ಮುಖ್ಯಮಂತ್ರಿಯೋ, ಉಪಮುಖ್ಯಮಂತ್ರಿಯೋ ಆಗುವ ಕನಸಿಲ್ಲವಲ್ಲಾ!? ಹೀಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದ ಗಣಿ ಬಂಡವಾಳದಾರರ ಪಡೆಯೇ ಕಾಂಗ್ರೆಸ್ ಪಕ್ಷದಲ್ಲಿದ್ದರೂ, ಬಳ್ಳಾರಿ ಸುಲಭದ ತುತ್ತಾಗಿಯೇ ಜನಾರ್ಧನರೆಡ್ಡಿ ಪಕ್ಷಕ್ಕೆ ಕಂಡಿತ್ತು.

ಒಂದೆಡೆ ಎಂ.ಪಿ. ಪ್ರಕಾಶಕರು ಕಾಂಗ್ರೆ ಸ್ಸುಹೋಯಿಗೆ ಜಿಲ್ಲೆಯಲ್ಲಿ ಜೆಡಿ(ಎಸ್) ದುರ್ಬಲವಾಗಲಿದೆ. ಅದೇ ರೀತಿ ಕಾಂಗ್ರೆಸ್‌ನೊಳಗಿನ ಎಂ.ಪಿ.ಪ್ರಕಾಶ್‌ರ ಅವರ ಬೆಂಬಲಿಗರ ವಿರೋಧಿಗಳು ಬಿಜೆಪಿ ಹಾದಿ ಹಿಡಿಯುವ ಸಂಭವವಿದ್ದೇ ಇದೆ. ಅದೇ ರೀತಿ ಕಾಂಗ್ರೆಸ್‌ನೊಳಗಿನ ಒಳಜಗಳ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿರುವ 2 ಸಾಮಾನ್ಯ ಕ್ಷೇತ್ರಗಳಿಗಾಗಿ ಉಂಟಾಗುವ ಪೈಪೋಟಿಯು ಕಾಂಗ್ರೆಸ್ ಪಕ್ಷದೊಳಗೆ ಅಸಂತೃಪ್ತರ ಪಡೆಯನ್ನು ನಿರ್ಮಿಸಲಿದೆಯೆಂಬುದನ್ನು ಊಹಿಸಿದ ಜನಾರ್ಧನರೆಡ್ಡಿ ಪಡೆ ಅದರ ಲಾಭ ಪಡೆಯುವ ಕಾರ್ಯತಂತ್ರ ರೂಪಿಸಿತಲ್ಲದೇ, ಬಳ್ಳಾರಿಯ ಎಲ್ಲಾ 09 ಕ್ಷೇತ್ರಗಳು ಬಿಜೆಪಿ ತೆಕ್ಕೆಗೆ ಸುಲಭವಾಗಿ ಸಿಗಲಿವೆಯೆಂದು 2 ತಿಂಗಳ ಮುಂಚಿಯೇ ಪ್ರಕಟಿಸಿ, ವಿಜಯೋತ್ಸವ ಆಚರಿಸಿತ್ತು.


ಅನಿಲ್ ಲಾಡ್

ರಾಜ್ಯದ ಚುನಾವಣೆಗೆ ನೀಡಬೇಕಾದನ್ನು, ರಾಜ್ಯದ ಬಿಜೆಪಿಗೆ ನೀಡಿರುವ ಜನಾರ್ಧನರೆಡ್ಡಿ ಗುಂಪು ಈ 6 ಜಿಲ್ಲೆಗಳಲ್ಲಿ ತನ್ನದೇ ಜವಾಬ್ದಾರಿ ಹೊತ್ತುಕೊಂಡು ರಾಜ್ಯ ಬಿಜೆಪಿಯಲ್ಲಿ ಶಕ್ತಿಶಾಲಿ ಪಾತ್ರ ವಹಿಸಿದೆ. ಈ ಪಡೆಯನ್ನು ಬಳಸಿ ರಾಜ್ಯದಾದ್ಯಂತ ತನ್ನ ವಿರೋಧಿಗಳನ್ನು ಸದೆ ಬಡಿಯಲು ಆರ್‌ಎಸ್‌ಎಸ್ ಹಾಗೂ ಬಿಜೆಪಿ ಷಡ್ಯಂತ್ರ ರೂಪಿಸಿದೆ.

ಪ್ರತಿ ತಂತ್ರ

ಬಿಜೆಪಿಯೊಳಗೆ ಜನಾರ್ಧನರೆಡ್ಡಿ ಪಡೆಯ ಚಲನೆ, ಅದು ರಾಜ್ಯದ ಚುನಾವಣೆಯಲ್ಲಿ ವಹಿಸಬಹುದಾದ ಪಾತ್ರ ಎಲ್ಲವೂ ವಿರೋಧಿ ರಾಜ್ಯ ಕಾಂಗ್ರೆಸ್ ಹಾಗೂ ಜೆಡಿ(ಎಸ್) ಮತ್ತಿತರೆ ಪಕ್ಷಗಳಿಗೆ ತಲೆ ನೋವಾಗಿ ಪರಿಣಮಿಸಿದೆ.

ಜನಾರ್ಧನರೆಡ್ಡಿ ಪಡೆಯ ಪಕ್ಷ ಬಳ್ಳಾರಿ ಮತ್ತು ಕರ್ನಾಟಕದಲ್ಲಿ ಬಿಜೆಪಿ ಆಗಿದ್ದರೇ... ಬಳ್ಳಾರಿಯಿಂದ 15 ಕಿ.ಮೀ. ಗಡಿ ಆಚೆಗಿನ ಆಂಧ್ರ ಪ್ರದೇಶದಲ್ಲಿ ಈ ಪಡೆಯ ಪಕ್ಷ ಕಾಂಗ್ರೆಸ್ ಆಗಿದೆ. ರೆಡ್ಡಿ ಗ್ಯಾಂಗ್‌ನ ಈ ದ್ವಿಮುಖತನವನ್ನು ಬಳಸಲು ರಾಜ್ಯ ಕಾಂಗ್ರೆಸ್ ಆಂಧ್ರದ ಮುಖ್ಯಮಂತ್ರಿ ರಾಜಶೇಖರರೆಡ್ಡಿಯವರ ಮೂಲಕ ನಿರ್ಬಂಧಿಸಲು ಯತ್ನಿಸಿ ವಿಫಲವಾದುದು ಈಗ ಬಳ್ಳಾರಿಯಲ್ಲಿನ ಸುದ್ದಿ.

ಅಂದುಕೊಂಡಂತೆ ಎಂ.ಪಿ.ಪ್ರಕಾಶರ ಬೆಂಬಲಿಗರು ಜೆಡಿ(ಎಸ್) ತೊರೆದಿದ್ದರಿಂದ ಜಿಲ್ಲೆಯಲ್ಲಿ ಜೆಡಿ(ಎಸ್) ದುರ್ಬಲ ಗೊಂಡಿತು. ಎಂ.ಪಿ.ಪ್ರಕಾಶರು ಅವರ ಬೆಂಬಲಿಗರು ಕಾಂಗ್ರೆಸ್ ಸೇರ್ಪಡೆಗೊಂಡಿದ್ದರಿಂದ, ಕಾಂಗ್ರೆಸ್‌ನೊಳಗಿನ ಅಸಂತೃಪ್ತರ ಗುಂಪು ಬಿಜೆಪಿಗೆ ವಲಸೆ ಹೋಯಿತು. ರೆಡ್ಡಿಯುವರ ಮುಖ ಕಮಲ ಅರಳಲು ಶುರುವಾಯಿತು. ಹೊಸಪೇಟೆಯ ಮತ್ತೊಬ್ಬ ಗಣಿ ಮಾಲೀಕ ಆನಂದ್‌ಸಿಂಗ್‌ರವರ ಬಿಜೆಪಿ ಸೇರ್ಪಡೆ ಇನ್ನಷ್ಟು ಮಂದಹಾಸವನ್ನು ಮೂಡಿಸಿತು. ತಡೆದುಕೊಳ್ಳಲಾಗದ ಆನಂದ ಅಹಂಭಾವದ ಪರಾಕಾಷ್ಠೆಯ ಮುದ್ದೆಯ ಬಾಯಿಂದ ಹೊರಬಿತ್ತು.

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಸೇರಿದಂತೆ ಬಳ್ಳಾರಿ ಎಲ್ಲಾ ಕ್ಷೇತ್ರಗಳು ಸೇರಿ 10 ಕಡೆ ಕನಿಷ್ಠ 50 ಸಾವಿರ ಬಹುಮತದ ಮೇಲೆ ಗೆಲ್ಲದೇ ಹೋದಲ್ಲಿ ರಾಜಕೀಯ ನಿವೃತ್ತಿ ಎಂದು ಘೋಷಿಸಿತು.

ಒಳಗೊಳಗೆ ಈ ಅಹಂಭಾವವನ್ನು ಎದುರಿಸಲು ಕಾಂಗ್ರೆಸ್, ಜೆಡಿ(ಎಸ್) ಮತ್ತಿತರೆ ಪಕ್ಷಗಳು ಪ್ರತಿತಂತ್ರ ರೂಪಿಸಲು ಮುಂದಾಗಿದ್ದವು. ಇದರ ಭಾಗವಾಗಿಯೇ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಬಳ್ಳಾರಿ ನಗರಕ್ಕೆ ಆಗಮಿಸಿದವರು ಮಾಜಿ ಶಾಸಕ ಅನಿಲ್‌ಲಾಡ್‌ರವರು ಬಂದವರೇ, ರೆಡ್ಡಿ ಗ್ಯಾಂಗ್‌ನ ವಾರ್ಷಿಕ ಲಾಭದಷ್ಟು ತೆರಿಗೆ ಕಟ್ಟುತ್ತೇನೆನ್ನಬೇಕೇ!? ಇದೂ ಕೂಡ ಮತ್ತೊಂದು ಅಹಂಭಾವದ ಮುದ್ದೆಯೇ!?

ಆನಂದದ ಮಂಪರಿನಲ್ಲಿ ಮೈ ಮರೆತಿದ್ದ ರೆಡ್ಡಿಯುವರಿಗೆ ವಿರೋಧಿಗಳ ಪ್ರತಿತಂತ್ರದ ತಿರುಗೇಟು ಅವರನ್ನು ಆಕಾಶದಿಂದ ಜರ್‍ರನೇ ನೆಲಕ್ಕಿಳಿಸಿತಲ್ಲದೇ, ಒಮ್ಮೆ ಈ ಪಾಳೆಯದಲ್ಲಿ ಬೆವರು ಹುಟ್ಟುವಂತೆ ಮಾಡಿದೆ.


ದಿವಾಕರಬಾಬು

ಕಾಂಗ್ರೆನಲ್ಲಿದ್ದ ದಿವಾಕರಬಾಬು ಜೆಡಿ(ಎಸ್) ಸೇರಿದುದು ಮತ್ತು ಸೂರ್ಯನಾರಾಯಣರೆಡ್ಡಿರವರು ಜೆಡಿ(ಎಸ್) ತೊರೆಯದೇ ಉಳಿದುದು. ಬಳ್ಳಾರಿ ನಗರದಲ್ಲಿ ಬದಲಾದ ಎದುರಾಳಿ ರೂಪುಗೊಳ್ಳುವಂತಾಗಿರುವಾಗಲೇ ಅನಿಲ್‌ಲಾಡ್ ಕಾಂಗ್ರೆನಿಂದ ಕಣಕ್ಕಿಳಿದಿರುವುದು ಬಳ್ಳಾರಿ ನೆಲವೇ ಕುಸಿದ ಅನುಭವವಾಗಿರಬೇಕು.

ಕಳೆದ ವಿಧಾನಸಭೆಯ ಚುನಾವಣೆಯಲ್ಲಿ ಬಳ್ಳಾರಿಯ ಜನತೆ ಮತದಾನ ಮಾಡಿದುದು ಕಾಂಗ್ರೆಸ್ -ಬಿಜೆಪಿ ಮಾಫಿಯಾಗಳಲ್ಲಿ ಯಾರು ಕಡಿಮೆ ಅಪಾಯಕಾರಿಗಳೆಂದೇ ಆಗಿದೆ. ಯಾರಿಗೆ ಕಾಂಗ್ರೆ ಹೆಚ್ಚು ಅಪಾಯಕಾರಿ ಎನಿಸಿತೋ ಅವರು ಕಡಿಮೆ ಅಪಾಯಕಾರಿಯೆಂದು

ಪುಟ 11 ಕ್ಕೆ

ಚುನಾವಣಾ ಆಯೋಗವು ಗರಿಷ್ಠ 10 ಲಕ್ಷ ರೂ.ಗಳಷ್ಟು ಖರ್ಚು ಮಾಡಲು ಅಭ್ಯರ್ಥಿಗಳಿಗೆ ನೀತಿ ಸಂಹಿತೆ ರೂಪಿಸಿದೆಯಾದರೂ, ಜಿಲ್ಲೆಯ ಗಣಿ ಮಾಲೀಕರು, ಗೆಲ್ಲಲು ಪ್ರತಿ ಓಟಿಗೆ ತಲಾ 1000 ರೂ. ನೀಡಲು ತಯಾರಿದ್ದಾರೆ. ವಿಧಾನಸಭಾ ಕ್ಷೇತ್ರ ಗೆಲ್ಲಲು 50 ಸಾವಿರ ಮತ ಬೇಕೆನ್ನಿ, ತಲಾ ಮತಕ್ಕೆ 1000 ನೀಡಿದರೂ ಖರ್ಚಾಗುವುದು ಕೇವಲ 5 ಕೋಟಿ ಮಾತ್ರವೇ. 25 ಕೋಟಿಗೂ ಅಧಿಕ ಬಂಡವಾಳ ಹೂಡಲು ತಯಾರಿರುವವರಿಗೆ ಇದು ಜುಜುಬಿಯೇ..

ಮಹಿಳೆಯರಿಗೆ ಸೀರೆ, ನತ್ತು ಸೇರಿದ ಆಭರಣಗಳಿರುವ ಗುಚ್ಛಾ, ಸ್ತ್ರೀ ಶಕ್ತಿ ಸಂಘಗಳಿಗೆ 5 ರಿಂದ 25 ಸಾವಿರ ರೂ.ಗಳ ಗಿಫ್ಟ್, ಹಲವೆಡೆ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಬೋರ್‌ವೆಲ್‌ಗಳು, ರೈತರ ಹೊಲಗಳಿಗೆ ಜೆಸಿಪಿಯಿಂದ ಬಂದ ನಿರ್ಮಾಣ, ಗುಡಿ/ಮಸೀದಿ ಮಂದಿರಗಳಿಗೆ ಜಾತಿ ಜನ ಸಮುದಾಯಗಳಿಗೆ ನೀಡಿದ್ದು ಬೇರೆ, ಅದು ಉದಾರ ಕೊಡುಗೆಯೇ...? ಮದ್ಯದ ಹಂಚಿಕೆಗೆ ಮಿತಿಯೇ ಇಲ್ಲ. ಕಂಠ ಪೂರ್ತಿ ಮಾತ್ರವೇ ಅಲ್ಲ ಚಿರನಿದ್ರೆಯುವರೆಗೆ ಪಡೆಯಬಹುದು. ತಿನ್ನಬೇಕೆಂದವರಿಗೆ ನೂರಾರು ಕುರಿ ಕೋಣಗಳ ಮಾರಣಹೋಮಕ್ಕೆ ಎಣೆ ಇಲ್ಲ.

ಪ್ರಚಾರಕ್ಕಾಗಿ ವಿರೋಧಿಗಳಿಗೆ ಮಹಿಳೆಯರು ಸಿಗದಂತೆ ಮಾಡಲು, ಪ್ರತಿದಿನವು 100 ರಿಂದ 200 ರೂ.ಗಳ ಕೂಲಿ ನೀಡಿ, ಊಟ ತಿಂಡಿ ನೀಡಿ ನೂರಾರು ಮಹಿಳೆಯರ ಹಲವು ತಂಡಗಳನ್ನು ರಚಿಸಿ ಪ್ರಚಾರಕ್ಕೆ ಕಳುಹಿಸುವುದಿದೆ.

ಇದರ ಜೊತೆ ವಿರೋಧಿಗಳ ಬ್ಯಾನರ್ ತಗೆದರೆ, ಧ್ವಜ ತೆಗೆದರೆ ಇಂತಿಷ್ಟೆಂದು ಹಣ ನೀಡಲಾಗುವುದು. ವಿರೋಧಿಗಳ ಪರ ಪ್ರಚಾರಕ್ಕೆ ಹೋಗದಂತೆ ತಟಸ್ಥರಾದರೆ ಹಲವು ಸಾವಿರ, ಕೆಲವೊಮ್ಮೆ ಲಕ್ಷ ಮೊತ್ತದಲ್ಲಿ ನೀಡಲಾಗುವುದು.

ಇಷ್ಟೆಲ್ಲಾ ಮಾಡಿ ಗೆಲುವಿನ ಸಂಶಯ ಮೂಡಿದಾಗ ಹಣ ಪಡೆದುಕೊಳ್ಳದವರನ್ನು ನಿರ್ಬಂಧಿಸಲು, ಬೆದರಿಕೆ ಹಾಕುವ, ಧಾಳಿ ನಡೆಸುವ, ಭೀತಿ ಮೂಡಿಸುವ ಶಕ್ತಿಗಳು. ಅಸ್ತ್ರಗಳು ಇದ್ದೇ ಇವೆ.

ಇದೆಲ್ಲಾ ಬಳ್ಳಾರಿ ಜಿಲ್ಲೆಯ ಜನತೆಯ ಚುನಾವಣೆಯ ಅನುಭವವೇ ಈ ಚುನಾವಣೆ ಇದನ್ನೆಲ್ಲಾ ಮೀರಿಸುವ ಸಾಧ್ಯತೆ ಇದೆ.

ದಲಿತರಿಗೆ ಯಾಕೆ ಭೂಮಿ? ಪಟ್ಟಭದ್ರರ ಕೆಂಗಣ್ಣು

ಭೂಮಿ ಮತ್ತು ನೀರು ಶತ ಶತಮಾನಗಳಿಂದ ದಲಿತ ಕುಟುಂಬಗಳಿಗೆ ಸಿಗದೆ (ನೀಡದೆ) ವಿಚಿತ್ರ ಗುಲಾಮ ಪದ್ಧತಿಯಿಂದ ಮುಕ್ತಿ ಸಿಗದೆ ಬದುಕು ಸಾಗಿಸುತ್ತಿದ್ದಾರೆ. ಭೂ ಮಾಲಕರ ಭೂಮಿಗಳಲ್ಲಿ ಹಗಲಿರುಳು ಬೆವರು ಸುರಿಸಿ ದುಡಿದರೂ ಕೊನೆಗೆ ಸಿಗುವುದು ಒಪ್ಪತ್ತಿನ ಗಂಜಿ ಮಾತ್ರ.

ಕುಟುಂಬ ನಿರ್ವಹಣೆ ಮದುವೆ, ಇತರೆ ಕಾರ್ಯಗಳಿಗೆ ಮತ್ತೆ ಶ್ರೀಮಂತರ ಅಡಿಯಾಳಾಗಿ ಜೀತ ಪದ್ಧತಿಯಂತೆ ಇಡೀ ಕುಟುಂಬವು ದುಡಿಯುವುದು ತಪ್ಪದು. ಈ ದಲಿತ ಕುಟುಂಬಗಳಿಗೆ ಹಗಲು ರಾತ್ರಿ ಅನ್ನುವುದೇ ವ್ಯತ್ಯಾಸ ಗೊತ್ತಿರದೆ ದುಡಿದರೂ ಬದುಕು ಮಾತ್ರ ಅತಂತ್ರ.

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕು, ಉಪ್ಪಿನಾಯಕನಹಳ್ಳಿ ಹಾಗೂ ಹಂಪಾಪಟ್ಟಣ ಗ್ರಾಮಗಳ ದಲಿತ ಕುಟುಂಬಗಳ ಬದುಕು ಅತಂತ್ರ ಸ್ಥಿತಿಯಲ್ಲಿ ಇದೆ. ಸುಮಾರು 20 ವರ್ಷಗಳಿಂದ ಒಬ್ಬರು ಎರಡು ಎಕರೆಯಂತೆ 40 ಕುಟುಂಬಗಳು ಸರ್ಕಾರದ (ಸಾಮಾಜಿಕ ಅರಣ್ಯ) ಭೂಮಿಯನ್ನು ಸಾಗು ಮಾಡಿದ್ದಾರೆ. ಸ್ವಲ್ಪ ಮಳೆಗಾಲ ಉತ್ತಮ ರೀತಿಯಲ್ಲಿ ಬಂದರೆ ಇಡೀ ಕುಟುಂಬವು ಶ್ರಮ ಹಾಕಿ ದುಡಿದರೆ ಮಾತ್ರ ಒಂದಿಷ್ಟು ಕಾಳು ಇಲ್ಲದಿದ್ದರೆ ಬರೀ ಗೋಳು.

ಇಂತಹ ಸಂಕಷ್ಟದಿಂದ ಭೂಮಿ ಮಾಡಿದ ದಲಿತ ಕುಟುಂಬಗಳ ಮೇಲೆ ಬಿತ್ತು ನೋಡಿ ಗ್ರಾಮದ ಪಟ್ಟಭದ್ರರ ಕೆಂಗಣ್ಣು. ದಲಿತರಿಗೆ ಯಾಕೆ ಭೂಮಿ? ಭೂಮಿ ಇಲ್ಲದೆ ಬದುಕುವ ಜನ ಭೂಮಿ ಇಲ್ಲದೆ ಬದುಕಬೇಕು (ಕೂಲಿಯಾಳಾಗಿ ಬದುಕಬೇಕು). ಶ್ರೀಮಂತರು ಕುಂಟು ನೆಪ ಮಾಡಿ ಸಾಮಾಜಿಕ ಅರಣ್ಯಾಧಿಕಾರಿಗಳ ಮೂಲಕ ಒಕ್ಕಲೆಬ್ಬಿಸಲು · ಗ್ರಾಮ ಪಂಚಾಯ್ತಿಯಿಂದ ಯೋಜನೆ ರೂಪಿಸಿದರು. ದಲಿತ ಕುಟುಂಬಗಳ ಬದುಕು ಬೀದಿ ಪಾಲಾಗುವ ಆತಂಕ ಶುರು ವಾಯಿತು, ಸುಮಾರು ವರುಷಗಳಿಂದ ಕಷ್ಟ ಪಟ್ಟು ಉಳುಮೆ ಮಾಡಿದ ಭೂಮಿ (ಭೂಮಿ ತಾಯಿ) ಯನ್ನು ಬಿಡುವುದೆಂದರೆ ತಾಯಿಯನ್ನು ಕಳೆದು ಕೊಂಡಷ್ಟೇ ದುಃಖ! ದುಃಖದಿಂದ ದಲಿತ ಕುಟುಂಬಗಳು ಚಿಂತೆಗೀಡಾದವು. ದಿಕ್ಕು ದೋಚದೆ ಏನು ತಿಳಿಯದಾದರು.

ಅದೇ ಸಂದರ್ಭದಲ್ಲಿ ಅಂಗನವಾಡಿ ನೌಕರರ ಸಂಘದಲ್ಲಿ ಕೆಲಸ ನಿರ್ವಹಿಸುತ್ತಿದ್ದ, ದಲಿತ ಕುಟುಂಬದ ಶಿಲ್ಪ ಅನ್ನುವವರಿಗೆ ಕೆಂಬಾವುಟದ ಸಂಘಟನೆ ಸಿಐಟಿಯು ನೆನಪಾಯಿತು. ನಮಗೆ ನ್ಯಾಯ ಸಿಗಬೇಕಾದರೆ ಕೆಂಬಾವುಟದಿಂದ ಮಾತ್ರ ಸಾಧ್ಯ. ಬೇರೆ ಯಾರಿಂದಲೂ ಸಾಧ್ಯವಿಲ್ಲ. ಎನಿಸಿ ತಮ್ಮ ಸಂಘಟನೆಯ ಅನುಭವಗಳನ್ನು ಹೇಳಿ ದಲಿತ ಕುಟುಂಬಗಳನ್ನು ದುಡಿಯುವ ಜನರ ಪಕ್ಷವಾದ



ಸಿಪಿಐ(ಎಂ) ಕಛೇರಿಗೆ ಕಳುಹಿಸಿದರು.

ಸಿಪಿಐ(ಎಂ) ಮುಖಂಡರು ತಡ ಮಾಡದೆ ಆ ಗ್ರಾಮಗಳ ದಲಿತ ಮುಖಂಡರುಗಳನ್ನು ಸಂಪರ್ಕಿಸಿ ಅವರುಗಳನ್ನು ಸಂಘಟಿಸಿ ಭೂಮಿಯನ್ನು ಉಳಿಸಿಕೊಳ್ಳಬೇಕಾದರೆ ಇದಕ್ಕೆ ಹೋರಾಟ ಒಂದೇ ದಾರಿ ಎಂದು ತಿಳಿ ಹೇಳಿದಾಗ ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಲು ನಿರ್ಧರಿಸಿದರು. ದಲಿತರಿಗೆ ಸರ್ಕಾರ ಭೂಮಿಯನ್ನು ನೀಡಬೇಕು. ಅದು ಬಿಟ್ಟು ಶ್ರೀಮಂತರ ಮಾತಿಗೆ ಭೂಮಿಯನ್ನು ಕಸಿದುಕೊಳ್ಳಲು ನಾವು ಒಪ್ಪುದಿಲ್ಲ. ಈ ಭೂಮಿ ಎಂದೆಂದಿಗೂ ನಮ್ಮದು ಎಂದು ದಲಿತ ಕುಟುಂಬಗಳು ತಾಲ್ಲೂಕು ಕಛೇರಿ ಎದುರು ಧರಣಿ ಸತ್ಯಾಗ್ರಹ ಪ್ರಾರಂಭಿಸಿದರು.

ಈ ಧರಣಿಯನ್ನು ಉದ್ದೇಶಿಸಿ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಯಾದ ಯು.ಬಸವರಾಜ ಮಾತನಾಡಿದರು. ಹೋರಾಟದ ನೇತೃತ್ವವನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಆರ್.ಎಸ್. ಬಸವರಾಜ, ಜಿಲ್ಲಾ ಸಮಿತಿ ಸದಸ್ಯರಾದ ಬಿ.ಮಾಳಮ್ಮ, ಎಸ್.ಜಗನ್ನಾಥ ಹಾಗೂ ತಾಲ್ಲೂಕು ಕಾರ್ಯದರ್ಶಿ ರಂಗಪ್ಪ ದಾಸರ್, ತಾಲ್ಲೂಕು ಮುಖಂಡರಾದ ಕೊಟಗಿ ಮಲ್ಲಿಕಾರ್ಜುನ, ಎ. ಅಡಿವಪ್ಪ ವಹಿಸಿದ್ದರು. ಜೆ.ಎಂ.ಎಸ್. ಮುಖಂಡರಾದ ಜಿ. ಸುರೋಜ ಇದ್ದರು. ಈ ಹೋರಾಟವನ್ನು ಕರ್ನಾಟಕ ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘ ಹಾಗೂ ಜನವಾದಿ ಮಹಿಳಾ ಸಂಘಟನೆಗಳು ಬೆಂಬಲಿಸಿ ಧರಣಿಯಲ್ಲಿ ಭಾಗವಹಿಸಿದ್ದವು.

ಹೋರಾಟ ಮುಂದುವರಿದಿದೆ...

ವರದಿ: ಎಸ್.ಜಗನ್ನಾಥ

ಲಿಂಗಸ್ಗೂರು ಲಂಬಾಣಿಗಳು ಬಿಳಗಿಯಲ್ಲಿ ಒತ್ತೆಯಾಳುಗಳು

ಅವರ ಬದುಕು ಅಸಹನೀಯ! ತಾವೇ ಬಿತ್ತು ಬೆಳೆದು ಬದುಕೇವು ಎಂದರೆ ಒಂದಿಷ್ಟು ಹೊಲವಿಲ್ಲ, ತಾವಿದ್ದಲ್ಲಿಯೇ ದುಡಿದು ತಿನ್ನೋಣವೆಂದರೆ ಕೂಲಿ ಕರಿಯುವವರಿಲ್ಲ, ಯಾಕೆಂದರೆ ಅಲ್ಲಿ ಎಲ್ಲರು ದುಡಿದು ತಿನ್ನುವವರೆ, ಸರಕಾರದ ಉದ್ಯೋಗ ಖಾತ್ರಿಯೋಜನೆಯಲ್ಲಿ ದುಡಿಯೋಣವೆಂದರೆ ಪಂಚಾಯ್ತಿ ಯವರದು ದಿವ್ಯ ನಿರ್ಲಕ್ಷ್ಯ, ವಿಚಾರಿಸಬೇಕಾದ ಅಧಿಕಾರಿಗಳಿಗೆ ಗಾಢ ನಿದ್ರೆ, ರಾಜಾಕಾರಣಿಗಳಿಗೆ ಚುನಾವಣೆಯಲ್ಲಿ ಮಾತ್ರ ನೆನಮು, ಅವರದು ಕಡುಬಡತನ!

ಬದುಕು ಅಸಹನಿಯವಾಗದೆ ಮತ್ತೇನಾದಿತ್ತು ಹೇಳಿ?

ದುಡಿಯಲು ಹೋದ ಪರ ಊರುಗಳಲ್ಲಿ ವಿಪರಿತ ಹಿಂಸೆ, ಕಡಿಮೆ ಕೂಲಿ ಸಾಲದಕ್ಕೆ ಮಹಿಳಾ ಕೂಲಿಕಾರರಿಗೆ ಲೈಂಗಿಕ ಕಿರುಕುಳ ಪ್ರತಿಭಟಿಸಿದವರಿಗೆ ಬಡಿತ, ಒದೆತ ಇದು ಲಿಂಗಸ್ಗೂರು ಪಕ್ಕದಲ್ಲಿಯೇ ಇರುವ ಗ್ವಾನಾಟ್ಲ ತಾಂಡಾ ಎಂಬಲ್ಲಿಯ ಲಂಬಾಣಿಗಳ ಬದುಕು ಮತ್ತು ನರಕ ಎರಡು ಹೌದು!

ಬಡತನವನ್ನು ತಾಳಲಾಗದೆ ಈ ತಾಂಡದಲ್ಲಿಯ ಜನ ಮತ್ತು ಸುತ್ತಲಿನ ಹಳ್ಳಿಗಳ ಜನ ಬಾಂಬೆ, ಪುಣಾ, ಬೆಂಗಳೂರನಂತಹ ಪಟ್ಟಣ ಪ್ರದೇಶಕ್ಕೆ ವಲಸೆ ಹೋಗುತ್ತಾರೆ ಇನ್ನೊಂದಿಷ್ಟು ಉಳಿದ ಜನರು ಇಲ್ಲೆ ಪಕ್ಕದ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಇರುವ ಕಡೆಗೆ ಕಬ್ಬು ಕಡೆಯಲು ಹೋಗುತ್ತಾರೆ ಹಾಗೆ ಕಬ್ಬು ಕಡೆಯಲು ಹೋದ ಕೂಲಿಕಾರರನ್ನು ಅಲ್ಲಿಯ ಭೂ ಮಾಲಿಕರು ಇನ್ನಿಲ್ಲದಂತೆ ಕಾಡಿ, ಚಿತ್ರಹಿಂಸೆ ನೀಡಿ ಮಹಿಳೆಯ ಮಾನಕ್ಕೆ ಕೈಹಾಕುತ್ತಿದ್ದಾರೆ!



ಬಿಡುಗಡೆಯಾದ ಒತ್ತೆಯಾಳುಗಳೊಂದಿಗೆ ಕೂಲಿಕಾರರ ಸಂಘದ ನಾಯಕರು

ಹೀಗೊಂದು ಆರು ತಿಂಗಳ ಹಿಂದೆ ಸುರಪುರ ತಾಲೂಕದ ಜುಮಲಪೂರ ತಾಂಡದ ರವಿ ಎಂಬ ಮಧ್ಯವರ್ತಿ ಗ್ವಾನಾಟ್ಲ ತಾಂಡಕ್ಕೆ ಬಂದು ನಿಮಗೆ ದುಡಿಯಲು ಕೆಲಸಕೊಡಿಸುತ್ತೇನೆ ಎಂದೆಳಿ ಜೋಡಿಯೊಂದಕ್ಕೆ 15,000 ರೂ.ದಂತೆ 8 ಜೋಡಿ ಕಬ್ಬು ಕಡಿಯುವ ಕೆಲಸವಿದೆ ಟನ್ನವೊಂದಕ್ಕೆ 300 ಎಂದು ನಿಗದಿ ಪಡಿಸಿ ಬಾಗಲಕೋಟೆ ಜಿಲ್ಲೆಯ ಬಿಳಗಿ ತಾಲೂಕಿನ ಬಾಡಿಗಿಬೂಧಿಹಾಳ ಗ್ರಾಮದ ಶಿವನ ಗೌಡ ಎಂಬುವವನಲ್ಲಿಗೆ ಕರೆದೊಯ್ದು ಬಿಟ್ಟು ಬಂದ


ತಪ್ಪಿಸಿಕೊಂಡು ಬಂದ ಅಮರೇಶ ಮತ್ತು ತಿಪ್ಪಣ್ಣ

ದೀಪಾವಳಿಯಿಂದ ಹೋಳಿ ಹುಣ್ಣಿಮೆಯ ವರೆಗೆ ಆರು ತಿಂಗಳ ಕಾಲ ಕರಾರಿನೊಂದಿಗೆ ಕೆಲಸಕ್ಕೆ ಹಚ್ಚಿಬಂದರು ಮೊದ ಮೊದಲು ಸರಿಯಾಗಿ ನೋಡುತ್ತಿದ್ದ ಶಿವನಗೌಡ ಮತ್ತು ಆತನ ಆಳಿಯ ಬಸವ ಸಣ್ಣಗೆ ಕಿರುಕುಳ ನೀಡಲಾರಂಭಿಸಿದರು.

ಯಾವಾಗ ಆರು ತಿಂಗಳ ವಾಯಿದೆ ಮುಗಿಯತೋ ಆಗ ಕೂಲಿಕಾರರು ನಾವು ಇಸ್ಕೊಂಡ ರೊಕ್ಕ ಮುಟ್ಟಿದೆ ಲೆಕ್ಕ ಮಾಡಿ ನಾವು ನಮ್ಮೂರಿಗೆ ಹೋಗುತ್ತವೆ ಎಂದು ಹೇಳಿದರು. ಆಗ ಶಿವನಗೌಡ ಅಕ್ಷರಶಃ ರಾಕ್ಷಸನಂತಾಗಿದ್ದ. ಕೂಲಿಕಾರರ ಮೇಲೆ ಹಲ್ಲೆ ಮಾಡಿ, ನಾವು ಮಧ್ಯವರ್ತಿರವಿಗೆ 2 ಲಕ್ಷ 50 ಸಾವಿರ ಕೊಟ್ಟಿದ್ದೇವೆ. ಅದು ಮುಗಿಯುವ ವರೆಗೂ ದುಡಿಯಬೇಕು ಎಂದು ಹೇಳಿ, ಅಕ್ಷರಶಃ ಜೀತದಾಳಿನಂತೆ ದುಡಿಸಿಕೊಂಡಿದ್ದಾನೆ. ಸಾಲದ್ದಕ್ಕೆ ಕೆಲಸವಾದರೂ ಎಂತಹದ್ದು? ಬೆಳಗಿನ ಜಾವ ನಾಲ್ಕು ಗಂಟೆಗೆ ಗಂಡಸರು ಹೊರಟರೆ ರಾತ್ರಿ ಹತ್ತು ಗಂಟೆಗೆ ಮರಳಿ ಮನೆಗೆ ಬರುವದು, ಹೆಂಗಸರು ಮನೆಯಲ್ಲಿಯ ಕೆಲಸಗಳನ್ನು ಮುಗಿಸಿಕೊಂಡುನಂತರ ಕೆಲಸಕ್ಕೆ ಹೋಗುತ್ತಿದ್ದರು, ಹಾಗೆ ಗಂಡಸರು ಕೆಲಸಕ್ಕೆ ಹೋದಾಗ ಶಿವನಗೌಡ ಮತ್ತು ಬಸವ ಒಂಟಿಯಾಗಿರುವ ಮಹಿಳೆಯರನ್ನು ಕಾಡಲು ಶುರುಮಾಡುತ್ತಿದ್ದರು, ಬಹಿರ್ದೆಸೆಗೆ ಹೋದರೆ ಅವರನ್ನು ಹಿಂಬಾಲಿಸಿಕೊಂಡು ಹೋಗುತ್ತಿದ್ದರು. ಇದು ಯಾವ ಪರಿ ಮುಂದು ವರೆಯಿತೆಂದರೆ ಅವರ ಗಂಡಂದಿರ ಎದುರಿಗೆ ಮಹಿಳೆಯರ ಕೈ ಮೈ ಮುಟ್ಟುವದು ಮುಂದುವರೆಯಿತು. ಇದನ್ನು ಪ್ರಶ್ನಿಸಿದ ಅಮರೇಶ ಪೂಜಾರಿ ಎಂಬಾತನನ್ನು ಶಿವನಗೌಡ ಮತ್ತು ಆತನ ಆಳಿಯ ಬಸವ ಇಬ್ಬರು ಸೇರಿ ಬಡಿದು ಆತನನ್ನು ಹಣ್ಣುಗಾಯಿ ನಿರುಗಾಯಿ ಮಾಡಿ ಹಾಕಿದರು. ಯಾವಾಗ ಅವರ ದಬ್ಬಾಳಿಕೆ ವಿಪರೀತವಾಗಯಿತು ಅಲ್ಲಿಂದ ತಪ್ಪಿಸಿಕೊಳ್ಳಲು ಯೋಚನೆ ಮಾಡಿದರು. ಏಪ್ರಿಲ್ 11ರಂದು ತಯಾರಾಗಿ ಅಲ್ಲಿಂದ ಹೊರಡುವದೆಂದು ಮಾತುಕತೆಯಾಗಿ, ಅಮರೇಶ ಪೂಜಾರಿ, ಲೋಕಪ್ಪ, ತಿಪ್ಪಣ್ಣ, ಶಾರುಬಾಯಿ, ತಿಪ್ಪಿಬಾಯಿ, ವಿಮ್ಲಿಬಾಯಿ ಇಷ್ಟು ಜನ ತಯಾರಾಗಿ ಮುಂದೆ ಮಹಿಳೆಯರನ್ನು ಬಾಗಲಕೋಟೆ ಕಳಿಸಲಾಯಿತು. ಅವರೇನೋ ಬಾಗಲಕೋಟೆಗೆ ಬಂದರು. ಆದರೆ ಇದರ ಸುಳಿವು ಪಡೆದ ಶಿವನಗೌಡ ಮತ್ತು ಬಸವ ಬಾಗಲಕೋಟೆಗೆ ಬಂದು ಮರಳಿ ಬಾಡಗಿ ಬೂದಿಹಾಳ ಗ್ರಾಮಕ್ಕೆ ಕರೆದೊಯ್ದರು ಇತ್ತ ಅಮರೇಶ, ಲೋಕಪ್ಪ, ತಿಪ್ಪಣ್ಣ ಮತ್ತು ಒಂಬತ್ತು ತಿಂಗಳ ಸಣ್ಣ ಕೂಸಿನೊಂದಿಗೆ ಬಸ್ಸಿಗೆ ಬರಲು ಹಣವಿಲ್ಲದ ಕಾರಣಕ್ಕಾಗಿ ಮೂರು ದಿನಗಳ ಕಾಲ ನಡೆದು ಕೊಂಡೆ ಬಂದು ತಮ್ಮ ತಾಂಡಾ ಸೇರಿದರು.


ಒಂದು ವಾರದಿಂದ ತಾಯಿಯಿಂದ ಬೇರೆಯಾಗಿದ್ದ ಕೂಸು

ಆಗ ಬಂತು ನೋಡಿ ಶಿವನಗೌಡನಿಂದ ಫೋನು!

ನಿಮ್ಮ ಹೆಣ್ಣುಮಕ್ಕಳು ನಮ್ಮ ಹತ್ತಿರವಿದ್ದಾರೆ ಬಂದು ಉಳಿದ ಹಣ ಕಟ್ಟಿ ಬಿಡಿಸಿಕೊಂಡು ಹೋಗಿ ಇಲ್ಲದಿದ್ದರೆ ಅವರನ್ನು ಮಾರಿ ನಮ್ಮ ರೊಕ್ಕವನ್ನು ತೆಗೆದು ಕೊಳ್ಳುತ್ತವೆ ಎಂದಾಗ ತಬ್ಬಲಿಯಂತಾದ ಕೂಲಿಕಾರರು ಪತ್ರಿಕೆಯವರ ಮುಂದೆ ತಮ್ಮ ಕಷ್ಟಗಳನ್ನು ಹೇಳಿಕೊಂಡಿದ್ದಾರೆ.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘದ

ಪುಟ 10ಕ್ಕೆ

ಆರ್. ಎಸ್. ಪಾಟೀಲ್ ಎಂಬ ಪಾಖಂಡಿ

ಆರ್. ಎಸ್. ಪಾಟೀಲ್ ಎಂಬ ಬಿಳಿಗಿಯ ಸಿ.ಪಿ.ಐ. ಗೆ ಒಂದಿಷ್ಟು ಮಾನವಿಯತೆ ಎಂಬುವದೇನಾದರೂ ಉಳಿದುಕೊಂಡಿದ್ದರೆ ಶಿವನಗೌಡ ಮತ್ತು ಬಸವ ಎಂಬಿಬ್ಬರ ಮೇಲೆ ಅಕ್ರಮವಾಗಿ ಬಂಧಿಸಿಟ್ಟರುವದು ಮತ್ತು ಜೀತದಾಳುಗಳಂತೆ ನಡೆಸಿ ಕೊಂಡಿರುವುದಕ್ಕೆ ಮತ್ತು ಮಹಿಳಾ ಕೂಲಿಕಾರರಿಗೆ ಲೈಂಕಿಕ ಕಿರುಕುಳ ನೀಡಿದ ಕಾರಣಕ್ಕಾಗಿ ಅವರ ಮೇಲೆ ಪ್ರಕರಣ ದಾಖಲಿಸಕೊಂಡು ಅವರನ್ನು ಒಳಗೆ ತಳ್ಳಬೇಕಾಗಿತ್ತು. ಆದರೆ ಅವರಿಂದ ಅಮೇದ್ಯ ತಿಂದಿರುವ ಕಾರಣಕ್ಕಾಗಿ ಶಿವನಗೌಡ ಠಾಣೆ ಮುಂದೆ ನಿಂತು ಪೋಲಿಸರೊಂದಿಗೆ ಮಾತ ನಾಡುತ್ತಿದ್ದರು ಕರೆದು ಮಾತ ನಾಡಿಸಲಿಲ್ಲ. ಆದರೆ ಮಹಿಳೆಯರು ಶಿವನಗೌಡನಿಂದಾದ ಅನ್ಯಾಯ, ಅವಮಾನಗಳನ್ನು ಹೇಳುತ್ತಿದ್ದರೆ ಆರ್.ಎಸ್. ಪಾಟೀಲ ಕೇಳಿಸಿಕೊಳ್ಳಲು ತಯಾರಿರಲಿಲ್ಲ. ಶಿವನಗೌಡ ರಾತ್ರಿ ವೇಳೆ ಬಂದು ಮಲಗಿದ್ದಾಗ ಹಾಸಿಗೆ ಎಳೆಯುವದು, ಕಣ್ಣಿಗೆ ಟಾರ್ಚ್ ಬಿಡುವುದು ಮಾಡುತ್ತಿದ್ದ, ಕೈಹಿಡಿದು ಎಳೆಯುತಿದ್ದ ಎಂದು ವಿವರಿಸುತ್ತಿದ್ದಾಗ ಗದರಿಸಿದ್ದು ಮಾತ್ರವಲ್ಲ ಬರುವಾಗ ಮುಚ್ಚಳಿಕೆ ಪತ್ರ ಬರೆಯಿಸಿ ಕೊಂಡು ಶಿವನಗೌಡನಿಂದ ನಮಗೇನು ಅನ್ಯಾಯವಾಗಿಲ್ಲವೆಂದು ಬರೆದು ಕೂಲಿಕಾರರಿಂದ ಸಹಿಮಾಡಿಸಿ ಕೊಂಡು ಶಿವನಗೌಡನ ರಕ್ಷಣೆ ಮಾಡಿ ಸಿಪಿಐ ಆರ್.ಎಸ್. ಪಾಟೀಲ್‌ರ ಋಣಸಂದಾಯ ಮಾಡಿದ್ದಾರೆ.

ಹೇಳಿ! ನ್ಯಾಯಕ್ಕೆ ಎಲ್ಲಿಯಾದರೂ ಬೆಲೆ ಇದೆಯೇ?

ಜನಶಕ್ತಿ ಕನ್ನಡ ವಾರಪತ್ರಿಕೆ

ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ದೂರವಿಡಿ ಬೆಲೆ ಏರಿಕೆ ವಿರುದ್ಧ ಆಂದೋಲನ ತೀವ್ರಗೊಳ್ಳಬೇಕು

ಬಾಗೇಪಲ್ಲಿಯಲ್ಲಿ ಬಹಿರಂಗ ಸಭೆ ಮುಗಿಸಿ ಬೆಂಗಳೂರಿಗೆ ಬಂದ ಸೀತಾರಾಂ ಯೆಚೂರಿ ಸಂದರ್ಶನದಲ್ಲಿ ಹೇಳಿದ್ದು ಏನು?

ಸೀತಾರಾಂ ಯೆಚೂರಿಯವರೊಂದಿಗೆ ಕಿರು ಸಂದರ್ಶನ

ಜನಶಕ್ತಿ: ನೇಪಾಳದಲ್ಲಿ ಮೊಟ್ಟಮೊದಲ ಬಾರಿಗೆ ಜನ ತಂತ್ರಾತ್ಮಕ ಸರ್ಕಾರ ರಚನೆಯ ಪ್ರಯುತ್ನಗಳು ನಡೆದಿವೆ? ಈ ಪ್ರಕ್ರಿಯೆ ಯಶಸ್ವಿಯಾಗುವುದೇ?

ಸೀತಾರಾಂ: ಚುನಾವಣೆ ಮುಗಿದು ಫಲಿತಾಂಶವೂ ಹೊರಬಂದಿದೆ. ಇನ್ನು ಸರ್ಕಾರ ರಚಿಸಬೇಕು. ನೇಪಾಳದ ಮಾವೋವಾದಿಗಳು ಶೇ.50 ರಷ್ಟು ಸ್ಥಾನ, ಶೇ.32-33 ರಷ್ಟು ಮತಗಳನ್ನು ಪಡೆದಿದ್ದಾರೆ. ಯಾರಿಗೂ ಪೂರ್ಣ ಬಹುಮತವಿಲ್ಲ. ಹೀಗಾಗಿ ಒಂದು ಸಮ್ಮಿಶ್ರ ಸರ್ಕಾರ ಅಲ್ಲಿ ರಚನೆಯಾಗುವುದು ಅನಿವಾರ್ಯ. ಮಾವೋವಾದಿಗಳಿಗೆ ಹೆಚ್ಚಿನ ಸ್ಥಾನ ಸಿಕ್ಕಿರುವುದು ಒಳ್ಳೆಯದು. ಇದೀಗ ಏನಿದ್ದರೂ ಸಂವಿಧಾನ ರಚನಾ ಸಭೆಯೇ ಅಸ್ತಿತ್ವಕ್ಕೆ ಬರುತ್ತದೆ. ಹೊಸ ಸಂವಿಧಾನ ರೂಪಿಸುವುದು ಇದರ ಮುಖ್ಯ ಕೆಲಸವಾಗಿದೆ. ಇದರ ಆಧಾರದಲ್ಲಿ ಮತ್ತೆ ಚುನಾವಣೆ ಆಗಬೇಕಾಗುತ್ತದೆ.

ಜನಶಕ್ತಿ: ಹೊಸ ಬೆಳವಣಿಗೆ, ಜನರ ತೀರ್ಪು ಆಧರಿಸಿ ನೇಪಾಳದ ದೊರೆ ಇದನ್ನು ಒಪ್ಪುತ್ತಾನೋ? ದೇಶ ಬಿಡಲು ಕೇಳಿದ್ದಾರಲ್ಲಾ?

ಸೀತಾರಾಂ: ಎಷ್ಟು ಬೇಗ ಸಾಧ್ಯವಿದೆಯೋ ಅಷ್ಟು ಬೇಗ ಚುನಾವಣೆಗಳು ನಡೆಯುವಂತಾಗಬೇಕು. ಹೊಸ ಸಂವಿಧಾನವನ್ನು ರಾಜ ಒಪ್ಪುತ್ತಾನೋ ಇಲ್ಲವೋ ಎಂಬ ಪ್ರಶ್ನೆ ಇದೆ. ಅದೇನಿದ್ದರೂ ಈಗಿನ ಜನತಾಂತ್ರಿಕ ಪ್ರಕ್ರಿಯೆಯಿಂದ ವಾಪಾಸಾಗಲು ಸಾಧ್ಯವಿಲ್ಲ.



ಜನಶಕ್ತಿ: ಇಷ್ಟೆಲ್ಲಾ ಜನರ ತೀರ್ಪು ಬಂದಿರುವಾಗ ಅಮೇರಿಕಾ ಸಂಸ್ಥಾನ ನೇಪಾಳ ಮಾವೋವಾದಿಗಳನ್ನು, ಈ ಸರ್ಕಾರವನ್ನು ಒಪ್ಪುವುದೇ?

ಸೀತಾರಾಂ: ನೇಪಾಳದ ಮವೋವಾದಿಗಳನ್ನು ಅಮೇರಿಕಾ ಭಯೋತ್ಪಾದಕರು ಎಂದೇ ಕರೆಯುತ್ತಾ ಬಂದಿದೆ. ಮೊದಲು ಪ್ಯಾಲೇಸ್ತೈನಿಯನ್ ನ 'ಹಮಾಸ್ ಸಂಘಟನೆ' ಯನ್ನು 'ಟೆರರಿಸ್ಟ್' ಎಂದೇಕರೆಯುತ್ತಿತ್ತು. ಅವರು ಚುನಾವಣೆಗೆ ನಿಂತರು, ಜನರಿಂದ ಆಯ್ಕೆಯಾದರು. ಆದರೆ ಈ ವಿದ್ಯಾಮಾನವನ್ನು ಅಮೇರಿಕಾ ಒಪ್ಪಲು ಸಿದ್ದರಾಗಲಿಲ್ಲ. ಈಗಲೂ ಮಾವೋ ವಾದಿಗಳ ಬಗ್ಗೆ ಹಾಗೆ ಇದೆ. ಇದನ್ನು ಎದುರಿಸಬೇಕಾಗುತ್ತದೆ.

ಜನಶಕ್ತಿ: ಭಾರತ-ನೇಪಾಳದ ನಡುವಿನ ಸಂಬಂಧಗಳ ವೃದ್ಧಿಗೆ ಈಗಿನ ನಾಯಕತ್ವದ ಪ್ರಯತ್ನ ಏನಿದೆ?

ಸೀತಾರಾಂ: ಭಾರತದೊಂದಿಗೆ, (ಹಾಗೂ ಚೀನಾ) ಉತ್ತಮ ಸಂಬಂಧ ಹೊಂದುವುದಾಗಿ 'ಪ್ರಚಂಡ' ಮತ್ತೆ ಮತ್ತೆ ಪ್ರಕಟಿಸಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ಸಂಬಂಧ ಸುಧಾರಣೆಗೆ ಒಳ್ಳೆಯ ಅವಕಾಶ. ಮಾವೋವಾದಿಗಳು ದೃಢವಾಗಿದ್ದಾರೆ.

ಜನಶಕ್ತಿ: ಟಿಬೆಟ್ ಸುತ್ತ ಈಗ ಎದ್ದಿರುವ ಬೆಳವಣಿಗೆಗಳ ಬಗ್ಗೆ ಏನನ್ನಿಸುತ್ತದೆ? ಅದೂ ಚೀನಾ 'ಒಲಂಪಿಕ್ಸ್' ನಂತಹ ಮಹಾನ್ ಘಟನೆಗೆ ಸಿದ್ಧಗೊಳ್ಳುತ್ತಿರುವಾಗ?

ಸೀತಾರಾಂ: ಈ ಬೆಳವಣಿಗೆಗಳು ದುರದೃಷ್ಟಕರ. ಸ್ನೇಹ, ಸೌಹಾರ್ದತೆ, ಶಾಂತಿಯನ್ನು ಬೆಳೆಸುವ 'ಒಲಂಪಿಕ್ಸ್' ನಂತಹ ಮಹಾನ್ ಕ್ರೀಡಾ ಸಂದರ್ಭವನ್ನು ಹಾಳುಗೆಡಹಲು ಹೆಣೆಯಲಾದ ದುಷ್ಟ-ಆಟ. ಟಿಬೆಟ್‌ನ ಸುತ್ತ ಏನೇ ವಿವಾದಗಳಿದ್ದರೂ ಅದನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಟಿಬೆಟ್ ಚೀನಾ ದೇಶದ ಅವಿಭಾಜ್ಯ ಅಂಗವಾಗಿದೆ ಎಂಬುದು ಭಾರತದ ನಿಲುವು. ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂದು ಚೀನಾ ಒಪ್ಪಿದಂತೆ ಇದು. ಈ ವಿಷಯದಲ್ಲಿ ಯಾವುದೇ ಹೊರಗಿನ ಶಕ್ತಿಗಳ ಮಧ್ಯಪ್ರವೇಶ ಆಗಕೂಡದು, ಈಗಿನ ಬೆಳವಣಿಗೆಗಳಲ್ಲಿಯಂತೂ ಚೀನಾ ವಿರೋಧಿ ಕೃತ್ಯವೇ ಮುಖ್ಯವಾಗಿ ಕಾಣುತ್ತದೆ.

ಜನಶಕ್ತಿ: ಬೆಲೆ ಏರಿಕೆ ವಿರುದ್ಧ ಎಡಪಕ್ಷಗಳು ಮತ್ತು ಯುಎನ್‌ಪಿಎ ಧ್ವನಿ ಎತ್ತಿವೆ. ಪರ್ಯಾಯ ಸೂಚನೆಗಳ ಜೊತೆಗೆ ಹೋರಾಟವೂ ನಡೆದಿದೆ? ಕೇಂದ್ರ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎನ್ನಿಸುತ್ತದೆಯೇ?

ಸೀತಾರಾಂ: ಬೆಲೆ ಏರಿಕೆ ವಿರುದ್ಧ ಇನ್ನೂ ಸಾಮೂಹಿಕ ಜನಾಂದೋಲನ ಬೆಳೆಯಬೇಕು. ನಾವು ಸಂಸತ್ ಒಳಗೆ ಹಾಗೂ ಹೊರಗೂ ನಾಲ್ಕು ಬೇಡಿಕೆ ಮುಂದಿಟ್ಟು ಹೋರಾಟ ನಡೆಸುತ್ತಿದ್ದೇವೆ. ಈ ಹೋರಾಟ-ಜನತೆಯ ಒತ್ತಡಗಳಿಂದಾಗಿ ಮುಂದಿನ ವಾರದಲ್ಲಾದರೂ ಕೇಂದ್ರಸರ್ಕಾರ ಕೆಲವು ಮುಖ್ಯಕ್ರಮಗಳನ್ನು ಕೈಗೊಳ್ಳಲೇ ಬೇಕಾಗುತ್ತದೆ. ಆಹಾರ ಧಾನ್ಯಗಳ ಪೂರೈಕೆಯಲ್ಲಿ 143 ಲಕ್ಷ ಟನ್ ಗಳಷ್ಟು ರಾಜ್ಯಗಳಿಗೆ ಕಡಿತ ಮಾಡಿದೆ. ಅದರಲ್ಲೂ ಕೇರಳ 80 ಲಕ್ಷ ಟನ್, ಪಶ್ಚಿಮ ಬಂಗಾಳಕ್ಕೆ 40 ಲಕ್ಷ ಟನ್ ಕಡಿತ ಮಾಡಲಾಗಿದೆ.

ಜನಶಕ್ತಿ: ಮೂರನೇಯ ಪರ್ಯಾಯದ ಸಾಧ್ಯತೆಗಳು ಹೇಗಿದೆ?

ಸೀತಾರಾಂ: ಬೆಲೆ ಏರಿಕೆ ವಿರುದ್ಧ ಎಡಪಕ್ಷಗಳು-ಯುಎನ್‌ಪಿಎ ಒಂದಾಗಿ ಹೋರಾಟ ನಡೆಸುತ್ತಿವೆ. ಹೀಗೆ ಇಂತಹ ವಿಷಯಾಧಾರಿತವಾದ ಹೋರಾಟಗಳು ಬೆಳೆಯುವುದು ಅತ್ಯಗತ್ಯ. ಅಣು ಒಪ್ಪಂದದ ವಿಷಯದಲ್ಲಿ ಅವರು ನಮ್ಮೊಂದಿಗೆ ಬಂದರು. ಆರ್ಥಿಕ, ವಿದೇಶಾಂಗ, ಕೋಮುವಾದದಂತಹ ವಿಷಯಗಳ ಬಗ್ಗೆ ಒಂದು ಸ್ಪಷ್ಟ ನೀತಿ ಆಧಾರಿತ ದೃಷ್ಟಿಕೋನ ಬೆಳೆಯಬೇಕು. ಆಗಲೇ ಒಂದು ಸ್ಪಷ್ಟ ಪರ್ಯಾಯ ರೂಪಿಸಲು ಸಾಧ್ಯ.

ಜನಶಕ್ತಿ: ಮತ್ತೆ ನಂದಿಗ್ರಾಮದಲ್ಲಿ ಹಿಂಸಾಚಾರ, ಮರುಕಳಿಸಿದೆ?

ಸೀತಾರಾಂ: ಇದು ಸಿಪಿಐ(ಎಂ)ಮತ್ತು ಎಡಶಕ್ತಿಗಳ ವಿರುದ್ಧದ ದಾಳಿ ಎಡರಂಗ-ಕಮ್ಯುನಿಸ್ಟ್‌ನ ವಿರೋಧದ ಅವರ ಮಹಾ ಮೈತ್ರಿ ಈಗಲೂ ಮುಂದುವರೆದಿದೆ.

ಜನಶಕ್ತಿ: ಆಂಧ್ರದಲ್ಲಿನ ಭೂಮಿಗಾಗಿನ ಚಳುವಳಿ ಯಾವ ಹಂತದಲ್ಲಿದೆ?

ಸೀತಾರಾಂ: ಮೊದಲ ಹಂತದ ಚಳುವಳಿ ಯಶಸ್ವಿಯಾಗಿದೆ, ಅದು ಮುಂದುವರೆಯಬೇಕು. ಈಗಾಗಲೇ 3.25 ಲಕ್ಷ ಎಕರೆಯಷ್ಟು ಭೂಮಿಯನ್ನು ಕಬ್ಜಾಕ್ಕೆ ಜನ ತೊಗೊಂಡಿದ್ದಾರೆ. ಈಗ ಅದರ ನಿಖರತೆ, ಗುರುತಿಸಬೇಕು. ಅದಕ್ಕೆ ಸರ್ಕಾರ ಪಟ್ಟಾಹಕ್ಕು ಮುಂತಾಗಿ ನೀಡಬೇಕು. ಇವೆಲ್ಲದರ ಬಗ್ಗೆ ಬೇಡಿಕೆ ಒಳಗೊಂಡ ಹೋರಾಟ ಮುಂದಿನ ತಿಂಗಳಲ್ಲಿ ಪುನರಾರಂಭಗೊಳ್ಳಲಿದೆ.

ಜನಶಕ್ತಿ: ಕರ್ನಾಟಕದ ವಿಧಾನಸಭಾ ಚುನಾವಣೆಗಳ ಮಹತ್ವವೇನು?

ಸೀತಾರಾಂ: ಇದಕ್ಕೆ ರಾಷ್ಟ್ರಮಟ್ಟದಲ್ಲಿಯೂ ಮಹತ್ವವಿದೆ, ಪರಿಣಾಮಗಳಿವೆ. ಇಲ್ಲಿ ಫ್ಯಾಶಿಸ್ಟ್ ಮನೋಭಾವದ ಆರ್‌ಎಸ್‌ಎಸ್ ನಿಯಂತ್ರಣದ ಬಿಜೆಪಿ ಅಧಿಕಾರಕ್ಕೆ ಬರುವಂತಾದರೆ ಅದು ರಾಷ್ಟ್ರ ಮಟ್ಟದಲ್ಲಿ ಈ ಶಕ್ತಿಗಳಿಗೆ ಕುಮ್ಮಕ್ಕು ಹೆಚ್ಚಲು ಕಾರಣವಾಗುತ್ತದೆ. ಇದನ್ನೇ ಹಿಡಿದು ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ಹವಣಿಸುತ್ತಾರೆ. ಆದ್ದರಿಂದ ದೇಶದ ಹಾಗೂ ಕರ್ನಾಟಕದ ಹಿತದೃಷ್ಟಿಯಲ್ಲಿ ಕೋಮುವಾದಿ ಶಕ್ತಿಗಳನ್ನು ಸೋಲಿಸಬೇಕು, ಕೋಮುವಾದಿಗಳು ಸರ್ಕಾರ ರಚಿಸಕೂಡದು, ಒಂದು ಜಾತ್ಯಾತೀತ ಸರ್ಕಾರಕ್ಕೆ ಅಧಿಕಾರಕ್ಕೆ ಬರುವಂತಾಗಬೇಕು.

ಸಂದರ್ಶಕರು: ಎಸ್.ವೈ.ಗುರುಶಾಂತ್, ಆರ್.ರಾಮಕೃಷ್ಣ

ವಗೈರೆಗಳು

ವಿಫಲ ದಾಂಧಲೆ

ಇಂತಹ ಎದುರಿನಲ್ಲೇ ಮೊನ್ನೆ ಧಾರವಾಡ ಬಳಿಯ ಹಳ್ಳಿಯೊಂದರ ಪೂಜಾಸ್ಥಳವೊಂದರ ಮೇಲೆ ಭಜರಂಗದಳದ ಕಾರ್ಯಕರ್ತರು ಸಗಣಿ ಎರಚಿ, ಕಲ್ಲು ತೂರಿದ್ದಾಗಿ ವರದಿ ಪ್ರಕಟವಾಯಿತು. ಈ ಪೂಜಾ ಸ್ಥಳ ಮಸೀದಿ ಎಂಬುದು ಬೇರೆ ಹೇಳಬೇಕಿಲ್ಲ. (ನಮ್ಮ ಮಾಧ್ಯಮಗಳು ಇಲ್ಲೆಲ್ಲಾ ಸಂಕೇತ ಭಾಷೆಯಲ್ಲಿ ಮಾತನಾಡುತ್ತವೆ!) ಬುಧವಾರ ರಾತ್ರಿ ಭಜರಂಗ ದಳದ ಸಭೆ ನಡೆಯಿತಂತೆ. ಮುಗಿದು ಹೊರಟವರು ಮಸೀದಿ ಮೇಲೆ ಧಾಳಿ ಮಾಡಿದ್ದಾರೆ ಕೆಲವರು ಎನ್ನುತ್ತವೆ ಮಾಧ್ಯಮಗಳು. ಅಂದರೆ ಆಕಸ್ಮಾತ್ ಎನ್ನುವ ಹಾಗೆ ಆದರೆ ಚುನಾವಣೆಗಳ ಪ್ರಕ್ರಿಯೆ ನಡೆಯುತ್ತಿರುವಾಗ ಹಿಂದೂ-ಮುಸ್ಲಿಂರ ನಡುವೆ ಗಲಭೆಗಳು ನಡೆಯಲಿ ಎಂದೇ ಈ ಪುಂಡರ ಗುಂಪು ಧಾಳಿ ಮಾಡಿದೆ. ಉದ್ವಿಗ್ನತೆ ಹುಟ್ಟು ಹಾಕಲು ಯತ್ನಿಸಿದೆ. ಮುಸ್ಲಿಮರು [redacted]

ನಮ್ಮ ಜನ ಜೀವನ, ಸಂಸ್ಕೃತಿ-ಅಚರಣೆಗಳಲ್ಲಿ ಸೌಹಾರ್ದತೆ ಸಂದೇಶವಿದ್ದರೆ, ಇದನ್ನೇ ನಾಶ ಮಾಡಲು ರಾಜಕೀಯ ಗುರಿ ಇರಿಸಿ ಹೊರಟಿದೆ ಸಂಘ ಪರಿವಾರ. ಒಂದೊಮ್ಮೆ ಅಧಿಕಾರಕ್ಕೆ ಬಂದರೆ...? ಇಡೀ ಕರ್ನಾಟಕದ ಜನತೆ ಯೋಚಿಸಬೇಕು.

ಚುನಾವಣಾ ವೆಚ್ಚ

ಮೊನ್ನೆ ತ್ರಿಪುರಾದ ಸಚಿವ ಜಿತೇಂದ್ರ ಚೌಧುರಿ ಬೆಂಗಳೂರಿಗೆ ಬಂದಿದ್ದರು. ಚುನಾವಣಾ ಭರಾಟೆ ನೋಡಿ ಏನೆಲ್ಲಾ ಎಂದು ವಿಚಾರಿಸಿದರು. ಮಾತು ಖರ್ಚು ವೆಚ್ಚಗಳತ್ತ ಹೊರಳಿತು. ಈ ಬಾರಿ ಏನಿಲ್ಲವೆಂದರೂ ಬಿಜೆಪಿ-ಕಾಂಗ್ರೆಸ್, ದಳ (ಎಸ್) ನಂತಹ ಪಕ್ಷಗಳು, ಕೆಲವೆಡೆ ವ್ಯಕ್ತಿಗಳೂ ಏನಿಲ್ಲವೆಂದರೂ ಕನಿಷ್ಟ 5 ಕೋಟಿಯನ್ನಾದರೂ (10 ಕೋಟಿ) ಖರ್ಚು ಮಾಡುತ್ತಾರೆ. ನೋಡಿ 300 ಓಟುಗಳಿದ್ದರೆ 9 ಲಕ್ಷ ರೂಪಾಯಿಗಳ ಕಾರು ನೀಡಲಾಗುತ್ತಿದೆ ಎಂದು ನಾವಂದದ್ದಕ್ಕೆ ಅವರಿಗೆ ಒಂದು ರೀತಿಯ ಶಾಕ್ ಆಯಿತು. 5 ಕೋಟಿ ರೂಪಾಯಿಗಳೇ!? 'ತ್ರಿಪುರಾದಲ್ಲಿ ಹೇಗೆ' ನಾವು ಕೇಳಿದೆವು. 'ನಮ್ಮ ಪಕ್ಷದ ಸಿಪಿಐ(ಎಂ) ಒಟ್ಟು ಖರ್ಚುಗಳು ಕ್ಷೇತ್ರದಲ್ಲಿ ಎರಡುವರೆ ಲಕ್ಷದಷ್ಟು! ಹೆಚ್ಚೆಂದರೆ ಮೂರು ಕೆಲವೊಮ್ಮೆ ಮಾತ್ರ...ನಾಲ್ಕು" ಬಾಯಿಯ ಮೇಲೆ ಬೆರಳಿಟ್ಟುಕೊಳ್ಳುವ ಸರದಿ ನಮಗೆ.! ಅವರೆಂದರು. ಚುನಾವಣೆಯನ್ನು ಜನ ನಡೆಸುತ್ತಾರೆ.... ಈ ಬಾರಿಯ ಚುನಾವಣೆಯೇ... ಹಬ್ಬ. ಅದು ಜನರ ಹಬ್ಬದಂತೆ... ತಮಗೆ ಬೇಕಾದ ಪ್ರತಿನಿಧಿಯನ್ನು, ಬೇಕಾದ ಸರ್ಕಾರವನ್ನು ಆರಿಸಿಕೊಳ್ಳುವುದಿಲ್ಲವೇ...' ನಾಲ್ಕು ಬಾರಿ ಸತತವಾಗಿ ಗೆದ್ದು ಬಂದಿರುವ ಚೌಧುರಿ ಹೇಳುವಾಗ ಮಾತಿನ ಅರ್ಥಗಹನ. ಕ್ಯಾಬಿನೆಟ್ ಸಚಿವ (ಗ್ರಾಮೀಣಾಭಿವೃದ್ಧಿ, ಸಣ್ಣ ಕೈಗಾರಿಕೆ, ಇತ್ಯಾದಿ ನಾಲ್ಕು ಖಾತೆ) ಚೌಧುರಿಯವರ ಪತ್ನಿ ಸರ್ಕಾರಿ ಹೈಸ್ಕೂಲಿನಲ್ಲಿ ಶಿಕ್ಷಕಿ. ಸಂಸಾರ ನಿರ್ವಹಣೆಗೆ ಅವರ ದುಡಿಮೆಯೇ ಆಧಾರ.

ಕ್ರಾಂತಿಕಾರಿಗಳ ಕರೆ

ಭಾರತದ 'ಮಾವೋವಾದಿ' 'ಕ್ರಾಂತಿಕಾರಿಗಳು' ಚುನಾವಣೆಯನ್ನು ಬಹಿಷ್ಕರಿಸುವಂತೆ ಚಿಕ್ಕಮಗಳೂರಿನ ಕಾಡಿನಿಂದ ಕರೆ ಕೊಟ್ಟಿದ್ದಾರೆ. ಈ ಚುನಾವಣೆಗಳು ಈ ವ್ಯವಸ್ಥೆಯ ಬಗ್ಗೆ ಭ್ರಮೆ ಉಂಟು ಮಾಡುತ್ತವೆ. ಪ್ರಜಾಪ್ರಭುತ್ವ ಎಂಬುದು ಬೂಟಾಟಿಕೆ ಆದ್ದರಿಂದ... ಸಶಸ್ತ್ರ ಹೋರಾಟವೊಂದೇ ದಾರಿಯೆಂಬುದು ಅವರ ವಿವರಣೆ... ಇಂದಿನ ಸಂಸದೀಯ ಪ್ರಜಾ ಪ್ರಭುತ್ವದ ಸಕಾರಾತ್ಮಕ ಅವಕಾಶಗಳನ್ನು ಬಳಸಿಕೊಂಡು ಜನತೆಯ ಕ್ರಾಂತಿಕಾರಿ ಚಳವಳಿ ಬೆಳೆಯಬೇಕು ಎಂಬುದನ್ನು ಅರ್ಥಮಾಡಿಕೊಳ್ಳಲು ಅವರು ಮೊಂಡುತನದಿಂದ [redacted] ಹಾದಿಗಳಲ್ಲೇ ಎದುರಿಸಿ ಮುಖಾಮುಖಿಯಾಗಿ ರುವದನ್ನು ವಿರೋಧಿಸುತ್ತಾರೆ.

ಅಲ್ಲಿ ಮಾವೋವಾದಿಗಳ ಕರೆ ಹಾಗಿರುವಾಗ ಇಲ್ಲಿ ಅದರ ಕಾರ್ಯಕರ್ತರು, ನಾಯಕರು ಕೋಮುವಾದಿಗಳನ್ನು ಸೋಲಿಸಲು ಅವರದ್ದೇ ಕ್ರಮಗಳಿಂದ ಬ್ಯುಸಿಯಾಗಿದ್ದಾರೆ. 'ಪ್ರಜಾನಾಡಿನಲ್ಲಿ ಪ್ರಜಾಪ್ರಭುತ್ವಕ್ಕಾಗಿ ಜನರ ಒಕ್ಕೂಟ' ಎಂಬ ಹೆಸರಿನಲ್ಲಿ ಜನರ ಪ್ರಣಾಳಿಕೆ ತಯಾರಿಸಿ ಚುನಾವಣೆಯಲ್ಲಿ ಹೋರಾಡಲು ಹೊರಟಿದ್ದಾರೆ. ಮಲೆನಾಡಿನಲ್ಲಿ ಪ್ರಬಲವಾಗಿರುವ ಕೋಮುವಾದಿ ಗಳನ್ನು ಚುನಾವಣೆ ಬಹಿಷ್ಕರಿಸಿ ಹೇಗೆ ಸೋಲಿಸ ಬಹುದು ಎಂದು ಸದ್ಯ ಅವರು ಇನ್ನೂ ವಿಶ್ಲೇಷಣೆ ಶುರು ಮಾಡಿಲ್ಲ.

ಕೋಮುವಾದಿಗಳನ್ನು ಸೋಲಿಸಬೇಕೆಂಬ ಬುದ್ಧಿಜೀವಿಗಳ ಭಾವನೆ ಸ್ವಾಗತಾರ್ಹ. ಆದರೆ ಬಹಳ ವಿಚಿತ್ರವೆಂದರೆ ಮಾವೋವಾದಿಗಳೆಲ್ಲ ಈ ವೇದಿಕೆಯಲ್ಲಿ ಪ್ರಧಾನ ಸೂತ್ರಧಾರಿಗಳು. ಹಿಂದೆ ಕರ್ನಾಟಕ ವಿಮೋಚನಾ ರಂಗ, ನಂತರ ಕೋಮು ಸೌಹಾರ್ದ ವೇದಿಕೆ, (ಇದು ನಕ್ಸಲೀಯರ ಅಂಗವೆಂದು ತಿಳಿದ ಬಹಳಷ್ಟು ಜನ ಅಲ್ಲಿಂದ ಹೊರ ಬಂದರು ನಂತರ) ಈಗ ಪ್ರಜಾಪ್ರಭುತ್ವಕ್ಕಾಗಿ ಒಕ್ಕೂಟ ವೇದಿಕೆ. ಅಲ್ಲಿಯೂ ಇಲ್ಲಿಯೂ ಕೆ.ಎಲ್. ಅಶೋಕ, ಡಾ: ಪೂರ್ಣಾನಂದ ಇತ್ಯಾದಿಗಳೇ ಸಂಚಾಲಕರು ಆದರಿಂದಲೇ ಮಾವೋವಾದಿ ಗಳು [redacted]

ಕಳೆದ ವರ್ಷ, ಮೇದಿನ 2008 ಕೇವಲ ಆಚರಣೆಯ ಮೇದಿನ ಆಗಿರುವುದಿಲ್ಲ, ಕಾರ್ಯಾಚರಣೆಯ ಮೇದಿನವಾಗುತ್ತದೆ ಎಂದು ರಾಜ್ಯದ ಕಾರ್ಮಿಕ ವರ್ಗ ಘೋಷಿಸಿತ್ತು. ಕನಿಷ್ಠ ಕೂಲಿಗಳು ಮತ್ತು ಸಾಮಾಜಿಕ ಭದ್ರತೆಯ ಬೇಡಿಕೆಗಳ ಪಟ್ಟಿಯೊಂದನ್ನು ತಯಾರಿಸಿ ಒಂದು ರಾಜ್ಯವ್ಯಾಪಿ ಆಂದೋಲನದ ಹಾಗೂ ಈ ಮೇದಿನದಂದು ಹೋರಾಟಗಳ ಯೋಜನೆಯೂ ರೂಪುಗೊಂಡಿತ್ತು. ಆದರೆ ಈ ನಡುವೆ ರಾಜ್ಯದಲ್ಲಿ ಮಧ್ಯಂತರ ಚುನಾವಣೆಗಳು ಬಂದಿವೆ. ಆದ್ದರಿಂದ ನಮಗೆ ಬಿಜೆಪಿಯನ್ನು ಸೋಲಿಸುವ, ಅದು ಅಧಿಕಾರಕ್ಕೆ ಬರದಂತೆ ತಡೆಯುವ ಹೋರಾಟದಲ್ಲಿ ಸೇರಿಕೊಳ್ಳುವುದಲ್ಲದೆ ಬೇರೆ ದಾರಿಯಿಲ್ಲವಾಗಿದೆ ಎನ್ನುವ ರಾಜ್ಯದ ಹಿರಿಯ ಕಾರ್ಮಿಕ ಮುಖಂಡ ವಿ.ಜೆ.ಕೆ. ನಾಯರ್ ಈ ಮೇದಿನದಂದು ರಾಜ್ಯದ ಕಾರ್ಮಿಕ ವರ್ಗದ ಮುಂದಿರುವ ಪ್ರಶ್ನೆಗಳನ್ನು ವಿಶ್ಲೇಷಿಸುತ್ತಾರೆ.


ಗಣಿ ಲೂಟಿ ಅವ್ಯಾಹತ

ಕರ್ನಾಟಕದ ವಿಧಾನಸಭಾ ಚುನಾವಣೆ ಮತ್ತು ಮೇ ದಿನ 2008

ದುಡಿವ ಜನತೆಯ ಮುಂದಿದೆ ಬಹುದೊಡ್ಡ ಸವಾಲು

ಮೇ ದಿನ 2008 ರ ಆಚರಣೆಯ ಸಂದರ್ಭದಲ್ಲಿ ನಾವು ಕರ್ನಾಟಕ ವಿಧಾನಸಭೆಯ ಮಧ್ಯಂತರ ಚುನಾವಣೆಗಳಲ್ಲಿ ಭಾಗವಹಿಸಬೇಕಾಗಿ ಬಂದಿದೆ. ಕರ್ನಾಟಕದ ಜನತೆಯೊಂದಿಗೆ ಬೆಕ್ಕು-ಇಲಿ ಆಟವಾಡಿದ ಮೂರು ಪ್ರಮುಖ ಪಕ್ಷಗಳಿಂದಾಗಿ ಈ ಚುನಾವಣೆ ಹೇರಲ್ಪಟ್ಟಿದೆ. ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯದ ನಂತರ 1983ರ ವರೆಗೂ ಆಳ್ವಿಕೆ ನಡೆಸಿತು. ಆಮೇಲೆ ಮತ್ತೆ 1989-94ರಲ್ಲಿ ಮತ್ತು 1999-2004ರಲ್ಲಿ ಅಧಿಕಾರ ನಡೆಸಿತು, 2004 ರಿಂದ 2006ರವರೆಗೆ ಜನತಾ ದಳ(ಎಸ್) ನೊಂದಿಗೆ ಅದನ್ನು ಹಂಚಿ ಕೊಂಡಿತು.1947 ರಿಂದ 1983ರ ವರೆಗಿನ ಅದರ ಅಖಂಡ ಆಳ್ವಿಕೆ 1977ರಲ್ಲಿ ಉತ್ತರ ಭಾರತದ ರಾಜ್ಯಗಳಲ್ಲಿ ಅದು ಅಧಿಕಾರದಿಂದ ಹೊರಗೆಸೆಯಲ್ಪಟ್ಟಾಗಲೂ ಮುರಿಯಲಿಲ್ಲ. ಕಾರ್ಮಿಕ ವರ್ಗ ತನ್ನ ನಿಕಟ ಮಿತ್ರ ರೈತಾಪಿಗಳ ಜತೆಗೂಡಿ ನಡೆಸಿದ ಆಂದೋಲನದಿಂದಷ್ಟೇ ಸರ್ವಾಧಿಕಾರ ಶಾಹಿ ಕಾಂಗ್ರೆಸ್‌ನ ತಳಪಾಯ ನಡುಗಿ 1983ರಲ್ಲಿ ಅದು ಅಧಿಕಾರದಿಂದ ಕಿತ್ತೆಸೆಯಲ್ಪಟ್ಟಿತು. ಹಲವು ಪಕ್ಷಗಳ ಒಂದು ಮೈತ್ರಿಕೂಟವನ್ನು ಅಧಿಕಾರಕ್ಕೆ ತರಲಾಯಿತು. ಇದರಲ್ಲಿ ಆಗಿನ ಜನತಾ ಪಕ್ಷದ ಪ್ರಾತಿನಿಧ್ಯ ಸಾಕಷ್ಟಿತ್ತು. ಇದರ ಫಲವಾಗಿ ರಾಮಕೃಷ್ಣ ಹೆಗ್ಡೆಯವರ ಮಂತ್ರಿಮಂಡಲ ಸ್ಥಾಪನೆಗೊಂಡಿತು. ಬೆಂಗಳೂರಿನ ಸಾರ್ವಜನಿಕ ವಲಯದ ಉದ್ದಿಮೆಗಳ ನೌಕರರ 4 ತಿಂಗಳ ಮುಷ್ಕರ/ಲಾಕೌಟ್, ಮೈಕೊ ಮತ್ತು ಐಟಿಸಿ ಹೋರಾಟ, ಹೊಟೇಲ್ ಕಾರ್ಮಿಕರು ಮುಂತಾದ ಅಸಂಘಟಿತ ಕಾರ್ಮಿಕರ ಹೋರಾಟ, ಜತೆಗೆ ಗುಂಡೂರಾಯರ ಸರ್ವಾಧಿಕಾಶಾಹಿ ಸರಕಾರದ ವಿರುದ್ಧ ಬಂಡೆದ್ದ ರೈತರು-ಈ ಎಲ್ಲಾ ದುಡಿಯುವ ಜನಗಳ ಸಕ್ರಿಯ ನೆರವಿನಿಂದ ಅಧಿಕಾರಕ್ಕೆ ಬಂದ ಜನತಾ ಪಾರ್ಟಿ ಸರಕಾರ ಜನಗಳ ಬೇಡಿಕೆಗಳಿಗೆ, ಆಕಾಂಕ್ಷೆಗಳಿಗೆ ಸ್ಪಂದಿಸಬೇಕಾಗಿ ಬಂತು. ಮುಷ್ಕರ ನಡೆಸಿದ ಕಾರ್ಮಿಕರು ಮತ್ತು ಹೋರಾಟಕ್ಕಿಳಿದ ರೈತರ ಮೇಲಿನ ಎಲ್ಲಾ ಪೋಲೀಸ್ ಕೇಸುಗಳನ್ನು ಆ ಸರಕಾರ ಹಿಂತೆಗೆಧುಕೊಂಡಿತು, ಕನಿಷ್ಟ ಕೂಲಿಗಳನ್ನು ಏರಿಸಿತು ಮತ್ತು ಪಶ್ಚಿಮ ಬಂಗಾಳದಲ್ಲಿ ಪಂಚಾಯತೀ ರಾಜ್ಯ ವ್ಯವಸ್ಥೆಯ ಅನುಷ್ಠಾನದ ಅಧ್ಯಯನ ಮಾಡಿ ರಾಜ್ಯದಲ್ಲಿ ಪಂಚಾಯತೀ ರಾಜ್ಯ-ವ್ಯವಸ್ಥೆಯನ್ನು ತಂದಿತು.


ನಿರಂತರ ಕೋಮುಗಲಭೆಗಳು

ಆ ಪಾರ್ಟಿ ಈಗಿಲ್ಲ

ಆ ಜನತಾ ಪಾರ್ಟಿ ಈಗ ಅಸ್ತಿತ್ವದಲ್ಲಿಲ್ಲ. ಅದೀಗ ಪರಿವರ್ತನೆಗೊಂಡು ಆಳುವ ವರ್ಗಗಳ ಸೇವೆಗೆ ನಿಂತಿದೆ. 1994ರಲ್ಲಿ ದೇವೇಗೌಡರ ನೇತೃತ್ವದಲ್ಲಿ ರಚನೆಗೊಂಡ ಮಂತ್ರಿಮಂಡಲದ ಜಾಗದಲ್ಲಿ ಜೆ ಹೆಚ್ ಪಟೇಲರ ಮಂತ್ರಿಮಂಡಲ ಬಂತು. ಅದು ಅಧಿಕಾರಶಾಹಿಗಳ ಆಳ್ವಿಕೆಗೆ, ಕಾರ್ಮಿಕ ವರ್ಗದ ಹೋರಾಟಗಳ ದಮನಕ್ಕೆ ಮತ್ತು ಅಧಿಕಾರಶಾಹಿಗಳು ಹಾಗೂ ರಾಜಕಾರಣಿಗಳು ರಾಜ್ಯವನ್ನು ಲೂಟಿ ಮಾಡಲು ಅವಕಾಶ ನೀಡಿತು. ಜನತಾ ದಳ ಮೇಲ್ನೋಟಕ್ಕೆ ಬಿಜೆಪಿಯೊಂದಿಗೆ ಕೈಜೋಡಿಸುವ ಪ್ರಶ್ನೆಯ ಮೇಲೆ ಜೆಡಿ(ಯು) ಮತ್ತು ಜೆಡಿ(ಎಸ್) ಆಗಿ ವಿಭಜನೆಗೊಂಡರೂ, ಜೆಡಿ(ಎಸ್) ಈ ವಿಷಯದಲ್ಲಿ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲಿಲ್ಲ. ಅದರ ಮುಂದಿನ ಪೀಳಿಗೆಯ ಮುಖಂಡರು ಬಿಜೆಪಿಯೊಂದಿಗೆ ಶಾಮೀಲಾಗಿ, ಗಣಿ ಮಾಫಿಯಾದ ಸಕ್ರಿಯ ನೆರವಿನಿಂದ ಕುಮಾರಸ್ವಾಮಿ/ಯಡಿಯೂರಪ್ಪ ಸರಕಾರವನ್ನು ಪ್ರತಿಷ್ಠಾಪಿಸಿದರು. ಈ ಇಪ್ಪತ್ತು ತಿಂಗಳ ಕಾಲ ರಾಜ್ಯದ ಜನತೆ ಆಳುವ ವರ್ಗಗಳು ಮತ್ತು ಆಳುವ ಪಕ್ಷಗಳ ಅಡಿ ನರಳಿದರು.


ಕೈಯಲ್ಲಿ ಖಡ್ಗ, ಗುಜರಾತ್ ಮಾದರಿಯೋ ಇದು

ಅವರ ಕಿತ್ತಾಟಗಳಿಂದಾಗಿ ನವಂಬರ್ 2007ರ ಸನ್ನಿವೇಶ ನಿರ್ಮಾಣವಾಯಿತು. ಆವಸರದಲ್ಲಿ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಪ್ರತಿಜ್ಞೆ ಸ್ವೀಕರಿಸಿದರು. ಆದರೆ ಮುಖ್ಯಮಂತ್ರಿಯಾಗಿ ಒಂದು ವಾರವನ್ನೂ ಪೂರೈಸಲಾಗದೆ ಈ ಚುನಾವಣೆಗಳು ಹೇರಲ್ಪಟ್ಟಿವೆ.

'ವಚನ ಭ್ರಷ್ಟರು' ಯಾರು?

ಯಡಿಯೂರಪ್ಪ ಮತ್ತು ಅವರ ಪಕ್ಷ ಬಿಜೆಪಿ ಕುಮಾರಸ್ವಾಮಿ/ದೇವೇಗೌಡರ 'ವಚನಭ್ರಷ್ಟತೆ'ಯ ಬೊಬ್ಬೆಯೆಬ್ಬಿಸಿತು. ಸಾಮೂಹಿಕ ಮಾಧ್ಯಮಗಳು ಅದನ್ನು ಎಂತಹ ಮಟ್ಟಕ್ಕೆ ಒಯ್ದವೆಂದರೆ ಬಹಳಷ್ಟು ಜನ ಆ ಆರೋಪಗಳನ್ನು ನಂಬು ವಂತಾಯಿತು. ಜೆಡಿ(ಎಸ್) ಮಾತಿಗೆ ತಪ್ಪಿತು ಎಂದು ಸತತವಾಗಿ ಆರೋಪಿಸುತ್ತಲೇ ಬಿಜೆಪಿ, ಕಾಂಗ್ರೆಸಿಗೆ ನಿಜವಾಗಿಯೂ ವಿರುದ್ಧವಾಗಿರುವುದು ತಾನು ಮಾತ್ರ ಎಂದೆಲ್ಲಾ ಬಿಂಬಿಸಲು ಪ್ರಯತ್ನಿಸುತ್ತಿದೆ. ಆಮೂಲಕ ಅದು ಐವತ್ತು ವರ್ಷಗಳಿಗೂ ಹೆಚ್ಚು ಕಾಲ ರಾಜ್ಯವನ್ನಾಳಿದ ಕಾಂಗ್ರೆಸಿನ ಸರ್ವಾಧಿಕಾರಶಾಹಿ ಮತ್ತು ಭ್ರಷ್ಟ ಆಳ್ವಿಕೆಯ ಬಗ್ಗೆ ಕರ್ನಾಟಕದ ಮತದಾರರ ಜುಗುಪ್ಸೆಯನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದೆ.

ನಿಜವಾಗಿಯೂ ಮಾತಿಗೆ ತಪ್ಪಿರುವುದು ಭಾರತೀಯ ಸಂವಿಧಾನ ಅಡಿಯಲ್ಲಿ ಪ್ರತಿಜ್ಞೆ ಸ್ವೀಕರಿಸಿದ ಬಿಜೆಪಿ ಮತ್ತು ಇತರ ಆಳುವ ವರ್ಗಗಳ ಪಕ್ಷಗಳೇ ಎಂಬುದನ್ನು ಜನಗಳಗೆ ನೆನಪಿಸಬೇಕಾದ ಸಮಯವೀಗ ಬಂದಿದೆ. ಭಾರತ ಒಂದು ಸಾರ್ವಭೌಮ, ಪ್ರಜಾಸತ್ತಾತ್ಮಕ, ಸಮಾಜವಾದಿ ಮತ್ತು ಜಾತ್ಯಾತೀತ ಗಣತಂತ್ರ ಎಂದು ಸಂವಿಧಾನದ ಪೀಠಿಕೆ ಹೇಳುತ್ತದೆ. ಬಿಜೆಪಿ ಮತ್ತು ಇತರ ಪಕ್ಷಗಳು ಈ ಸಂವಿಧಾನದ ಅಡಿಯಲ್ಲಿ ಪ್ರತಿಜ್ಞೆ ಸ್ವೀಕರಿಸಿದ್ದಾರೆ ಹಾಗೂ ಅದನ್ನು ಕಾಯುವ ಪ್ರತಿಜ್ಞೆ ಮಾಡಿದ್ದಾರೆ.

ಸಾರ್ವಭೌಮತೆಯನ್ನು ಅವರು ಕಾಪಾಡಲಿಲ್ಲ. ಭಾರತದ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆಯನ್ನು ಐಎಂಎಫ್/ವಿಶ್ವಬ್ಯಾಂಕ್/ಡಬ್ಲ್ಯುಟಿಒ ಮತ್ತು ಅಮೆರಿಕನ್ ಆಡಳಿತಕ್ಕೆ ಒತ್ತೆಯಿಟ್ಟು ಈ ಭರವಸೆಯನ್ನು ಮುರಿದಿದ್ದಾರೆ. ಬೆಲೆಯೇರಿಕೆ, ಶ್ರಮಜೀವಿಗಳ ಮೇಲೆ ಧಾಳಿ, ಗುತ್ತೇದಾರಿಗಳಿಗೆ ಅಗಾಧ ಲಾಭಗಳು, ಬಹುಪಾಲು ಜನಗಳ ಪಾಲಿಗೆ ಬರೇ ಸಂಕಟಗಳು- ನಮ್ಮ ಸಮಾಜದ ಈಗಿನ ಈ ಕಾಯಿಲೆಗಳಿಗೆಲ್ಲಾ ನಮ್ಮ ದೇಶದ ಸಾರ್ವಭೌಮತೆಯನ್ನು ಕಾಪಾಡುವ ಪ್ರತಿಜ್ಞೆಯನ್ನು ಮುರಿದಿರುವುದೇ ಕಾರಣ. ಆರೆಸ್ಸೆಸ್‌ನ ಕಾರ್ಯಕರ್ತರು ಬೆಳಗ್ಗಿನಿಂದ ಸಂಜೆಯ ವರೆಗೂ ಯಾವ ಮಾತೃಭೂಮಿಯ ಗುಣಗಾನ ಮಾಡುತ್ತಾರೋ ಅದೇ ದೇಶ ಅಮೆರಿಕಾದ ಅಪ್ಪಣೆಗಳನ್ನು ಶಿರಸಾವಹಿಸುವ ಬಗ್ಗೆ ಬಿಜೆಪಿಗೆ ಯಾವ ಮುಜುಗರವೂ ಇಲ್ಲ. ಅದು ಅವರ ಮನಸ್ಸಾಕ್ಷಿಯನ್ನು ತಟ್ಟುವುದೇ ಇಲ್ಲ. ಅವರು ಭಾರತವನ್ನು ಅಮೆರಿಕಾದ ಯುದ್ಧ ಮಿತ್ರನಾಗಿ ಮಾಡ ಬಯಸುತ್ತಾರೆ. ಪರಮಾಣು ವ್ಯವಹಾರದ ಪ್ರಶ್ನೆಯಲ್ಲಿ ಇದು ಸ್ಪಷ್ಟವಾಗಿ ಬಯಲಿಗೆ ಬಂತು. ಆ ವ್ಯವಹಾರಕ್ಕೆ ತಾವು ಸಹಿ ಹಾಕಬೇಕಾಗಿತ್ತು, ಕಾಂಗ್ರೆಸಿಗೆ ಆ ಅವಕಾಶ ಸಿಗಬಾರದಿತ್ತು ಎಂಬುದೇ ಬಿಜೆಪಿಯ ಅಳಲು. ಈಗ ಬಿಜೆಪಿ ಬೆಲೆಯೇರಿಕೆಯ ಬಗ್ಗೆ ಬೊಬ್ಬೆಯೆಬ್ಬಿಸುತಿದೆ. ಆದರೆ ಉದಾರೀಕರಣವನ್ನು ಅದು ಸಂಪೂರ್ಣವಾಗಿ ಅಪ್ಪಿಕೊಂಡಿದೆ. ಉದಾರೀಕರಣದ ಎರಡನೆ ಘಟ್ಟ ಜಾರಿಗೊಂಡದ್ದು ಎನ್‌ಡಿಎ ಆಳ್ವಿಕೆಯಲ್ಲಿಯೇ. ಆಗಲೇ ಭಾರತ ಹೊಳೆಯುತ್ತಿದೆ ಎಂದು ಅವರು ಹೇಳಿಕೊಂಡದ್ದು.

ಬಿಜೆಪಿಯ ತೋರಿಕೆಯ 'ಪ್ರಜಾಪ್ರಭುತ್ವ'

ಪ್ರಜಾಪ್ರಭುತ್ವ ಎಂದಿಗೂ ಬಿಜೆಪಿ ಮತ್ತು ಇತರ ಪಕ್ಷಗಳ ಧ್ಯೇಯವಾಗಿರಲಿಲ್ಲ. ಬಿಜೆಪಿಯ ಹಿಂದಿನ ಅವತಾರವಾದ ಜನಸಂಘ 1975ರಲ್ಲಿ ಇಂದಿರಾ ಗಾಂಧಿಯವರ ವಿರುದ್ಧ ಸರ್ವಾಧಿಕಾರ ಶಾಹಿ-ವಿರೋಧಿ ಆಂದೋಲನವನ್ನು ಸೇರಿಕೊಂಡಿತ್ತು. 1977ರಲ್ಲಿ ಜನತಾ ಪಾರ್ಟಿಯ ಬಾವುಟವನ್ನು ಬಳಸಿ ಜನಗಳು ಒಂದುಗೂಡಿ ನಾಗರಿಕ ಹಕ್ಕುಗಳನ್ನು ಮತ್ತೆ ಸ್ಥಾಪಿಸಿದ್ದರಿಂದ ಕಾಂಗ್ರೆಸಿನ ಗುತ್ತೇದಾರಿಕೆ ಅಂತ್ಯಗೊಂಡಿತು. ಆದರೆ ಜನತಾ ಪಕ್ಷ ತಾನು ಕಾಂಗ್ರೆಸಿಗಿಂತ ಭಿನ್ನವೆಂದೇನೂ ತೋರಿಸಿಕೊಳ್ಳಲಿಲ್ಲ. ಅದು ಆಳುವ ವರ್ಗಗಳ ಸೇವೆಯನ್ನು ಇನ್ನೂ ಉತ್ತಮ ರೀತಿಯಲ್ಲೇ ಮಾಡಿತು. ಇದರಿಂದಾಗಿ ಕೇಂದ್ರದಲ್ಲಿನ ಜನತಾ ಪಾರ್ಟಿ ಆಳ್ವಿಕೆ 1979ರಲ್ಲಿ ಕೊನೆಗೊಂಡಿತು. ಕಾಂಗ್ರೆಸ್-ವಿರೋಧಿ ಕೂಟದಿಂದಾಗಿ ಸರ್ವಾಧಿಕಾರಶಾಹಿ ಕೊನೆಗೊಂಡಿತು ಎಂಬ ಜನತಾ ಪಾರ್ಟಿಯ ಹೆಗ್ಗಳಿಕೆ ಸುಳ್ಳಾಯಿತು. ಸರ್ವಾಧಿಕಾರಶಾಹಿ ಎಂಬುದು ಯಾವುದೇ ಒಂದು ಪಕ್ಷದ ವಿಶಿಷ್ಟ ಗುಣವೇನಲ್ಲವೆಂಬ ಸಂಗತಿಯನ್ನು ಸಿಪಿಐ(ಎಂ)ನ ವಿಶ್ಲೇಷಣೆ ತೋರಿಸಿದೆ. ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆ ಅಧಿಕಾರದಲ್ಲಿ ಇರುವವರೆಗೆ ಅದು ಇರುತ್ತದೆ. ಬಂಡವಾಳಶಾಹಿ- ಭೂಮಾಲಕ ವ್ಯವಸ್ಥೆ ಇರುವ ವರೆಗೆ ಅದು ಜನಗಳನ್ನು ಖಂಡಿತ ಶೋಷಿಸುತ್ತದೆ.

ಜನಗಳೂ ಖಂಡಿತವಾಗಿಯೂ ಅದನ್ನು ಪ್ರತಿರೋಧಿಸುತ್ತಾರೆ. ಶ್ರಮಿಕ ಜನತೆಯ ಹೋರಾಟಗಳನ್ನು ಪ್ರಜಾಸತ್ತಾತ್ಮಕವಾಗಿ ದಮನ ಮಾಡಲು ಸಾಧ್ಯವಿಲ್ಲ. ಪ್ರಜಾಸತ್ತಾತ್ಮಕ ನೀತಿ-ನಿಯಮಗಳನ್ನು ಮೀರಿ ಸರಕಾರದ ಕಾನೂನುಗಳನ್ನು ರಚಿಸಲಾಗುತ್ತದೆ, ಕಾನೂನುಗಳನ್ನು ಮೀರಿ ಕ್ರಮಗಳನ್ನು ಕೈಗೊಂಡು ಜನಗಳನ್ನು ದಮನ ಮಾಡಲಾಗುತ್ತದೆ. ಇಂತಹ ಪ್ರಕ್ರಿಯೆಯ ಮೊತ್ತವೇ ಸರ್ವಾಧಿಕಾರಶಾಹಿ. ಇದು ಜನತೆಯ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳೊಂದಿಗೆ ನೇರವಾಗಿ ಸಂಘರ್ಷಕ್ಕೆ ಇಳಿಯುತ್ತದೆ. ಆದ್ದರಿಂದ ಒಂದು ಪಕ್ಷದ ಬೇರುಗಳು ಜನಗಳ ಹೋರಾಟಗಳಲ್ಲಿ (ಇದ್ದರೆ ಅವನ್ನೇ ಎಡ ಮತ್ತು ಪ್ರಜಾಪ್ರಭುತ್ವವಾದಿ


ಜನರನ್ನು ವಂಚಿಸಲು ಭರವಸೆಯ ಬಲೂನು

ಪಕ್ಷಗಳೆಂದು ನಾವನ್ನುವುದು) ಇದ್ದಿರದಿದ್ದರೆ ಅವು ಸರ್ವಾಧಿಕಾರಶಾಹಿಗಳೇ ಆಗುತ್ತವೆ. ಸರ್ವಾಧಿಕಾರಶಾಹಿ-ವಿರೋಧಿ ಹೋರಾಟಗಳಲ್ಲಿ ಸಿಪಿಐ(ಎಂ) ಜತೆಗೆ ಕೈಜೋಡಿಸಿ ನಿಂತ ಬಿಜೆಪಿ ಮತ್ತು ಜನತಾ ಪಾರ್ಟಿ ಎರಡೂ ಜನಸಮೂಹಗಳ ಹಿತಾಸಕ್ತಿಗಳಿಂದ ದೂರ ಸರಿದವು. 1983-85ರಲ್ಲಿ ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದ ಜನತಾ ಪಕ್ಷವನ್ನು ಜನತೆ ತಮ್ಮದೇ ಹಿತಾಸಕ್ತಿಯಿಂದ ಅಲ್ಲಿ ಪ್ರತಿಷ್ಠಾಪಿಸಿದರು. ಅದ್ದರಿಂದ ಅದು ಸರ್ವಾಧಿಕಾರಶಾಹಿಯಂತೆ ವರ್ತಿಸುವುದು ಸಾಧ್ಯವಿರಲಿಲ್ಲ.

ಬಿಜೆಪಿ ತಾನು ಸರ್ವಾಧಿಕಾರಶಾಹಿ- ವಿರೋಧಿ ಎಂದು ಯಾವುದೇ ರೀತಿಯಲ್ಲಿ ಹೇಳಿಕೊಳ್ಳಲು ಸಾಧ್ಯವಿಲ್ಲ. ಅವರಿಗೆ ಪ್ರಜಾಸತ್ತಾತ್ಮಕ ರೂಢಿಗಳ ಬಗ್ಗೆ ಗೌರವವೇ ಇಲ್ಲ. ಜನಗಳು ಮತ್ತು ಕಮ್ಯುನಿಸ್ಟರು ಅವರ ಕೋಮುವಾದಿ ನೀತಿಗಳನ್ನು ಸಹಿಸಿಕೊಳ್ಳುವುದಿಲ್ಲ ಎಂಬ ಕಾರಣಕ್ಕೇ ಅವರು 'ತ್ರಿಶೂಲ' ಹಿಡಿದು ಧಾಳಿ ಮಾಡುತ್ತಾರೆ. ಬಿಜೆಪಿಯವರು ಮೊದಲಿಗೆ ಕಾಂಗ್ರೆಸಿಗರ ಭ್ರಷ್ಟಾಚಾರಗಳನ್ನು ವಿರೋಧಿಸಿ ತಾವು ಶುದ್ಧರು, ಕಾಂಗ್ರೆಸ್-ವಿರೋಧ ತಮ್ಮ ತತ್ವ ಎಂದು ಬಿಂಬಿಸುತ್ತಿದ್ದರು. ಆದರೆ ದಿಲ್ಲಿಯಲ್ಲಿ ವಾಜಪೇಯಿ ಆಳ್ವಿಕೆಯ ನಂತರ ಮತ್ತು ರಾಜ್ಯದಲ್ಲಿ ಯಡಿಯೂರಪ್ಪನವರ ಉಪಮುಖ್ಯಮಂತ್ರಿತ್ವದ ನಂತರ ಬಿಜೆಪಿಗೆ ಭ್ರಷ್ಟಾಚಾರದ ವಿರುದ್ಧ ಕೂಗಲು ದನಿಯೇ ಉಳಿದಿಲ್ಲ. ಸಮಸ್ತ ಭೂಮಾಫಿಯಾ, ಗಣಿ ಮಾಫಿಯಾ ಮತ್ತು ಇತರ ಎಲ್ಲಾ ರೀತಿಗಳ ಮಾಫಿಯಾ ಅವರ ಪಕ್ಷಕ್ಕೆ ಹಿಂಡುಗಟ್ಟಿ ಹೋಗುತ್ತಾರೆ. ಕೆಲವೊಮ್ಮೆ ಬೇರೆ ಪಕ್ಷಗಳನ್ನೂ ಸೇರಿಕೊಳ್ಳುತ್ತಾರೆ, ಆಗ ಬಿಜೆಪಿಯಿಂದ ಒದೆಸಿಕೊಳ್ಳುತ್ತಾರೆ. ಬಳ್ಳಾರಿಯಲ್ಲಿ ಅನಿಲ್ ಲಾಡ್ ಮೇಲೆ ಅವರು ಧಾಳಿ ನಡೆಸಿರುವುದು ಗಣಿದೊರೆಗಳನ್ನು ತಮ್ಮ ಬಳಿಯೇ ಉಳಿಸಿಕೊಳ್ಳಬೇಕು, ತಮ್ಮ ಪ್ರತಿಸ್ಪರ್ಧಿ ಕಾಂಗ್ರೆಸ್ ಜತೆಗೂಡಲು ಬಿಡಬಾರದು ಎಂಬ ಅವರ ಆಕಾಂಕ್ಷೆಯನ್ನು ತೋರಿಸಿದೆ.

ಬೆಂಗಳೂರಿನ ಜನತೆ ಬಿಜೆಪಿ ಮತ್ತು ಇತರ ಪಕ್ಷಗಳೊಂದಿಗೆ ಇರುವ ಈ ಭೂಮಾಫಿಯಾದಿಂದಾಗಿ ಭಾರಿ ಬೆಲೆ ತೆರಬೇಕಾಗಿ ಬಂದಿದೆ. ಅವರ ಅಭ್ಯರ್ಥಿಗಳ ಬಳಿಯಿರುವ ನೂರಾರುಕೋಟಿ ರೂಪಾಯಿಗಳು ಅವರೆಲ್ಲಾ ಜನಗಳನ್ನು ಹೇಗೆ ಲೂಟಿ ಹೊಡೆದಿದ್ದಾರೆ ಎಂಬುದಕ್ಕೆ ಬಲವಾದ ಸಾಕ್ಷಿಗಳು. ಜನ ಸರಿಯಾದ ವಾಸಸ್ಥಳವಿಲ್ಲದೆ, ಮೂಲಭೂತ, ನಾಗರಿಕ ಸೌಲಭ್ಯಗಳಿಲ್ಲದೆ ನರಳುತ್ತಿದ್ದಾರೆ. ನಗರಪ್ರದೇಶಗಳ ಈ ಬಿಕ್ಕಟ್ಟನ್ನು


ಕೊನೆಗೂ ಸಿಗಲಿಲ್ಲ ಬಿಪಿಎಲ್ ರೇಷನ್ ಕಾರ್ಡ್

ಪರಿಹರಿಸಲು ಯಾವುದೇ ಆಸಕ್ತಿ ತೋರದ ಬಿಜೆಪಿ ಮತ್ತಿತರ ಪಕ್ಷಗಳು ಆ ಬಿಕ್ಕಟ್ಟಿನ ಲಾಭ ಪಡೆಯ ಬಯಸುತ್ತಾರೆ. ತಮಗೆ ಪ್ರಜಾಪ್ರಭುತ್ವ ನಿಯಮಾವಳಿಗಳು ಬೇಕಿಲ್ಲ ಎಂದು ಬಿಜೆಪಿ ಮತ್ತಿತರ ಪಕ್ಷಗಳು ಸ್ಪಷ್ಟವಾಗಿ ತೋರಿಸುತ್ತಿವೆ. ಬಿಜೆಪಿಯ ಸರ್ವಾಧಿಕಾರಶಾಹಿ- ವಿರೋಧ ಮತ್ತು ಭ್ರಷ್ಟಾಚಾರ-ವಿರೋಧ ಕೇವಲ ತೋರಿಕೆ ಎಂದು ತಿಳಿಯಲು ಬಹಳ ಆಳಕ್ಕೇನೂ ಹೋಗಬೇಕಾಗಿಲ್ಲ.

'ಹಿಂದೂ ರಾಷ್ಟ್ರ'ದ ಹೆಸರಲ್ಲಿ ಶೋಷಣೆ

ಜಾತ್ಯಾತೀತತೆ ನಮ್ಮ ಸಂವಿಧಾನದ ಇನ್ನೊಂದು ಅಡಿಗಲ್ಲು. ಬಿಜೆಪಿ ಅದನ್ನು ಹುಸಿ ಜಾತ್ಯಾತೀತತೆ ಎನ್ನುತ್ತದೆ. ಅದರ ಜಾಗದಲ್ಲಿ 'ಸರ್ವಧರ್ಮ ಸಮಭಾವ'ವನ್ನು ನಿಜವಾದ ಜಾತ್ಯಾತೀತತೆಯಾಗಿ ತರಬೇಕು ಎಂದು ಅವರು ಮಾತನಾಡುವುದಿದೆ. ಜಾತ್ಯಾತೀತತೆಯೆಂದರೆ ಪ್ರಭುತ್ವವನ್ನು ಮತ-ಧರ್ಮಗಳಿಂದ ಸಂಪೂರ್ಣವಾಗಿ ದೂರವಿಡುವುದು. ಬಿಜೆಪಿಗೆ ಬೇಕಾಗಿರುವುದು ತದ್ವಿರುದ್ಧ-ಅಂದರೆ ಪ್ರಭುತ್ವದೊಳಗೆ ಮತ-ಧರ್ಮಕ್ಕೆ ಅವಕಾಶ. ಮೊದಲನೆಯದಾಗಿ ಅವರಿಗೆ ಹಿಂದೂರಾಷ್ಟ್ರ ಬೇಕು. ಇದರಲ್ಲಿ ಬೇರೆ ಧರ್ಮಗಳ ಜನರು ಎರಡನೇ ದರ್ಜೆಯ ನಾಗರಿಕರು. ಕೇವಲ ಧರ್ಮ ಮಾತ್ರವೇ ನೈತಿಕತೆಯನ್ನು ಕಾಪಾಡುತ್ತದೆ ಎಂದು ಅವರು ಸಾರುತ್ತಾರೆ. ಸಾಮಾಜಿಕ ವರ್ತನೆಗಳು ಮತ್ತು ನೈತಿಕತೆ ಧರ್ಮಗಳ ಅಳವಿಗೆ ಮೀರಿದವುಗಳು. ಜನಗಳನ್ನು ಶೋಷಿಸುವ ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆ ಮತ್ತು ಅದಕ್ಕೆ ವಿರೋಧವೆಲ್ಲ ಧರ್ಮದ ವ್ಯಾಪ್ತಿಯ ಹೊರಗಿರುವಂತಹವುಗಳು. ಸಾಮ್ರಾಜ್ಯಶಾಹಿಗೆ ವಿರೋಧ ಕೂಡಾ ಧರ್ಮದ ಪರಿಧಿಯ ಹೊರಗಿರುವಂತದ್ದು. ಬಿಜೆಪಿ ಹಿಂದೂರಾಷ್ಟ್ರದ ಹೆಸರಿನಲ್ಲಿ ಹಿಂದೂ ಜನಗಳ ಮತ್ತು ಕಡಿಮೆ ಸಂಖ್ಯೆಯಲ್ಲಿರುವ ಇತರ ಧರ್ಮಗಳ ಜನರ ಶೋಷಣೆಯನ್ನು ಶಾಶ್ವತಗೊಳಿಸ ಬಯಸುತ್ತದೆ. ಜನಗಳನ್ನು ಒಡೆದು, ಜಾತ್ಯಾತೀತತೆಯ ಸೌಧದ ಮೇಲೆ ಧಾಳಿಮಾಡಿ ಅವರು ಯಾವ ಪ್ರತಿಜ್ಞೆಯ ಮೇಲೆ ಚುನಾವಣೆಗಳಲ್ಲಿ ಭಾಗವಹಿಸುತ್ತಿದ್ದಾರೋ ಆ ವಚನವನ್ನೇ ಮುರಿಯುತ್ತಿದ್ದಾರಷ್ಟೇ ಅಲ್ಲ, ದೇಶದ ಐಕ್ಯತೆಯನ್ನೆ ಅಪಾಯಕ್ಕೀಡು ಮಾಡುತ್ತಿದ್ದಾರೆ. ಗುಜರಾತ್ ಮಾದರಿಯನ್ನು ಹಾಡಿಹೊಗಳಿ ಅವರು ಕರ್ನಾಟಕದ ಜಾತ್ಯಾತೀತ ನೆಲೆಗಳನ್ನು ಹೀಗಳೆಯುತ್ತಿದ್ದಾರೆ.



ಬಿಜೆಪಿ ಮತ್ತು ಸಮಾಜವಾದ !

ಕೊನೆಯದಾಗಿ, ಸಂವಿಧಾನ ಸೌಧದ ಅತಿ ಮುಖ್ಯವಾದ ಅಡಿಗಲ್ಲಾದ ಸಮಾಜವಾದವನ್ನು ರಕ್ಷಿಸುವ ಬಯಕೆ ಬಿಜೆಪಿಯ ಕನಸು-ಮನಸಿನಲ್ಲೂ ಇಲ್ಲ. ಕಾಂಗ್ರೆಸ್ ಬಹಳ ಹಿಂದೆಯೇ ಈ ತತ್ವವನ್ನು ತ್ಯಜಿಸಿದೆ. ಇನ್ನು ಕಾರ್ಮಿಕ ವರ್ಗದ ಆಂದೋಲನದ ನಾವು ಪ್ರತಿಯೊಬ್ಬರಿಂದ ಅವರವರ ಸಾಮರ್ಥ್ಯಕ್ಕೆ ಅನುಗುಣವಾಗಿ, ಪ್ರತಿಯೊಬ್ಬರಿಗೆ ಅವರವರ ಕೆಲಸಕ್ಕೆ ಅನುಗುಣವಾಗಿ ಎಂಬ ತತ್ವಕ್ಕೆ ಬದ್ಧರಾಗಿದ್ದೇವೆ. ಇದೇ ಸಮಾಜವಾದದ ತಳಪಾಯ. ಸಂವಿಧಾನದ ಪ್ರಭುತ್ವ ನೀತಿಯ ನಿರ್ದೇಶಕ ಸೂತ್ರಗಳೆಲ್ಲಾ ಪ್ರಭುತ್ವ ಇದನ್ನು ಕೊಡಮಾಡಬೇಕು ಎಂದು ನಿರ್ದೇಶಿಸುತ್ತದೆ. ಸಂವಿಧಾನವನ್ನು ಕಾಪಾಡುವ ಪ್ರತಿಜ್ಞೆಯನ್ನು ಕೈಗೊಳ್ಳುವ ಎಲ್ಲ ಬಿಜೆಪಿ ಮಂದಿ ಕಾಂಗ್ರೆಸಿಗರು ಹಾಗೂ ಜನತಾಮಂದಿ ಈ ಪ್ರತಿಜ್ಞೆ ಕೈಗೊಳ್ಳುತ್ತಲೇ ಅದನ್ನು ಮುರಿಯುತ್ತಿದ್ದಾರೆ.

ಕಾರ್ಮಿಕ ಆಂದೋಲನಕ್ಕೆ ಸಮಾಜವಾದದ ಆಂದೋಲನವು ಪ್ರಜಾಪ್ರಭುತ್ವದ ಆಂದೋಲನವೂ ಆಗಿದೆ. ನಮ್ಮ ಆಂದೋಲನ ಜಾತ್ಯಾತೀತವೂ ಆಗಿದೆ ಮತ್ತು ದೇಶದ ಸಾರ್ವಭೌಮತೆಯನ್ನು ಅದು ಕಾಪಾಡುತ್ತಿದೆ. ಪ್ರತಿದಿನ ಬೆವರು ಸುರಿಸಿ ದುಡಿವ ಕಾರ್ಮಿಕರು ಮತ್ತು ರೈತರು ತಮ್ಮ ಶ್ರಮದಿಂದ ಸೃಷ್ಟಿಸುವ ಮೌಲ್ಯವನ್ನು ತಮ್ಮ ಬಳಿಯೇ ಉಳಿಸಿಕೊಳ್ಳುವ ತಮ್ಮ ಹಕ್ಕನ್ನು ಎತ್ತಿ ಹಿಡಿಯುತ್ತಾರೆ. ಇದರಿಂದ ಮಾತ್ರವೇ ಸಮಾಜವಾದ, ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತತೆಯ ಭರವಸೆ ಸಾಧ್ಯ.

ಮೇದಿನ ಈ ಧ್ಯೇಯಕ್ಕೆ, ಅಂತರ್‍ರಾಷ್ಟ್ರೀಯವಾಗಿ ಸಮಾಜವಾದದ ಧ್ಯೇಯಕ್ಕೆ ಬದ್ಧವಾಗಿದೆ. ಮೇದಿನದ ಅಂತರ್‍ರಾಷ್ಟ್ರೀಯತೆ ಶ್ರಮಜೀವಿ ವರ್ಗದ ಅಂತರ್‍ರಾಷ್ಟ್ರಿಯತೆಯೂ ಆಗಿದ್ದು ಅದು ಬೇರೆ ಯಾವುದೇ ದೇಶದ ಜನತೆಯ ವಿರುದ್ಧ ಗುರಿಯಿಡುವುದಿಲ್ಲ. ಅದು ಗುರಿಯಿಟ್ಟಿರುವುದು ಅಂತರ್‍ರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟಗಳಲ್ಲಿ ನಡೆಯುತ್ತಿರುವ ಶೋಷಣೆಯ ವಿರುದ್ಧ ಮಾತ್ರ. ಶೋಷಣೆಗೆ ಗಡಿಗಳಿಲ್ಲ, ಶೋಷಣೆಯ ವಿರುದ್ಧ ಹೋರಾಟಕ್ಕೂ ಗಡಿಗಳಿಲ್ಲ. ಆದ್ದರಿಂದಲೆ ಮೇದಿನ ಅಂತರ್‍ರಾಷ್ಟ್ರೀಯ ಆಯಾಮ ಹೊಂದಿದೆ. ತಮ್ಮದೇ ಸ್ವಂತ ಶೋಷಕರ ವಿರುದ್ಧ ಹೋರಾಡುವ ಮತ್ತು ಬೇರೆ ಪ್ರತಿಯೊಂದು ದೇಶದ ಜನಗಳು ತಮ್ಮದೇ ಶೋಷಕರ ವಿರುದ್ಧ ಹೋರಾಡುವಂತೆ ಮಾಡುವ ಕರ್ತವ್ಯಕ್ಕೆ ಬದ್ಧರಾಗಿದ್ದಾರೆ. ಈ ಮೂಲಕವೇ ಮೇದಿನದ ಅಂತರ್‍ರಾಷ್ಟ್ರೀಯ ಸೌಹಾರ್ದತೆ ಈಡೇರುತ್ತದೆ.

ಕಳೆದ ವರ್ಷ, ಮೇ ದಿನ 2008 ಕೇವಲ ಆಚರಣೆಯ ಮೇದಿನ ಆಗಿರುವುದಿಲ್ಲ, ಕಾರ್ಯಾಚರಣೆಯ ಮೇದಿನವಾಗುತ್ತದೆ ಎಂದು ನಾವು ಘೋಷಿಸಿದ್ದೆವು. ಕನಿಷ್ಟ ಕೂಲಿಗಳು ಮತ್ತು ಸಾಮಾಜಿಕ ಭದ್ರತೆಯ ಬೇಡಿಕೆಗಳ ಪಟ್ಟಿಯೊಂದನ್ನು ತಯಾರಿಸಿ ಒಂದು ರಾಜ್ಯವ್ಯಾಪಿ ಆಂದೋಲನದ ಹಾಗೂ ಈ ಮೇದಿನದಂದು ಹೋರಾಟಗಳ ಯೋಜನೆಯನ್ನು ರೂಪಿಸಿದ್ದೆವು. ಆದರೆ ಈ ನಡುವೆ ಮಧ್ಯಂತರ ಚುನಾವಣೆಗಳು ಬಂದಿವೆ. ಆದ್ದರಿಂದ ನಮಗೆ ಬಿಜೆಪಿಯನ್ನು ಸೋಲಿಸುವ, ಅದು ಅಧಿಕಾರಕ್ಕೆ ಬರದಂತೆ ತಡೆಯುವ ಹೋರಾಟದಲ್ಲಿ ಸೇರಿಕೊಳ್ಳುವುದಲ್ಲದೆ ಬೇರೆ ದಾರಿಯಿಲ್ಲದಾಗಿದೆ. ನಮ್ಮ ಹನ್ನೊಂದು ಅಭ್ಯರ್ಥಿಗಳು ಸಿಪಿಐ(ಎಂ) ಪರವಾಗಿ ಸ್ಪರ್ಧಿಸುತ್ತಿದ್ದಾರೆ. ಇನ್ನೂ ಹನ್ನೆರಡು ಮಂದಿ ಸಿಪಿಐನಿಂದ ಸ್ಪರ್ಧಿಸುತ್ತಿದ್ದಾರೆ. ಮೊದಲ ನೆಯದಾಗಿ ನಾವು ಎಡ ಸಿದ್ಧಾಂತಕ್ಕೆ ಬದ್ಧರಾದ ಇವರೆಲ್ಲರ ಯಶಸ್ಸಿಗೆ ಒಟ್ಟಾಗಿ ಶ್ರಮಿಸುವ ಆಶಯ ಹೊಂದಿದ್ದೇವೆ. ಜಾತ್ಯಾತೀತರೂ, ಪ್ರಜಾಪ್ರಭುತ್ವ ವಾದಿಗಳೂ ಆಗಿರುವ ಕೆಲವು ಗೆಳೆಯ ರಿದ್ದಾರೆ. ಎಡ ಪಕ್ಷಗಳ ಅಭ್ಯರ್ಥಿಗಳಿಲ್ಲದ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಸೋಲಿಸಬಲ್ಲ ಅಭ್ಯರ್ಥಿಗಳು ಯಾರು ಎಂದು ಅಂತಿಮವಾಗಿ ನಿರ್ಧರಿಸುತ್ತೇವೆ. ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದಿ ಜನಗಳು ಇಂತಹ ಅಭ್ಯರ್ಥಿಗಳನ್ನು ಬೆಂಬಲಿಸಬೇಕು ಎಂದು ಆಗ್ರಹಿಸುತ್ತೇವೆ.

ಚುನಾವಣೆಗಳ ನಂತರ ಕರ್ನಾಟಕದ ವಿಧಾನಸಭೆ ಎಡ ಮತ್ತು ಪ್ರಜಾಪ್ರಭುತ್ವ ವಾದಿ ಶಾಸಕರ ಒಂದು ಸೂಕ್ತ ಪ್ರಾತಿನಿಧ್ಯವನ್ನು ಪಡೆಯುವಂತಾಗಲಿ. ಈ ಶಾಸಕರು ತಕ್ಷಣವೇ ನಾವು ರಾಜ್ಯದಲ್ಲಿ ನಡೆಸಬೇಕೆಂದಿರುವ ಸಂಸದೀಯೇತರ ಹೋರಾಟಗಳನ್ನು ಬೆಂಬಲಿಸುತ್ತಾರೆ.

ಇಂತಹ ಒಂದು ಮಾರ್ಗವೇ ಕರ್ನಾಟಕದ ದುಡಿಮೆಗಾರ ಜನತೆಯ ಹಿತಾಸಕ್ತಿಗಳನ್ನು ಈಡೇರಿಸ ಬಲ್ಲುದು.

ಸಿಐಟಿಯು ಮೇ ದಿನದ ಪ್ರಣಾಳಿಕೆ 2008

ಮತ್ತೊಂದು ಮೇ ದಿನ ಬಂದಿದೆ. ದೇಶದ ಹಾಗೂ ಜಗತ್ತಿನ ಕಾರ್ಮಿಕ ಚಳುವಳಿಯ ಮುಂದಿನ ಸವಾಲು, ಸಾಧನೆ ಏನು? ಕಾರ್ಮಿಕ ವರ್ಗದ ಪ್ರತಿಜ್ಞೆ ಏನು?

ಸಾಮಾಜಿಕ ನ್ಯಾಯ, ಶಾಂತಿ ಮತ್ತು ಉತ್ತಮಮಟ್ಟದ ಜೀವನಕ್ಕಾಗಿ ಹೋರಾಡುವ ಪ್ರತಿಜ್ಞೆ

ಒಂದು ಗೌರವಸ್ಥ ವೇತನ, ಸಾಮಾಜಿಕ ಭದ್ರತೆ, ಕಾರ್ಮಿಕ ಹಕ್ಕುಗಳು ಮತ್ತು ಎಲ್ಲರಿಗೂ ಉದ್ಯೋಗಕ್ಕಾಗಿ ಹೋರಾಡುವ ಹಾಗೂ ಸಾಮಾಜಿಕ ನ್ಯಾಯ, ಶಾಂತಿ ಮತ್ತು ಎಲ್ಲ ಜನಗಳಿಗೂ ಒಂದು ಉತ್ತಮ ಮಟ್ಟದ ಜೀವನ ಗಳಿಸಲು ಶ್ರಮಿಸುವ ಪ್ರತಿಜ್ಞೆಯನ್ನು ದೇಶದ ಪ್ರಮುಖ ಕಾರ್ಮಿಕ ಸಂಘಟನೆಯಾದ ಸಿಐಟಿಯು 2008ರ ಮೇದಿನದ ಸಂದರ್ಭದಲ್ಲಿ ಮಾಡಿದೆ.

ಪ್ರತಿವರ್ಷ ಮೇ 1ರಂದು ಅಂತರ್ರಾಷ್ಟ್ರೀಯ ಕಾರ್ಮಿಕ ದಿನಾಚರಣೆಯ ಸಂದರ್ಭದಲ್ಲಿ ಸಿಐಟಿಯು ಮೇದಿನದ ಪ್ರಣಾಳಿಕೆಯನ್ನು ಹೊರಡಿಸುತ್ತಿದ್ದು ಇದರಲ್ಲಿ ಹಿಂದಿನ ಒಂದು ವರ್ಷದಲ್ಲಿ ವಿಶ್ವಾದ್ಯಂತ ಕಾರ್ಮಿಕ ವರ್ಗದ ಸಾಧನೆಗಳು- ಸವಾಲುಗಳನ್ನು ಪರಾಮರ್ಶಿಸುತ್ತದೆ. ಈ ಬಾರಿಯ ಮೇದಿನದ ಪ್ರಣಾಳಿಕೆ ಮೇದಿನ 2008 ಜಾಗತಿಕ ಕಾರ್ಯಾಚರಣೆ ತೀವ್ರಗೊಳ್ಳುವ ಮತ್ತು ವರ್ಗನೆಲೆಯ ಕಾರ್ಮಿಕ ಸಂಘಗಳ ಕ್ರೋಢೀಕರಣದ ಭರವಸೆಗಳನ್ನು ಹೊತ್ತು ತಂದಿದೆ ಎಂಬ ಆಶಾಭಾವನೆಯನ್ನು ವ್ಯಕ್ತ ಪಡಿಸಿದೆ.

ನಿಜ, 2008ರ ವರ್ಷ ಒಂದು ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನೊಂದಿಗೆ ಆರಂಭವಾಗಿದೆ. ಇದರಿಂದಾಗಿ ನಿರ್ದಿಷ್ಟವಾಗಿ ಕಾರ್ಮಿಕ ವರ್ಗದ ಮೇಲೆ, ಒಟ್ಟಾರೆಯಾಗಿ ಸಮಸ್ತ ಜನಸಾಮಾನ್ಯರ ಮೇಲೆ ಮುಂಬರುವ ದಿನಗಳಲ್ಲಿ ಹೆಚ್ಚೆಚ್ಚು ಧಾಳಿಗಳು ಬರಲಿವೆ. ನವ-ವಸಾಹತೀಕರಣ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ಸಾಮ್ರಾಜ್ಯಶಾಹಿಯ ಸಶಸ್ತ್ರ ಮಧ್ಯಪ್ರವೇಶದ ಕರಾಳ ಛಾಯೆ ಜಗತ್ತನ್ನೆಲ್ಲಾ ವ್ಯಾಪಿಸಿದೆ. ಐಎಂಎಫ್, ವಿಶ್ವಬ್ಯಾಂಕ್ ಮತ್ತು ಡಬ್ಲ್ಯುಟಿಒದ ಪಥ್ಯಗಳ ವಿಫಲತೆ ಜಗಜ್ಜಾಹೀರಾಗುತ್ತಿದ್ದು ಈ ಸಂಸ್ಥೆಗಳು ಹತಾಶೆಗೊಂಡಿವೆ. ಅಮೆರಿಕಾದ ಆರ್ಥಿಕತೆ ಕುಸಿಯುತ್ತಿದೆ, ಡಾಲರ್ ಬೆಲೆ ಇಳಿಮುಖವಾಗುತ್ತಿದೆ. ಮುಂಬರುವ ದಿನಗಳಲ್ಲಿ ಜಗತ್ತು ಇನ್ನಷ್ಟು ಹಿಂಸಾಚಾರಗಳನ್ನು ಕಾಣಬೇಕಾಗಬಹುದು ಎಂದು ಸಿಐಟಿಯು ಪ್ರಣಾಳಿಕೆ ಎಚ್ಚರಿಸಿದೆ.

ಮಹತ್ವದ ಮುನ್ನಡೆಗಳು

ನವ-ಉದಾರವಾದಿ ಆರ್ಥಿಕ ನೀತಿಗಳಿಂದಾಗಿ ಕೆಲವೇ ಸೂಪರ್- ಶ್ರೀಮಂತರು ಮತ್ತು ಅಪಾರ ಸಂಖ್ಯೆಯ ಜನಸಾಮಾನ್ಯರ ನಡುವೆ ಮಹಾಕಂದರ ಬೆಳೆದಿದೆ. ನಿರುದ್ಯೋಗ ಏರುತ್ತಿದೆ, ಕೆಲಸದ ಭದ್ರತೆ ಮತ್ತು ಸಾಮಾಜಿಕ ಭದ್ರತೆ ಇಳಿಮುಖವಾಗುತ್ತಿದೆ. ನಾಗಾಲೋಟ ಹೂಡಿರುವ ಹಣದುಬ್ಬರ ಮತ್ತು ಆಹಾರ ಕೊರತೆಗಳು ವಿಶ್ವಾದ್ಯಂತ, ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳ ಕಾರ್ಮಿಕ ವರ್ಗದ ಬದುಕನ್ನು ಶೋಚನೀಯಗೊಳಿಸಿದೆ. ಇದರಿಂದಾಗಿ ಎಲ್ಲೆಲ್ಲೂ ಸಾಮಾಜಿಕ ತಳಮಳ, ರಾಜಕೀಯ ಉತ್ಪಾತ ಹಾಗೂ ಸರಕಾರಗಳಿಂದ ಪ್ರಜಾಪ್ರಭುತ್ವ ಹಕ್ಕುಗಳ ದಮನ ಹೆಚ್ಚುತ್ತಿದೆ ಎಂದಿರುವ ಮೇದಿನ-2008ರ ಪ್ರಣಾಳಿಕೆ , ಇಂತಹ ಹಿನ್ನೆಲೆಯಲ್ಲೂ ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ, ಅಮೆರಿಕನ್ ಯಜಮಾನಿಕೆಯ ವಿರುದ್ಧ ಪ್ರತಿರೋಧ ದಿನೇದಿನೇ ಗಟ್ಟಿಗೊಳ್ಳುತ್ತಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. ಈಗಾಗಲೇ ಲ್ಯಾಟಿನ್ ಅಮೆರಿಕಾದ ದೇಶಗಳಲ್ಲಿ ಪ್ರಮುಖ ರಾಜಕೀಯ ಬದಲಾವಣೆಗಳಾಗಿವೆ. ಇತ್ತೀಚೆಗೆ ಪಾಕಿಸ್ತಾನ ಮತ್ತು ನೇಪಾಳಗಳಲ್ಲೂ ಮಹತ್ವದ ಮುನ್ನಡೆಗಳಾಗಿವೆ.

ವಿಶ್ವಾದ್ಯಂತ ಕಾರ್ಮಿಕ ಸಂಘಗಳ ಕಾರ್ಯಾಚರಣೆಗಳ ಒಂದು ಅಲೆ ಮತ್ತು ನವ-ಉದಾರವಾದಿ ವಿಶ್ವ ವ್ಯವಸ್ಥೆಗೆ ಸವಾಲೊಡ್ಡುವ ಸಮರಧೀರ ಶಕ್ತಿಗಳ ಮುನ್ನಡೆ ಕಂಡು ಬರುತ್ತಿದೆ, ಈ ಅವಧಿ ಪ್ರಗತಿಪರ ಮತ್ತು ಸಮರಶೀಲ ಕಾರ್ಮಿಕ ಸಂಘಗಳ ಜಾಗತಿಕ ಐಕ್ಯತೆಯ ಒಂದು ಹೊಸ ಯುಗ ಆರಂಭವಾಗಿರುವುದನ್ನು ಸೂಚಿಸಿದೆ. ಇವು ಜಾಗತೀಕರಣದ ವಿರುದ್ಧ ಕಾರ್ಮಿಕ ಸಂಘಗಳ ಹಕ್ಕುಗಳಿಗಾಗಿ ಒಂದು ಸರ್ವಸಾಮಾನ್ಯ ತಿಳುವಳಿಕೆಯನ್ನು ಬೆಸೆಯಲು ನಿರಂತರವಾಗಿ ಶ್ರಮಿಸುತ್ತಿವೆ. ಈ ಅವಧಿಯಲ್ಲಿ ವಲಯವಾರು ಮತ್ತು ಜಾಗತಿಕ ಕೈಗಾರಿಕಾವಾರು ಕಾರ್ಮಿಕ ಸಂಘಗಳು ಮತ್ತೆ ಒಟ್ಟು ಸೇರಿ ಉದ್ಯೋಗಹೀನತೆಯ ವಿರುದ್ಧ, ಕಾರ್ಮಿಕ ಹಕ್ಕುಗಳು, ಗೌರವಸ್ಥ ವೇತನಗಳು ಮತ್ತು ಸಾಮಾಜಿಕ ಭದ್ರತೆಗಾಗಿ ಪ್ರತಿರೋಧ ಆಂದೋಲನಗಳನ್ನು ಹರಿಯ ಬಿಟ್ಟಿರುವುದನ್ನು ಕಂಡಿದ್ದೇವೆ. ಅಭಿವೃದ್ಧಿಶೀಲ ದೇಶಗಳ ಕಾರ್ಮಿಕ ಸಂಘಗಳು ಮುಂದುವರೆದ ಆರ್ಥಿಕಗಳ ತಮ್ಮ ಮಿತ್ರರೊಡಗೂಡಿ ಸಾಮ್ರಾಜ್ಯಶಾಹಿ ಜಾಗತೀಕರಣದ ದುಷ್ಟ ಪರಿಣಾಮಗಳ ವಿರುದ್ಧ ಒಂದು ಸಾರ್ವತ್ರಿಕ ಹೋರಾಟದಲ್ಲಿ ಪ್ರಗತಿಪರ ಶಕ್ತಿಗಳನ್ನು ಮತ್ತು ಕಾರ್ಮಿಕ ಸಂಘಗಳನ್ನು ಅಣಿನೆರೆಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಿವೆ ಎಂಬುದನ್ನು ಸಿಐಟಿಯುವಿನ ಮೇದಿನದ ಪ್ರಣಾಳಿಕೆ ತೃಪ್ತಿಯಿಂದ ಗಮನಿಸಿದೆ. ಈ ಸಂದರ್ಭದಲ್ಲಿಯೇ ಅದು ಜಾಗತಿಕ ಕಾರ್ಯಾಚರಣೆ ತೀವ್ರಗೊಳ್ಳುವ ಮತ್ತು ವರ್ಗನೆಲೆಯ ಕಾರ್ಮಿಕ ಸಂಘಗಳ ಕ್ರೋಢೀಕರಣದ ಭರವಸೆಗಳನ್ನು ಹೊತ್ತು ತಂದಿದೆ ಎಂಬ ಆಶಾಭಾವನೆಯನ್ನು ವ್ಯಕ್ತ ಪಡಿಸಿದೆ.

ಮೇದಿನದ ಕರೆ

ಮುಂಬರುವ ದಿನಗಳಲ್ಲಿ ಆರ್ಥಿಕ ನಿಧಾನಗತಿಯ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗದ ಮೇಲೆ ಧಾಳಿಗಳು ಹೆಚ್ಚಲಿವೆ. ಕಾರ್ಮಿಕ ಆಂದೋಲನವನ್ನು ದುರ್ಬಲಗೊಳಿಸಲು ಎಲ್ಲಾ ರೀತಿಯ ವಿಭಜನಕಾರೀ ಶಕ್ತಿಗಳು ಪ್ರಯತ್ನಿಸುತ್ತವೆ. ಜನಸಾಮಾನ್ಯರ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಬದುಕಿನ ಮೇಲೂ ಧಾಳಿಗಳು ಬರಲಿವೆ ಎಂದು ಎಚ್ಚರಿಸಿರುವ ಸಿಐಟಿಯುವಿನ ಮೇದಿನದ ಪ್ರಣಾಳಿಕೆ ದೇಶದ ಮತ್ತು ಜಗತ್ತಿನ ಕಾರ್ಮಿಕ ವರ್ಗ ಹಾಗೂ ಜನಸಾಮಾನ್ಯರಿಗೆ ಕ್ರಾಂತಿಕಾರಿ ಶುಭಾಶಯಗಳನ್ನು ನೀಡಿದೆ ಹಾಗೂ ಜಾಗತೀಕರಣ ಮತ್ತು ವಂಚನೆಯ ನೀತಿಗಳ ವಿರುದ್ಧ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟದಲ್ಲಿ ಸಿಐಟಿಯು ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯ ಐಕ್ಯತೆ ಮತ್ತು ಸೌಹಾರ್ದದಲ್ಲಿ ಕೈಜೋಡಿಸುತ್ತದೆ ಎಂದಿದೆ.

ಅಸಮಾನತೆಯ ನೀತಿಗಳ ವಿರುದ್ಧ ಹೋರಾಟ

ಎಂಟು ಗಂಟೆಗಳ ಕೆಲಸ ಎಂಬುದು ನೂರು ವರ್ಷಗಳಿಗಿಂತಲೂ ಹಿಂದೆ ಅಮೆರಿಕಾದ ಚಿಕಾಗೋದ ಕಾರ್ಮಿಕರ ಹೋರಾಟಗಳಿಂದಾಗಿ, ಒಂಭತ್ತು ವೀರರು ಹುತಾತ್ಮರಾದ ನಂತರ ಮೇ ದಿನದಂದು ವಿಶ್ವದ ಕಾರ್ಮಿಕ ವರ್ಗ ಗಳಿಸಿದ ಹಕ್ಕು. ಆದರೆ ಭಾರತದಲ್ಲಿ ಈಗ ಸರಕಾರ ದಿನದ ಕೆಲಸದ ಅವಧಿಯನ್ನು 12 ಗಂಟೆಗಳ ವರೆಗೆ ಏರಿಸಬೇಕು, ವಾರದಲ್ಲಿ 60 ಗಂಟೆಗಳ ಕೆಲಸ ಮಾಡಬೇಕು ಎಂದು ಬಹಿರಂಗವಾಗಿಯೆ ಪ್ರತಿಪಾದಿಸಲಾರಂಭಿಸಿದೆ. ಕೇಂದ್ರದಲ್ಲಿನ ಯುಪಿಎ ಸರಕಾರ ತನ್ನ ರಾಷ್ಟ್ರೀಯ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಕಾರ್ಮಿಕ ವರ್ಗಕ್ಕೆ ಹಲವು ಭರವಸೆಗಳನ್ನು ನೀಡಿದರೂ ಅವುಗಳನ್ನು ಈಡೇರಿಸುವ ಬದಲು ಹಿಂದಿನ ನವ-ಉದಾರವಾದೀ ನೀತಿಗಳನ್ನೇ ಅನುಸರಿಸುತ್ತಿದೆ. ಇದರ ಪರಿಣಾಮವೆಂದರೆ ಒಂದೆಡೆ ಇಲ್ಲಿ ಜಪಾನ್ ಕೂಡಾ ಎಂದೂ ಸೃಷ್ಟಿಸದಷ್ಟು ಡಾಲರ್ ಶತಕೋಟ್ಯಾಧಿಪತಿಗಳನ್ನು ಸೃಷ್ಟಿಸುತ್ತಿದ್ದರೆ, ಇನ್ನೊಂದೆಡೆ 50 ಲಕ್ಷ ಉದ್ಯೋಗಗಳು ಸಂಘಟಿತ ವಲಯದಿಂದ ಮಾಯವಾಗಿ ನಿಕೃಷ್ಟ ಸಂಬಳದ ಕಾಂಟ್ರಾಕ್ಟ್ ಕೆಲಸಗಳಾಗಿ ಪರಿವರ್ತಿತವಾಗಿವೆ. ಇತ್ತೀಚಿನ ಒಂದು ಸರ್ವೆಯ ಪ್ರಕಾರ ದೇಶದ 94.27ಶೇ. ಕಾರ್ಮಿಕರು ಅಸಂಘಟಿತ ವಲಯದಲ್ಲಿ ಯಾವುದೇ ಕಾನೂನು ಸೌಲಭ್ಯಗಳಿಲ್ಲದೆ, ಸಾಮಾಜಿಕ ಭದ್ರತೆಗಳಿಲ್ಲದೆ ಕೆಲಸ ಮಾಡುತ್ತಿದ್ದಾರೆ. 77ಶೇ. ಕುಟುಂಬಗಳು ಕೇವಲ ದಿನಕ್ಕೆ 20ರೂ.ಗಳಲ್ಲಿ ಬದುಕು ಸಾಗಿಸುತ್ತಿವೆ.

ಕೃಷಿರಂಗದಲ್ಲೂ 'ಸುಧಾರಣೆ'ಯ ಫಲವೆಂದರೆ ರೈತರು ದರಿದ್ರರಾಗುತ್ತಿದ್ದಾರೆ, ಸರಕಾರ ಅವರಿಗೆ ಕೊಡುವ ಬೆಲೆಗಳ ಇಮ್ಮಡಿ ಬೆಲೆಗಳಲ್ಲಿ ಆಹಾರ ಧಾನ್ಯಗಳನ್ನು ಆಮದು ಮಾಡುತ್ತಿದೆ. ತೀವ್ರ ಆಹಾರ ಕೊರತೆಯಿಂದಾಗಿ ಬೆಲೆಯೇರಿಕೆಯಿಂದ ಜನಸಾಮಾನ್ಯರು ನರಳುವಂತಾಗಿದೆ. ಇದರಿಂದ ಪರಿಹಾರ ನೀಡುವ ಸಾರ್ವಜನಿಕ ವಿತರಣಾ ವ್ಯವಸ್ಥೆ(ರೇಷನ್)ಯನ್ನು ಸುಮಾರಾಗಿ ನಿರ್ನಾಮಗೊಳಿಸಲಾಗಿದೆ. ಸರಕಾರದ ವಿಶೇಷ ಆರ್ಥಿಕ ವಲಯಗಳ (ಎಸ್ಇಜೆಡ್) ನೀತಿ ವಾಸ್ತವವಾಗಿ ಒಂದೆಡೆ ರೈತರನ್ನೂ, ಇನ್ನೊಂದೆಡೆ ಕಾರ್ಮಿಕರನ್ನೂ ಸುಲಿದು ದೊಡ್ಡ ವ್ಯಾಪಾರಸ್ಥರಿಗೆ ಮತ್ತು ಬಂಡವಾಳಿಗರಿಗೆ ಅನುಕೂಲ ಮಾಡಿಕೊಡುವ ನೀತಿ, ದೊಡ್ಡ ಪ್ರಮಾಣದಲ್ಲಿ ಸಂಪತ್ತನ್ನು ಬಡವರಿಂದ ಶ್ರೀಮಂತರತ್ತ ವರ್ಗಾಯಿಸುವ ನೀತಿ ಎಂದಿರುವ ಸಿಐಟಿಯು ಪ್ರಣಾಳಿಕೆ ಯುಪಿಎ ಸರಕಾರದ ತಪ್ಪು ಕೃಷಿ ನೀತಿಗಳ ವಿರುದ್ಧ ರೈತಾಪಿಗಳೊಡಗೂಡಿ, ದುರ್ಬಲ ಜನವಿಭಾಗಗಳಿಗೆ ಬೆಂಬಲವಾಗಿ ಹೋರಾಟ ನಡೆಸುವ ನಿರ್ಧಾರವನ್ನು ವ್ಯಕ್ತಗೊಳಿಸಿದೆ.

ವರ್ಗನೆಲೆಯ ಹೋರಾಟಗಳು

ಭಾರತದ ಕಾರ್ಮಿಕ ವರ್ಗ ನಮ್ಮ ದೇಶವನ್ನು ಇರಾನ್, ಚೀನಾ, ರಶ್ಯನ್ ಒಕ್ಕೂಟದಂತಹ ಅಮೆರಿಕ, ಬ್ರಿಟನ್ ಮತ್ತು ಇಸ್ರೇಲ್ ಇಷ್ಟ ಪಡದ ದೇಶಗಳ ವಿರುದ್ಧ ತಮ್ಮ ತಂತ್ರಗಳಲ್ಲಿ ಕಿರಿಯ ಜೊತೆಗಾರನಾಗಿ ಸೆಳೆಯುವ ಪ್ರಯತ್ನಗಳನ್ನು ಬಲವಾಗಿ ಪ್ರತಿರೋಧಿಸುತ್ತಿದೆ, ಇದಕ್ಕಾಗಿ ಗಂಭೀರ ಸಮರದಲ್ಲಿ ತೊಡಗಿದೆ. ಆಂತರಿಕವಾಗಿ ಯುಪಿಎ ಸರಕಾರದ ವೈಫಲ್ಯಗಳಿಂದಾಗಿ ಮತ್ತೆ ತಲೆಯೆತ್ತುತ್ತಿರುವ ಮೂಲಭೂತವಾದಿ ಮತ್ತು ಕೋಮುವಾದಿ ಶಕ್ತಿಗಳ, ಜಾತಿವಾದಿ, ದಲಿತ-ವಿರೋಧಿ ಶಕ್ತಿಗಳ ವಿರುದ್ಧ ಹೋರಾಟವನ್ನು ಮುಂದುವರೆಸಬೇಕಾಗಿದೆ. ಏಕೆಂದರೆ ಈ ಶಕ್ತಿಗಳು ಸಮಾಜದಲ್ಲಿ ಆಳವಾದ ವಿಭಜನೆಗಳನ್ನು ಸೃಷ್ಟಿಸುವ ಶಕ್ತಿಗಳು. ಇವು ವರ್ಗನೆಲೆಯ ಕಾರ್ಮಿಕ ಆಂದೋಲನದ ಬೆಳವಣಿಗೆಗೆ ಮತ್ತು ಐಕ್ಯ ಹೋರಾಟಗಳಿಗೆ ಅಪಾಯಕಾರಿಯಾದ ಶಕ್ತಿಗಳು ಎಂದಿರುವ ಸಿಐಟಿಯು ಮೇದಿನದ ಪ್ರಣಾಳಿಕೆ ಮುಂಬರುವ ಚುನಾವಣೆಗಳಲ್ಲಿ ಕೋಮುವಾದಿ ಶಕ್ತಿಗಳು ಅಧಿಕಾರಕ್ಕೆ ಬರದಂತೆ ಅವನ್ನು ಸೋಲಿಸಬೇಕು ಎಂದು ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

2008 ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ವೇತನ ಒಪ್ಪಂದಗಳನ್ನು ನೆರವೇರಿಸಿಕೊಳ್ಳಬೇಕಾದ ವರ್ಷ. ಈ ಬಾರಿ ಈ ಒಪ್ಪಂದಗಳು ಹಿಂದಿನಂತೆ ಕೇವಲ ನಿಯಮಿತ ಕಾರ್ಮಿಕರಿಗೆ ಮಾತ್ರ ಸಂಬಂಧಿಸಿರದೆ, ಕಾಂಟ್ರಾಕ್ಟ್ ಕಾರ್ಮಿಕರಿಗೂ ವೇತನ ಹೆಚ್ಚಳ ತರುವಂತೆ ಮಾಡಬೇಕೆಂದು ಸಿಐಟಿಯು ನಿರ್ಧರಿಸಿದೆ. ಈ ಬೇಡಿಕೆಯ ಮೇಲೆ ಮೇ 7ರಂದು ಅಖಿಲ ಭಾರತ ಮುಷ್ಕರ ನಡೆಯಲಿದ್ದು, ಇದನ್ನು ಯಶಸ್ವಿಗೊಳಿಸಲು ಸಿಐಟಿಯು ತನ್ನ ಎಲ್ಲಾ ಸದಸ್ಯರಿಗೆ, ಬೆಂಬಲಿಗರಿಗೆ ಹಾಗೂ ಮಿತ್ರರಿಗೆ ಕರೆ ನೀಡಿದೆ.

ಲಂಬಾಣಿಗಳು .....

ಪುಟ 6 ರಿಂದ

ಮಧ್ಯ ಪ್ರವೇಶ: ಪತ್ರಿಕೆಗಳಲ್ಲಿ ಸುದ್ದಿಬರುತ್ತಲೆ ತಕ್ಷಣ ಜಿಲ್ಲಾಧ್ಯಕ್ಷರಾದ ಕರಿಯಪ್ಪ ಅಚ್ಚೊಳ್ಳಿ, ಲಿಂಗಸ್ಗೂರ ತಾಲೂಕ ಸಂಚಾಲಕ ಎಂ.ಸಿ.ನಿಂಗಪ್ಪ, ಕಾರ್ಮಿಕ ಮುಖಂಡರ ವೆಂಕೋಬ. ಜಿ ಎಸ್, ಮಹ್ಮದ್ ಹನೀಫ್, ಬಸವರಾಜ ಪೈ, ನೇತೃತ್ವದ ನಿಯೋಗ ಗ್ವಾನಾಟ್ಲ ತಾಂಡಕ್ಕೆ ತೆರಳಿ ತಪ್ಪಿಸಿಕೊಂಡು ಬಂದ ಪುರುಷ ಕೂಲಿಕಾರರ ಮತ್ತ ಅವರ ಕುಟುಂಬದೊಂದಿಗೆ ಮಾತಾಡಿ, ಏಪ್ರಿಲ್ 17ರಂದು ತಹಸೀಲ್ ಕಚೇರಿ ಎದುರಿಗೆ ಪ್ರತಿಭಟನೆಯೊಂದನ್ನು ಮಾಡಿ ತಹಸೀಲ್ದಾರರಿಗೆ ಮನವಿ ಕೊಟ್ಟು ತಾಲೂಕ ಆಡಳಿತ ಒತ್ತಿಯಾಳುಗಳನ್ನಾಗಿ ಇಟ್ಟುಕೊಂಡ ಮಹಿಳೆಯರನ್ನು ಬಿಡುಗಡೆ ಮಾಡಿಸುವಲ್ಲಿ ಗಂಭೀರ ಪ್ರಯುತ್ನ ಮಾಡುತ್ತಿಲ್ಲ. ಕೂಡಲೆ ಗಂಭೀರ ಪ್ರಯತ್ನಮಾಡಬೇಕೆಂದು ಒತ್ತಾಯಸಲಾಯಿತು. ಈ ಹೋರಾಟದಲ್ಲಿ ತಾಂಡಾದ 50ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದು ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಕಾಂ. ಶೇಕ್ ಷಾ ಖಾದರಿ ಭಾಗವಹಿಸಿದರು. ಅಂದೇ ನಂತರ ನಿಯೋಗವೊಂದು ಲಿಂಗಸ್ಗೂರ ಪಿ.ಎಸ್.ಐ. ಶ್ರೀಮಂತ ಇಲ್ಲಾಳ ಭೇಟಿಯಾಗಿ ಪರಸ್ಥಿತಿಯನ್ನು ವಿವರಿಸಲಾಯಿತು ತಕ್ಷಣ ಸ್ಪಂದಿಸಿದ ಅವರು ಬಿಳಗಿಯ ಪಿ.ಎಸ್.ಐ. ಯೊಂದಿಗೆ ಮಾತನಾಡಿ ಅಲ್ಲಿರುವ ಪರಸ್ಥಿತಿಯನ್ನು ತಿಳಿದುಕೊಂಡು ಸಂಘದ ಮುಖಂಡರೊಂದಿಗೆ ಸಹಕರಿಸುವಂತೆ ಹೇಳಿದರು. ಏಪ್ರಿಲ್ 18ರಂದು ಮಹಿಳಾ ಒತ್ತೇಯಾಳುಗಳನ್ನು ಬಿಡಿಸಿಕೊಂಡು ಬರಲು ಎಂ.ಸಿ. ನಿಂಗಪ್ಪ ಮತ್ತು ಬಸವರಾಜ ಪೈ ಇಬ್ಬರು ಬಿಳಗಿಗೆ ತೆರಳಿ ಅಲ್ಲಿಯ ಸಿ.ಪಿ.ಐ. ಆರ್.ಎಸ್. ಪಾಟೀಲ್ ನೊಂದಿಗೆ ಮಾತನಾಡಿ ಶಾರುಬಾಯಿ, ತಿಪ್ಪಿಬಾಯಿ, ವಿಮ್ಲಿಬಾಯಿ ಮತ್ತು ಎರಡು ಸಣ್ಣ ಮಕ್ಕಳನ್ನು ಬಿಡಿಸಿಕೊಂಡುಬರುವಲ್ಲಿ ಸಂಘ ಯಶಸ್ವಿಯಾಯಿತು. ಇದು ಕೂಲಿಕಾರರ ಸಂಘಕ್ಕೊಂದು ಕಿರಿಟ!

■ ಎಂ.ಸಿ. ನಿಂಗಪ್ಪ ಹಟ್ಟಿ


ಕರ್ನಾಟಕವನ್ನು 'ಗುಜರಾತ್' ಮಾಡುವೆವೆನ್ನುವ ಬಿಜೆಪಿಯನ್ನು ಸೋಲಿಸಿ

ಸೀತಾರಾಂ ಯೆಚೂರಿ

ಕರ್ನಾಟಕವನ್ನು ದಕ್ಷಿಣದ ಗುಜರಾತ್ ಮಾಡುವುದಾಗಿ ಘೋಷಿಸಿರುವ ಬಿಜೆಪಿಯನ್ನು ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರಲು ಬಿಡಬೇಡಿ ಎಂದು ಸಿಪಿಎಂ ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಕರೆ ನೀಡಿದ್ದಾರೆ.

ನಗರದ ಎನ್‌ಜಿಓ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಪಿಐ(ಎಂ)ಪಕ್ಷದ ಚುನಾವಣಾ ಮನವಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡುತ್ತಿದ್ದರು.

ಸಿಪಿಐ(ಎಂ) ಪಕ್ಷವು ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಜನತೆ ಮನವಿಯೊಂದನ್ನು ಬಿಡುಗಡೆ ಮಾಡಿದೆ.



ಕೋಮುವಾದಿ ಶಕ್ತಿಯು ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಸ್ವಂತ ಬಲದ ಮೇಲೆ ಅಧಿಕಾರವನ್ನು ಹಿಡಿಯಲು ಹವಣಿಕೆ ಮಾಡುತ್ತಿದ್ದು, ಆರ್.ಎಸ್.ಎಸ್.ನ ರಾಜಕೀಯ ಅಸ್ತ್ರವಾಗಿರುವ ಬಿಜೆಪಿಯನ್ನು ಕರ್ನಾಟಕದಲ್ಲಿ ಅಧಿಕಾರಕ್ಕೆ ತಂದರೆ ಮುಂದಿನ ಲೋಕಸಭಾ ಚುನಾವಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಅವರು ಎಚ್ಚರಿಸಿದರು.

ಬಿಜೆಪಿಯು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದರೆ ಅದು ತನ್ನ ಹಿಂದುತ್ವದ ನೀತಿಯನ್ನು ಜಾರಿಗೆ ತರಲಿದೆ. ರಾಜ್ಯದಲ್ಲಿ ಅವಕಾಶ ವಾದಿ ರಾಜಕಾರಣವು ಅಧಿಕಾರಕ್ಕೆ ಬರದಂತೆ ತಡೆಯಲು ಮತದಾರರು ಮುಂದಾಗಬೇಕು ಎಂದು ಅವರು ಮನವಿ ಮಾಡಿದರು.

ಕ್ಷೇತ್ರ ಪುನರ್ವಿಂಗಡಣೆಯ ನಂತರ ಮೊದಲ ಬಾರಿಗೆ ಚುನಾವಣೆಯನ್ನು ಎದುರಿಸುತ್ತಿರುವ ಕರ್ನಾಟಕದೆಡೆಗೆ ಇಡೀ ದೇಶದ ಕಣ್ಣು ನೆಟ್ಟಿದ್ದು, ಮತ್ತೆ ಅತಂತ್ರ ಸ್ಥಿತಿ ನಿರ್ಮಾಣವಾಗಲು ಅವಕಾಶ ನೀಡದೆ ಯಾವುದಾದರೊಂದು ಜಾತ್ಯಾತೀತ ಪಕ್ಷಕ್ಕೆ ಬಹುಮತ ನೀಡಬೇಕು ಎಂದು ಯೆಚೂರಿ ಮನವಿ ಮಾಡಿದರು.

ಕಳೆದ 40 ತಿಂಗಳ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಬಡವರಿಗೆ ಪಡಿತರ ಚೀಟಿಯನ್ನು ವಿತರಿಸದೆ ಭೂ, ಗಣಿ ಹಾಗೂ ಲಿಕ್ಕರ್ ಮಾಫಿಯಾ ಗಳಲ್ಲಿ ಮುಳುಗಿದ್ದ ಸರಕಾರ ಜನ ಕಲ್ಯಾಣವನ್ನು ಮರೆತಿತ್ತು ಎಂದು ಅವರು ಟೀಕಿಸಿದರು.

ಸುಮಾರು 60 ವರ್ಷಗಳಿಂದ ಭಾರತದಲ್ಲಿ ಕಾಪಾಡಿಕೊಂಡು ಬಂದಿದ್ದ ಏಕತೆಯನ್ನು ಧರ್ಮ, ಜಾತಿ ಹಾಗೂ ಭಾಷೆಯ ಹೆಸರಿನಲ್ಲಿ ಒಡೆಯಲು ಬಿಜೆಪಿ ಮುಂದಾಗಿದೆ. ಇಂತಹ ನೀತಿಗಳಿಂದ ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗಲಿದೆ. 1960 ರಲ್ಲಿ ಹಿಂದಿ ಭಾಷೆಯನ್ನು ಬಲವಂತವಾಗಿ ಹೇರಲು ಮುಂದಾದಾಗ ಯಾವ ಪರಿಸ್ಥಿತಿ ಉಂಟಾಗಿತ್ತು ಎಂಬ ನಿದರ್ಶನ ನಮ್ಮ ಮುಂದೆ ಇದೆ ಎಂದು ಅವರು ನೆನಪಿಸಿದರು.

ಆಧುನಿಕ ಜಾತ್ಯತೀತ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡಲು ಬಿಜೆಪಿ ಮುಂದಾಗಿದ್ದು, ಮತ ಬ್ಯಾಂಕ್‌ಗಾಗಿ ವಾಜಪೇಯಿ ಅವರ ಅಧಿಕಾರಾವಧಿಯಲ್ಲಿ ಹಸಿರು ನಿಶಾನೆ ತೋರಿದ್ದ ಸೇತುಸಮುದ್ರಂ ಯೋಜನೆಗೆ ಇದೀಗ ವಿರೋಧ ವ್ಯಕ್ತಪಡಿಸುತ್ತಿದೆ. ರಾಮಮಂದಿರ ನಿರ್ಮಾಣ ಮತ್ತಿತರ ವಿಷಯಗಳನ್ನು ಚುನಾವಣಾ ಪ್ರಚಾರಕ್ಕಾಗಿ ಬಳಸಿಕೊಳ್ಳಲು ಬಿಜೆಪಿ ಇದೀಗ ಮುಂದಾಗಿದೆ ಎಂದು ಅವರು ಆಪಾದಿಸಿದರು.

ಅಲ್ಪಸಂಖ್ಯಾತರು ಇಂದಿಗೂ ಎರಡನೇ ದರ್ಜೆ ನಾಗರಿಕರಾಗಿ ದೇಶದಲ್ಲಿ ವಾಸಿಸುತ್ತಿದ್ದಾರೆ. ಈ ಸಮುದಾಯದ ಅಭಿವೃದ್ಧಿಗೆ ಸಾಚಾರ್ ಸಮಿತಿಯ ವರದಿಯನ್ನು ಜಾರಿಗೆ ತರಬೇಕೆಂದು ಎಡಪಕ್ಷಗಳು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕುತ್ತಿವೆ ಎಂದು ಅವರು ನುಡಿದರು.

ದೇಶದ ಭವಿಷ್ಯದ ದೃಷ್ಟಿಯಿಂದ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ದೂರವಿಡಬೇಕು. ಇಲ್ಲದಿದ್ದಲ್ಲಿ ಭಾರತದ ಅಭಿವೃದ್ಧಿಯ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಕೋಮುಶಕ್ತಿಗಳು ಅಧಿಕಾರ ಹಿಡಿದರೆ ಅಭಿವೃದ್ಧಿಯ ಬದಲು ಕೋಮುಗಲಭೆ ಜರುಗುವುದರ ಮೂಲಕ ದೇಶದಲ್ಲಿ ಅಶಾಂತಿಯ ವಾತಾವರಣ ಉಂಟಾಗಲಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ವಿಶ್ವದ ಬಿಲಿಯನ್ ಪತಿಗಳಲ್ಲಿ 36 ಮಂದಿ ಭಾರತದಲ್ಲಿಯೇ ಇದ್ದಾರೆ. ಇವರ ಆಸ್ತಿ ದೇಶದ ಶೇ.25 ರಷ್ಟು ಜಿಡಿಪಿಗೆ ಸಮನಾಗಿದೆ. ಭಾರತದಲ್ಲಿ ದಿನೇ ದಿನೇ ಶ್ರೀಮಂತರ ಹಾಗೂ ಬಡವರ ಮಧ್ಯೆ ಅಸಮಾನತೆ ಹೆಚ್ಚುತ್ತಿದೆ ಎಂದು ಅವರು ಹೇಳಿದರು.

ಆಹಾರ ಪದಾರ್ಥಗಳ ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಎಡಪಕ್ಷ ಹೋರಾಟ ನಡೆಸುತ್ತಿವೆ. ಅಲ್ಲದೆ ನಾಗರೀಕ ಆಹಾರ ಸರಬರಾಜು ವ್ಯವಸ್ಥೆಯನ್ನು ಬಲಿಷ್ಠಗೊಳಿಸಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಿಪಿಎಂನ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್, ಜನಶಕ್ತಿ ಪತ್ರಿಕೆಯ ಸಂಪಾದಕ ಗುರುಶಾಂತ್ ಮತ್ತಿತರರು ಹಾಜರಿದ್ದರು.

ಹಣ ದೈತ್ಯರ ಹಣಾಹಣಿ...

ಪುಟ 5 ರಿಂದ

ಪರಿಗಣಿಸಿದ ಬಿಜೆಪಿಗೆ ಮತ ನೀಡಿದರು. ಯಾರಿಗೆ ಬಿಜೆಪಿ ಹೆಚ್ಚು ಅಪಾಯಕಾರಿ ಎನಿಸಿತೋ ಅವರು ಕಡಿಮೆ ಅಪಾಯಕಾರಿಯೆಂದು ಪರಿಗಣಿಸಿದ ಕಾಂಗ್ರೆಸ್‌ಗೆ ಮತ ನೀಡಿದ್ದಾರೆ. ಮೂರನೇ ಅಭ್ಯರ್ಥಿ ಠೇವಣಿ ಕಳೆದುಕೊಂಡರು.

ಬಳ್ಳಾರಿ ನಗರದ ಪರಿಸ್ಥಿತಿ ಹೀಗಿತ್ತು. ಇದರರ್ಥ ಬಿಜೆಪಿ ಕೇವಲ ಹಣ ನೀಡಿದ್ದರಿಂದಾಗಲೀ, ಅಥವಾ ಅದು ಒಳ್ಳೆಯಪಕ್ಷವೆಂದಾಗಲೀ ಗೆದ್ದಿಲ್ಲ. ಈ ಚುನಾವಣೆಯಲ್ಲಿ ದಿವಾಕರಬಾಬು ವಿರೋಧಿ ಮತಗಳು ಅನಿಲ್‌ಲಾಡ್ ಪ್ರವೇಶದಿಂದ ಬಿಜೆಪಿ-ಕಾಂಗ್ರೆಸ್ ನಡುವೆ ಹರಿದು ಹಂಚಿ ಹೋಗುವುದರಿಂದ ಸೂರ್ಯನಾರಾಯಣರೆಡ್ಡಿ ಮತ್ತು ದಿವಾಕರಬಾಬು ಜಂಟಿಯಾಗಿ ಗಟ್ಟಿ ಪೈಪೋಟಿ ನೀಡಿದಲ್ಲಿ ಬಿಜೆಪಿಗೆ ಸೋಲು ಕಟ್ಟಿಟ್ಟ ಬುತ್ತಿಯಾಗಿದೆ.

ರೆಡ್ಡಿಯವರು ಹೂಡುವ ಗಣಿ ಬಂಡವಾಳಕ್ಕೆದುರು, ಕಾಂಗ್ರೆಸ್ ಈ ಬಾರಿ ಭಾರಿ ಬಂಡವಾಳ ಹೂಡಲು ಸಿದ್ಧತೆ ನಡೆಸಿರುವುದು ಕಂಡು ಬಂದಿದೆ. ಸಂಡೂರು ಕ್ಷೇತ್ರದ ಮಾಜಿ ಶಾಸಕರಾದ ಸಂತೋಷ್ ಲಾಡ್‌ರವರು ಆ ಕ್ಷೇತ್ರ ಮೀಸಲಾದ್ದರಿಂದ ಅವರು ಕಲಘಟಗಿ ಕ್ಷೇತ್ರಕ್ಕೆ ವಲಸೆ ಹೋಗಿರುವರಾದರೂ, ಸಂಡೂರು ಕ್ಷೇತ್ರ ಗೆಲ್ಲಿಸುವ ಹೊಣೆ ಹೊತ್ತಿದ್ದಾರೆ. ಅದೇ ರೀತಿ ಅನಿಲ್ ಲಾಡ್ ಬಳ್ಳಾರಿ ನಗರದ ಜೊತೆ, ಹಗರಿಬೊಮ್ಮನಹಳ್ಳಿ ಗೆಲ್ಲಿಸಿಕೊಡುವ ಜವಾಬ್ದಾರಿ ಹೊತ್ತು ಮತ್ತು ಜಿಲ್ಲೆಯಾದ್ಯಂತ ಸಹಾಯ ನೀಡಲು ಮುಂದಾಗಿದ್ದಾರೆ. ಕಾಂಗ್ರೆ ಜಿಲ್ಲಾಧ್ಯಕ್ಷರು ತಾವು ಸ್ವತಃ ಸ್ಪರ್ಧಿಸದಿದ್ದರೂ, ಗಣಿ ಮಾಲೀಕರಾದ ತಾವು ಬಿಜೆಪಿ ಸೋಲಿಸಲು ಕೈ ಜೋಡಿಸುವುದಾಗಿ ತಿಳಿಸಿದ್ದರೆನ್ನಲಾಗಿದೆ. ಹರಪನಹಳ್ಳಿಯ ಮಾಜಿ ಶಾಸಕನನ್ನು ಹಡಗಲಿಯಿಂದ ಗೆಲ್ಲಿಸಲು ಎಂ.ಪಿ.ಪ್ರಕಾಶ್‌ರು ಜವಾಬ್ದಾರಿ ಹೊತ್ತರೇ, ಹರಪನಹಳ್ಳಿಯಲ್ಲಿ ಎಂ.ಪಿ. ಪ್ರಕಾಶ್‌ಗೆ ಗೆಲುವಿಗೆ ಶ್ರಮಿಸುವುದಾಗಿ ಪರಮೇಶ್ವರ್ ನಾಯಕ್ ಹೇಳಿದ್ದಾರೆ.

ವಿಜಯನಗರ ಕ್ಷೇತ್ರದ ಅಭ್ಯರ್ಥಿ ಹೆಚ್.ಕೆ. ಗವಿಯಪ್ಪನವರು ಸ್ವತಃ ಗಣಿ ಮಾಲೀಕರಾಗಿದ್ದು ಜಿಲ್ಲೆಯ ಕಾಂಗ್ರೆ ಗೆಲುವಿಗೆ ಕೈ ಜೋಡಿಸಲಿದ್ದಾರೆ. ಈ ಎಲ್ಲಾ ಸಿದ್ದತೆಯ ವಿಚಾರ ಕಾಂಗ್ರೆ ಪಾಳೆಯದಲ್ಲಿ ಚರ್ಚಿಸಲ್ಪಡುತ್ತಿದೆ.

ಹಡಗಲಿಯಿಂದ ಮಾಜಿ ಶಾಸಕ ಹಾಲಪ್ಪನವರು ಕಾಂಗ್ರೆನಿಂದ ಬಿಜೆಪಿ ಸೇರಿದವರಾದರೂ, ಎಂ.ಪಿ.ಪ್ರಕಾಶ್ ಸೇರಿದ ಕಾಂಗ್ರೆಸ್ ಎದುರಿಸುವುದನ್ನು ಸಮರ್ಥವಾಗಿಲ್ಲ. ಇತ್ತೀಚೆಗೆ ತನಗೆ ಟಿಕೆಟ್ ಸಿಗಲಿಲ್ಲವೆಂಬ ಕಾರಣಕ್ಕೆ ಬಿಜೆಪಿ ಸೇರಿದ ಕೂಡ್ಲಿಗಿ ಮಾಜಿ ಶಾಸಕ ಶಿರಾಜ್ ಶೇಖ್ ಅವರ ಜನಪ್ರಿಯತೆ ಕಾಂಗ್ರೆಸ್‌ಗೆ ಸ್ವಲ್ಪ ಹಾನಿ ಉಂಟು ಮಾಡಿದರೂ ಸಿದ್ದರಾಮಯ್ಯ ಹಾಗೂ ಎಂ.ಪಿ.ಪ್ರಕಾಶ್ ಬೆಂಬಲಿಗರ ಕಾಂಗ್ರೆಸ್ ಸೇರ್ಪಡೆ ಅದನ್ನು ಬಲಗೊಳಿಸಿದೆ.

ಇನ್ನೂ ಹೊಸಪೇಟೆ(ವಿಜಯನಗರ) ಯಲ್ಲಿ ಆನಂದ್‌ಸಿಂಗ್ ಅಭ್ಯರ್ಥಿಯಲ್ಲ ವಾದ್ದರಿಂದ, ಅವರ ಜನಪ್ರಿಯತೆ ಬಿಜೆಪಿಗೆ ದಕ್ಕದಾಗಿದೆ. ಜೆಡಿ(ಎಸ್) ಮುಖಂಡರ ಸೇರ್ಪಡೆ ಯೊಂದಿಗೆ ಶಿರುಗುಪ್ಪದ ಕಾಂಗ್ರೆಸ್ ಬಲಗೊಂಡಿದೆ.

ಹೊರಗಡೆ ಈ ರೀತಿಯ ಪರಿಸ್ಥಿತಿ ಇರುವಾಗಲೇ ಬಳ್ಳಾರಿ ಜನಾರ್ದನರೆಡ್ಡಿ ಪಕ್ಷದಲ್ಲಿ ಅಸಮಾಧಾನಗಳು ರೂಪುಗೊಂಡಿವೆ. ಎಲ್ಲಾ 09 ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳಿಗೆ ಅವರ ಬಳಿ ಇರುವ ಹಣವನ್ನು ಇವರ ಬಳಿ ಡಿಪಾಸಿಟ್ ಮಾಡಬೇಕೆಂಬ ಕಾರಣಕ್ಕೆ ಅವರಿಗೆ ಹಣ ನೀಡಿ ಸ್ವಾತಂತ್ರ್ಯ ಕಳೆದುಕೊಳ್ಳಬೇಕೇ! ಎಂದು ಹಲವರು ಅಸಮಧಾನಗೊಂಡಿದ್ದರೇ, ಅನಿಲ್‌ಲಾಡ್‌ರ ಮೇಲಿನ ದಾಳಿ ಹಾಗೂ ವಿಜಯನಗರ ಕ್ಷೇತ್ರದ ಭರಮನಗೌಡ ಅಭ್ಯರ್ಥಿತನ ಬದಲಿ ಮಾಡುವ ಪ್ರಯತ್ನದಿಂದ ಆರ್‌ಎಸ್‌ಎಸ್ ಮುನಿಸಿಕೊಂಡ ವರದಿ ಇದೆ. ಮತ್ತೊಂದು ಕಡೆ ಬಳ್ಳಾರಿ ಗ್ರಾಮಾಂತರದಲ್ಲಿ ಗೆಲ್ಲುವ ಪ್ರಭಾವ ಹೊಂದಿರುವರೆನ್ನಲಾದ ಬಿಜೆಪಿ ನಾಗೇಂದ್ರರವರನ್ನು ಕೂಡ್ಲಿಗಿ ಕ್ಷೇತ್ರಕ್ಕೆ ವಲಸೆ ಕಳುಹಿಸಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

ಈ ಎಲ್ಲವೂ, ರೆಡ್ಡಿ ಪಾಳಯದಲ್ಲಿ ಗೆಲುವು ಅಂದುಕೊಂಡಷ್ಟು ಸುಲಲಿತ ವಾಗಿಲ್ಲವೆಂದು ತೀರಾ ಕಠಿಣವೆಂದು ಭಾವನೆ ಬರುವಂತಾಗಿ ಭೀತಿ ಮೂಡುವಂತಾಗಿದೆ. ಹತಾಶೆ ಮೂಡಿದೆ. ಈಗ ಉಳಿದದ್ದೊಂದೇ ದಾರಿ. ಬಂಡವಾಳ ಹೂಡಿಕೆಗಳಿಗೆ ಪ್ರತಿ ಬಂಡವಾಳವಿರುವಾಗ, ತಂತ್ರಕ್ಕೆ -ಪ್ರತಿತಂತ್ರಗಳು ರೂಪುಗೊಂಡು ಜಿಲ್ಲೆಯಲ್ಲೇ ಕಟ್ಟಿ ಹಾಕುವಂತಹ ಪರಿಸ್ಥಿತಿ ನಿರ್ಮಾಣಗೊಳ್ಳುತ್ತಿರುವಾಗ, ಕಾರ್ಪೋರೇಟ್ ಕಂಪನಿಗಳು ಬಳಸುವ ಮತ್ತೊಂದು ತಂತ್ರವೇ ತೋಳ್ಬಲವಾಗಿದೆ. ಅದನ್ನೇ ಅನಿಲ್‌ಲಾಡ್ ಮೇಲೆ ಪ್ರಯೋಗಿಸಲಾಗಿದೆ. ಈ ಮೂಲಕ ಜನತೆಯನ್ನು ವಿರೋಧಿಗಳನ್ನು ಭೀತಿಗೊಳಿಸುವ ತಂತ್ರವಾಗಿದೆ. ಆರ್‌ಎಸ್‌ಎಸ್ ಅದರ ಕಾರ್ಯಾಚರಣೆ -ಜನರ ಪ್ರಬುದ್ಧತೆ-ಅವಕಾಶ ವಾದಿತನ. ಜಾತಿವಾದಗಳು ಪರಿಸ್ಥಿತಿಯನ್ನು ಹೇಗೆ ಬೇಕಾದರೂ ತಿರುಗಿಸಬಹುದಾಗಿದೆ.

ತಾನೇ ಆದರೂ ಬಳ್ಳಾರಿ ಜಿಲ್ಲೆಯ ಚುನಾವಣೆಯ ಕಣ ಆರಂಭದಲ್ಲಿ ತೀವ್ರವಾಗಿ ಕಾವೇರಿರುವುದು ಮುಂಬರುವ ರಾಜಕೀಯ ರಣರಂಗದ ಲಕ್ಷಣವಾಗಿದೆ. ಚುನಾವಣೆ ಆಯೋಗ,ಜಿಲ್ಲಾ ಆಡಳಿತ, ಬದಲಾದ ಪೋಲೀಸ್ ಪಡೆ, ಎಲ್ಲೆಡೆ ಹದ್ದಿನ ಕಣ್ಗಾವಲು, ಕ್ಯಾಮರಾ ಕಾವಲು ಮುಂತಾಗಿ ಕ್ರಮವಹಿಸದೇ ಹೋದಲ್ಲಿ ತೀವ್ರ ಆತಂಕಕಾರಿ ವಾತಾವರಣ ನಿರ್ಮಾಣಗೊಳ್ಳುವ ಸಾಧ್ಯತೆಗಳ ಮುನ್ಸೂಚನೆಗಳಿವೆ.

ಈ ರಾಜಕೀಯ ಸಂಘರ್ಷದಲ್ಲಿ ಬಿಜೆಪಿ-ಕಾಂಗ್ರೆಸ್ ಹೊರತುಪಡಿಸಿದ ತಾತ್ಕಾಲಿಕವಾಗಿಯಾದರೂ 3ನೇರಾಜಕೀಯ ಶಕ್ತಿ ದುರ್ಬಲಗೊಂಡಿರುವುದು ಅದೇ ರೀತಿ ಬಿಜೆಪಿ ಬಲಗೊಂಡಿರುವುದು ಪ್ರಗತಿಪರ ಶಕ್ತಿಗಳಿಗೆ ಆತಂಕಕಾರಿಯಾಗಿದೆ.

ಹೆಣ್ಣು ತಾಯಿಯಾಗಿ ಬೇಕು, ಹೆಂಡತಿಯಾಗಿ ಬೇಕು. ಮಗಳಾಗಿ......?

ಭಾಗ 2

ಕನ್ನಡಿ



ಕೆ.ಎಸ್.ವಿಮಲ

ಪಿ.ಸಿ. ಎಂಡ್ ಪಿ.ಎನ್.ಡಿ.ಪಿ.1994

ಯಾವುದೇ ಒಂದು ವ್ಯವಸ್ಥೆಯಲ್ಲಿ ಸಮತೋಲನ ಅತ್ಯಗತ್ಯ. ತಪ್ಪು ತಿಳುವಳಿಕೆ ಕೀಳು ಮನೋಭಾವ, ಗಂಡೇ ಶ್ರೇಷ್ಠವೆಂಬ ಅಭಿಮತ ಹೆಣ್ಣಾಗಿ ಹುಟ್ಟುವ ಹಕ್ಕನ್ನೇ ಕಸಿಯುತ್ತಿದೆ. ಪ್ರಪಂಚಕ್ಕೆ ಕಣ್ಣು ಬಿಡುವ ಮೊದಲೇ ನಿರ್ಜೀವವಾಗಿ ಬಿಡುತ್ತಿರುವ ಹೆಣ್ಣು ಭ್ರೂಣಕ್ಕೆ ಹುಟ್ಟುವ ಹಕ್ಕು ನೀಡಬಹುದಾದ ಒಂದು ಕಾನೂನು ಪ್ರಸವ ಪೂರ್ವ ಲಿಂಗ ಪರೀಕ್ಷಾ ನಿಷೇಧ ಕಾನೂನು 1994. ಈ ಕಾನೂನು ಸಾಕಷ್ಟು ಬಲಯುತವಾಗಿದೆಯಾದರೂ ಕಾನೂನು ಮಾತ್ರವೇ ಎಲ್ಲವನ್ನೂ ಸಾಧಿಸಿ ಬಿಡಲಾರದು. ಒಂದೆಡೆ ಕುಸಿಯುತ್ತಿರುವ ಲಿಂಗ ಪರಿಮಾಣ ತಂದೊಡ್ಡಿರುವ ಅಪಾಯದ ಅರಿವು ಮೂಡಿಸುತ್ತಲೇ ಹೆಣ್ಣು ಕೂಡ ಸಮಾಜದ ಭಾಗ, ಅವಳಿಗೂ ಬದುಕುವ ಹಕ್ಕಿದೆ ಎಂಬುದನ್ನು ಸಮಾಜದ ಅರಿವಿಗೆ ತರುವ ಪ್ರಯತ್ನವೂ ನಿರಂತರವಾಗಿ ನಡೆಯಬೇಕು. ಅಂತಹ ನಿರಂತರತೆಗೆ ಸಹಾಯಕವಾಗಿ ದುರ್ಮಾರ್ಗಕ್ಕೆ ಅಂಕುಶವಾಗಿ ಕಾನೂನು ಕುರಿತ ಬಳಕೆಯಾಗಬೇಕು. ಅಂತಹ ಒಂದು ಅಂಕುಶದ ಪರಿಚಯ ಇದು.

ಈ ಕಾನೂನಿನ ಪ್ರಕಾರ

1. ಪ್ರಸವಪೂರ್ವ ಪರೀಕ್ಷಾ ವಿಧಾನಗಳನ್ನು ಲಿಂಗ ಪತ್ತೆಗೆ ಬಳಸುವಂತಿಲ್ಲ.
2. ಭ್ರೂಣ ಲಿಂಗ ಪತ್ತೆಯ ಕುರಿತು ಯಾವುದೇ ಜಾಹಿರಾತು ನೀಡುವಂತಿಲ್ಲ.
3. ಪ್ರಸವ ಪೂರ್ವ ಪರೀಕ್ಷಾ ವಿಧಾನಗಳಿಗೆ ಅಗತ್ಯವಿರುವ (ಭ್ರೂಣದ ಊನದ ಪತ್ತೆಗೆ ಮಾತ್ರ) ಉಪಕರಣಗಳನ್ನು ಹೊಂದಲು ಪರವಾನ್ಗಿ ಪಡೆದಿರಬೇಕು. ಮತ್ತು ಅದರ ಪರಿಣತಿ ಪಡೆದ ವ್ಯಕ್ತಿಗಳು ಮಾತ್ರವೇ ಅದನ್ನು ನಡೆಸಬೇಕು.

ಪ್ರಸವಪೂರ್ವ ಪರೀಕ್ಷಾ ವಿಧಾನವನ್ನು ಕೈಗೊಳ್ಳುವ ಮುನ್ನ ಈ ಕೆಳಗಿನ ಅಂಶಗಳನ್ನು ಗಂಭೀರವಾಗಿ ಪರಿಗಣಿಸಬೇಕು.

1. ಮಹಿಳೆಯ ವಯಸ್ಸು 35 ಮೀರಿರಬೇಕು.
2. ಈ ಹಿಂದೆ ಗರ್ಭ ಧರಿಸಿದಾಗ ಎರಡು ಅಥವಾ ಅದಕ್ಕಿಂತ ಹೆಚ್ಚು ಬಾರಿ ಗರ್ಭಪಾತವಾಗಿದ್ದರೆ ಅಥವಾ ಭ್ರೂಣ ಸ್ರಾವವಾಗಿದ್ದರೆ.
3. ಗರ್ಭಿಣಿ ಸ್ತ್ರೀ ಯಾವುದೇ ರೀತಿಯ ಅಪಾಯಕಾರಿ ಅಂಶಗಳಿಗೆ ಒಳಗಾಗಿದ್ದಲ್ಲಿ, ಉದಾ: ಮಾದಕ ವಸ್ತು, ಕ್ಷ ಕಿರಣ, ಕ್ರಿಮಿನಾಶಕ ಅಥವಾ ಸೋಂಕು ರೋಗಗಳ ಪ್ರಭಾವಗಳಿಗೆ ತುತ್ತಾಗಿದ್ದರೆ.
4. ಗರ್ಭಿಣಿ ಅಥವಾ ಅವಳ ಗಂಡ ಯಾವುದೇ ರೀತಿಯ ದೈಹಿಕ/ ಮಾನಸಿಕ, ಅನುವಂಶಿಕ ಸಮಸ್ಯೆಗಳಿಗೆ ಒಳಗಾದವರಾಗಿದ್ದರೆ... ಇಂತಹ ನಿರ್ದಿಷ್ಟ ಕಾರಣಗಳಿದ್ದಾಗ ಮಾತ್ರ ಗರ್ಭಿಣಿ ಸ್ತ್ರೀಯ ಭ್ರೂಣದ ಪರೀಕ್ಷೆ ಮಾಡುವ ಅನುಮತಿ ಇರುತ್ತದೆ.
5. ಈ ಪರೀಕ್ಷಾ ವಿಧಾನಕ್ಕೆ ಮಹಿಳೆಯನ್ನು ಒಳಪಡಿಸುವ ಮುನ್ನ ಅವಳ ಲಿಖಿತ ಅನುಮತಿ ಪಡೆಯಬೇಕು ಮತ್ತು ಲಿಂಗ ಪತ್ತೆ ಮಾಡುವುದಿಲ್ಲ ಎಂದು ಅವಳಿಗೆ ಮನವರಿಕೆ ಮಾಡಿಕೊಡಲೇಬೇಕು.

ಈ ಕಾನೂನಿನ ಸಮರ್ಪಕ ಜಾರಿಗಾಗಿ ಕೇಂದ್ರ ಸರ್ಕಾರವು ಒಂದು ಪರಿಶೀಲನಾ ಸಮಿತಿಯನ್ನು ರಚಿಸಬೇಕು.

1. ಕೇಂದ್ರದ ಕುಟುಂಬ ಕಲ್ಯಾಣ ಇಲಾಖೆಯ ಸಚಿವರು ಪ್ರಭಾರ ಅಧ್ಯಕ್ಷರಾಗಿ, (ex-officio) ಅದರ ಕಾಯದರ್ಶಿ ಉಪಾಧ್ಯಕ್ಷರಾಗಿರುತ್ತಾರೆ.
2. ಅ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
   ಆ) ಕಾನೂನು ಇಲಾಖೆ
   ಇ) ಭಾರತೀಯ ವೈದ್ಯಕೀಯ ಪದ್ಧತಿಯ ಸಂಸ್ಥೆಗಳನ್ನು ಪ್ರತಿನಿಧಿಸಿ ಮೂವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗುತ್ತದೆ.
3. ಕೇಂದ್ರ ಸರ್ಕಾರದ ಆರೋಗ್ಯ ಸೇವೆಗಳ ಡೈರೆಕ್ಟರ್ ಜನರಲ್ ಸದಸ್ಯರಾಗಿರುತ್ತಾರೆ.

ಅಲ್ಲದೆ

ಅ) ನುರಿತ ವೈದ್ಯಕೀಯ ಕ್ಷೇತ್ರದ ಪರಿಣಿತರು
ಆ) ನುರಿತ ಪ್ರಸೂತಿ ತಜ್ಞರು
ಇ) ನುರಿತ ಶಿಶು ತಜ್ಞರು
ಈ) ನುರಿತ ಸಮಾಜ ವಿಜ್ಞಾನಿಗಳು
ಉ) ಮಹಿಳಾ ಸಂಘಟನೆಗಳ ಪ್ರತಿನಿಧಿಗಳು
ಊ) ಲೋಕಸಭೆಯಿಂದ ಇಬ್ಬರು ಮತ್ತು ರಾಜ್ಯಸಭೆಯಿಂದ ಒಬ್ಬರು, ಮೂವರು ಮಹಿಳಾ ಸಂಸತ್ ಸದಸ್ಯರುಗಳು ಸದಸ್ಯರಾಗಿ ನೇಮಿಸಲ್ಪಡುತ್ತಾರೆ.
ಋ) ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ನಾಲ್ವರು ಸದಸ್ಯರನ್ನು ಪರ್ಯಾಯ ಪ್ರತಿನಿಧಿಗಳಾಗಿ ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರ ನೇಮಿಸುತ್ತದೆ.
ಋೂ) ಅಲ್ಲದೇ ಸರ್ಕಾರದ ಜಂಟಿ ಕಾರ್ಯದರ್ಶಿಯ ಹುದ್ದೆಗಿಂತ ಕಡಿಮೆ ಇಲ್ಲದ ಒಬ್ಬ ಅಧಿಕಾರಿ ex- officio ಸದಸ್ಯರಾಗಿರುತ್ತಾರೆ.

ಸಾಮಾನ್ಯವಾಗಿ ಈ ಸಮಿತಿಯ ಅವಧಿ 3 ವರ್ಷಗಳು

ಈ ಸಮಿತಿಯು ಈ ಕಾನೂನಿನ ಜಾರಿಗೆ ಸಂಬಂಧಿಸಿದಂತೆ ನೀತಿ, ನಿರೂಪಣೆಗೆ ಅಗತ್ಯವಾದ ಸಲಹೆ ನೀಡುತ್ತದೆ.

ಇದೇ ಮಾದರಿಯ ಸಮಿತಿಗಳು ರಾಜ್ಯ ಹಾಗೂ ಜಿಲ್ಲಾಮಟ್ಟದಲ್ಲಿ ರಚನೆಯಾಗಬೇಕು ಮತ್ತು ಕೇಂದ್ರದ ಮಾದರಿಯಲ್ಲಿ ರಾಜ್ಯ ಸರ್ಕಾರದ ಅಡಿಯಲ್ಲಿನ ವಿವಿಧ ಇಲಾಖೆಗಳು ಇಲ್ಲಿ ಕಾರ್ಯ ನಿರ್ವಹಿಸುತ್ತವೆ.

ಈ ಸಮಿತಿಗಳು-ಜನರಿಗೆ ತಿಳುವಳಿಕೆ ನೀಡುವ - ಕಾನೂನು ಜಾರಿಯಲ್ಲಿರುವ ತೊಡಕುಗಳ ಬಗ್ಗೆ ಪರಿಶೀಲಿಸುವ - ನಿಗದಿತ ವರದಿಗಳನ್ನು ಕಳಿಸುವ ಕೆಲಸ ಮಾಡಬೇಕಾಗುತ್ತದೆ.

ಈ ಕಾನೂನಿನ ಅನುಸಾರವಾಗಿ ಲಿಂಗಪತ್ತೆ, ಭ್ರೂಣಹತ್ಯೆ ನಡೆಸುವ ವ್ಯಕ್ತಿಗಳು/ ಅಂತಹ ಜಾಹಿರಾತು ನೀಡುವ ಕ್ಲಿನಿಕ್‌ಗಳು ಲ್ಯಾಬೋರೇಟರಿಗಳಿಗೆ ಮೊದಲ ಸಲಕ್ಕೆ 13 ವರ್ಷಗಳ ಸಜೆ, 10,000/- ದಂಡ ವಿಧಿಸಬಹುದು. ಭ್ರೂಣದ ಲಿಂಗವನ್ನು ಲಿಖಿತ, ಮೌಖಿಕ, ಸಂಜ್ಞಾಸೂಚಕವಾಗಿ ಹೇಳುವುದೂ ಕೂಡ ಈ ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧವೇ.

ಈ ರೀತಿಯ ಶಿಕ್ಷೆಗೊಳಪಟ್ಟವರು ಮತ್ತೆ ಅದೇ ತಪ್ಪನ್ನು ಎಸಗಿದಲ್ಲಿ 5 ವರ್ಷಗಳ ಸಜೆ ಮತ್ತು 50,000 ದಂಡಕ್ಕೆ ಒಳಗಾಗಬೇಕು.

ಈ ರೀತಿಯ ಅಪರಾಧ ಎಸಗಿದ ವೈದ್ಯರ ಹೆಸರುಗಳನ್ನು ಸಮಿತಿಯು ರಾಜ್ಯ ವೈದ್ಯಕೀಯ ಮಂಡಳಿಗೆ ತಿಳಿಸಬೇಕು. ಅವರ ಅಪರಾಧದ ತೀವ್ರತೆಗನುಗುಣವಾಗಿ ನ್ಯಾಯಾಲಯದಲ್ಲಿ ಅವರ ಪ್ರಕರಣ ಇತ್ಯರ್ಥವಾಗುವವರೆಗೆ ಅವರ ನೊಂದಣಿಯನ್ನು ಮತ್ತು ಆರೋಪಿಯೆಂದು ಸಾಬೀತಾದಲ್ಲಿ 5 ವರ್ಷಗಳ ಕಾಲ, ಪುನರಾವರ್ತನೆಗೊಂಡ ಅಪರಾಧಕ್ಕೆ ಅವರ ನೊಂದಣಿಯನ್ನು ಸಂಪೂರ್ಣವಾಗಿ ವಜಾ ಮಾಡುವ ಶಿಫಾರಸು ಮಾಡಬಹುದಾಗಿದೆ. ಯಾವುದೇ ಗರ್ಭಿಣಿ ಮಹಿಳೆಯರನ್ನು ಲಿಂಗ ಪರೀಕ್ಷಾ ವಿಧಾನಕ್ಕೆ ಒಳಪಡಿಸುವ ಅಪೇಕ್ಷೆ, ಬೇಡಿಕೆ ಇಡುವ ಒತ್ತಡ ಹಾಕುವ ವ್ಯಕ್ತಿ ಕೂಡ ಮೊದಲ ಸಲ 3 ವರ್ಷಗಳ ಸಜೆ 50,000 ದಂಡದ ಶಿಕ್ಷೆಗೆ ಒಳಪಡಬೇಕಾಗುತ್ತದೆ. ಪುನರಾವರ್ತನೆಗೊಂಡ ಅಪರಾಧಕ್ಕೆ 5 ವರ್ಷ ಸಜೆ, 1 ಲಕ್ಷ ರೂ.ಗಳ ದಂಡಕ್ಕೆ ಒಳಪಡುತ್ತಾರೆ.

'ಈ ಕಾನೂನಿನ ಪ್ರಕಾರ ಎಸಗಿದ ಅಪರಾಧ ಜಾಮೀನುರಹಿತ ಅಪರಾಧವಾಗುತ್ತದೆ.

ಈ ಕಾನೂನಿನ ಅಡಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಬಂದ ವ್ಯಕ್ತಿಯ ಕ್ಲಿನಿಕ್‌ನ, ಆಸ್ಪತ್ರೆಯ ಆವರಣವನ್ನು ಪ್ರವೇಶಿಸುವ ಮತ್ತು ತಲಾಶ್ ಮಾಡುವ ಅಧಿಕಾರವಿರುತ್ತದೆ.

ಇಷ್ಟೆಲ್ಲ ಇದ್ದರೂ ತೆರೆಯ ಮರೆಯಲ್ಲಿ ಈ ಅಕ್ರಮ ನಡೆಯುತ್ತಲೇ ಇದೆ. ಲಿಂಗ ಪರೀಕ್ಷೆ ನಡೆಸಿ, ಹೆಣ್ಣಾದರೆ ದೇವಿಯ ಫೋಟೋ ಗಂಡಾದರೆ ಕೃಷ್ಣ, ವಸುವಿನ ಫೋಟೋ ತೆಗೆದು ಮುಂದಿಡುವುದು, ಹುಬ್ಬೇರಳನ್ನು ಮೇಲೆ ಮಾಡಿದರೆ ಗಂಡು, ಕೆಳಗೆ ಮಾಡಿದರೆ ಹೆಣ್ಣು ಎಂಬ ಸಂಜ್ಞೆಗಳನ್ನು ತೋರುವುದು ನಡೆಯುತ್ತಲೇ ಇವೆ. ಇವು ಬದಲಾಗಬೇಕೆಂದರೆ ಪರಿಶೀಲನಾ ಸಮಿತಿಗಳು ನಾಮಕಾವಸ್ತೆ ಆಗದೇ, ಕಾನೂನು ಕೇವಲ ಕಾಗದದ ಹಾಳೆಯಾಗದೇ ಜಾರಿಗೆ ಬರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಜನರಲ್ಲಿ ಬದಲಾವಣೆ ಬರಬೇಕು. ಹೆಣ್ಣು ಹುಣ್ಣಲ್ಲವೆಂಬ ಮನಃಸ್ಥಿತಿಗೆ ಇಡೀ ಸಮಾಜ ಬರಬೇಕು. ಅದು ಮಂತ್ರಕ್ಕೆ ಉದುರುವ ಮಾವಿನ ಕಾಯಿ ಅಲ್ಲ.

ಏನನ್ನು ತಂದಿರಿ.......

ಪುಟ 16 ರಿಂದ

ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗಿದೆ. ಆದರೆ ನಾಟಕದ ನಿರೂಪಣೆಯಲ್ಲಿ ಈ ಚಿತ್ರಗೀತೆ ಅಸಂಗತೆಗಳನ್ನು ಹುಟ್ಟು ಹಾಕಿ ಆಭಾಸವೆನಿಸುತ್ತದೆ. ಸಮುದಾಯದಂತಹ ಪ್ರಬುದ್ಧ ವೇದಿಕೆಯಲ್ಲಿ ಹೊಸ ಸಂಗೀತ, ಗೀತೆಗಳ ಸಂಯೋಜನೆಯನ್ನು ಪ್ರೇಕ್ಷಕ ನಿರೀಕ್ಷಿಸುತ್ತಾನೆ. ಚಲನಚಿತ್ರದ ಸಿದ್ಧ ಮಾದರಿ ಖಂಡಿತಾ ಯೋಗ್ಯವಲ್ಲ. ಕಥಾವಸ್ತುವು ಸಹ ಸ್ಪಷ್ಟವಾಗಿ ಯಾವುದೇ ಸಂದೇಶವನ್ನು ನೀಡುವುದಿಲ್ಲ. ಆದರೆ ಅಜ್ಜಿಯ ಪ್ರೀತಿ, ಮಮಕಾರದ ಧ್ಯೋತಕವಾದ ಕೌದಿ ಪ್ರೇಕ್ಷಕನ ಗಮನ ಸೆಳೆಯುತ್ತದೆ. ದೂರವಾಗುತ್ತಿರುವ ನಮ್ಮ ಸಂಸ್ಕೃತಿಯ ಬೇರುಗಳನ್ನು ನೆನಪಿಸುತ್ತದೆ.

ಮನಸುಖರಾಯನ ಮನಸು: ರಚನೆ [illegible] ನಿರ್ದೇಶನ [illegible], ಸಂಗೀತ [illegible] ಕೂಡ್ಲು, [illegible] [illegible] ಮುಖ್ಯಪಾತ್ರ [illegible]

[illegible]

ಹೋರಾಟದ ಪ್ರಮುಖ ಘಟ್ಟವಾದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ದೇಶಪಾಂಡೆ ವಕೀಲರು ತಮ್ಮ ಮಗ ಅಚ್ಚುತನನ್ನು ಕಳೆದುಕೊಂಡು ಆಘಾತಗೊಳ್ಳುತ್ತಾರೆ. ಜೀವನದ ಕೊನೆಗಾಲದಲ್ಲಿ ಹಿರಿಯರಿಗೆ ಊರುಗೋಲಾಗಬೇಕಾದ ಮಕ್ಕಳನ್ನು ಗಾಂಧೀಜಿಯ ಚಳುವಳಿಗೆ ತಳ್ಳಿ ಅವರ ನೆಮ್ಮದಿಯ ಬದುಕನ್ನು ಕಸಿಯುತ್ತಿದ್ದಾನೆ ಎಂದು ರೋಧಿಸುತ್ತಾರೆ. ಅದೇ ವೇಳೆಯಲ್ಲಿ ಮಕ್ಕಳು, ಯುವಕರು ಚೆನ್ನಾಗಿ ಅಧ್ಯಯನ ಮಾಡಬೇಕು. ಉತ್ತಮ ವಿದ್ಯಾರ್ಥಿಗಳಾಗಬೇಕೆ ವಿನಃ ಈ ಪ್ರೀತಿ, ಪ್ರೇಮ, ಚೆಲ್ಲಾಟಗಳಲ್ಲಿ ಜೀವನದ ಅಮೂಲ್ಯ ಸಮಯವನ್ನು ವ್ಯರ್ಥ ಕಲಾಪಗಳಲ್ಲಿ ಕಳೆಯಬಾರದೆಂಬುದು ಅವರ ಅಭಿಮತ. ಅದೇ ದೇಶಪಾಂಡೆ ವಕೀಲರು ಗಾಂಧೀಜಿ ಹಂತಕರ ಗುಂಡಿಗೆ ಬಲಿಯಾದಾಗ ರೋಧಿಸುತ್ತಾರೆ. ಮಹಾತ್ಮನ ಸಾವಿಗಾಗಿ ಮರುಗುತ್ತಾರೆ. ಅಲ್ಲದೇ ಪ್ರತಿ ಜನವರಿ 31ನೇ ತಾರೀಖಿನಂದು ಉಪವಾಸ ಮಾಡಿ ಗಾಂಧೀಜಿಗೆ ಅವರ ತತ್ವಗಳಿಗೆ ಮಾನ್ಯತೆ ನೀಡಿ [illegible]ಸುತ್ತಾರೆ. ಇದಕ್ಕಿಂತ್ತ ನಾಟಕ ಕಿತ್ತೂರು ಬಸ್‌ಸ್ಟ್ಯಾಂಡಿಗೆ [illegible]. ಅಲ್ಲಿನ ಸಣ್ಣೀರವ್ವ ಮತ್ತು ಮಲಕಾಜಿಯ ಭೇಟಿಯ ಬಸ್ ಸ್ಟ್ಯಾಂಡ್‌ನ ಅವಾಂತರ ನಡುವೆಯೂ ಮಲಕಾಜಿಯು ಸಣ್ಣೀರವ್ವನ ಪರಿಚಯಕ್ಕಾಗಿ. ಸ್ನೇಹಕ್ಕಾಗಿ ಹಾತೊರೆಯುವುದು, ತಾನು ಹಣವಂತ ಹಾಗೂ ಧರ್ಮಿಷ್ಠ ಎಂದು ತೋರಿಸಿಕೊಳ್ಳಲು ಅಲ್ಲಿದ್ದ ಪಂಡರಾಪುರಕ್ಕೆ ಹೋಗುವ ಸಂತನಿಗೆ ಐದು ರೂಪಾಯಿ ಎಂದು ಪದೇ ಪದೇ ಹೇಳಿ, ಸಣ್ಣೀರವ್ವನಿಗೆ ಕಾಣುವಂತೆ ಐದು ರೂಪಾಯಿ ದಾನ ಮಾಡುವುದು ಹಾಸ್ಯಮಯವಾದರೂ, ಈಗಲೂ ಆಧುನಿಕ ಸಂಗ್ಯಾಗಳು ಗಂಗಾಳನ್ನು ಹುಡುಕುವಾಗ ನಡೆಸುವ ಚೋದ್ಯ ನೆನಪಾಗಿ ನಗೆ ತರಿಸುತ್ತದೆ. ಬಸ್ ಸ್ಟ್ಯಾಂಡ್‌ನ ಗಡಿಬಿಡಿ ತುಂಬಾ ಚೆನ್ನಾಗಿ ಮೂಡಿ ಬಂದಿತು. ಮನಸುಖರಾಯನ ಪುಸ್ತಕದ ಗೀಳು ಅದರ ಮೂಲಕ ನಾಟಕವನ್ನು ಪ್ರಸ್ತುತಪಡಿಸುವ ತಂತ್ರ ಚೆನ್ನಾಗಿದೆ. ಆದರೆ ಬರುಬರುತ್ತಾ ನಾಟಕ ತುಂಬಾ ಜಾಳು ಜಾಳಾಗುತ್ತದೆ. ವಿಧವೆಯಾದ ಸಣ್ಣೀರವ್ವನನ್ನು ವಿಧುರನಾದ ಮಲಕಾಜಿ ಮದುವೆಯಾಗಿ ಬಾಸಿಂಗದ ಮಡಿವಂತಿಕೆಗೆ ಭಂಗತಾರದೆ, ವಿಧವಾ ವಿವಾಹದ ಮಹತ್ವದ ಸಂದೇಶ ಸಾರುವಲ್ಲಿ ನಾಟಕದ ಕಥಾವಸ್ತು ಸೊರಗಿ, ಸಂಗ್ಯಾ ಮತ್ತು ಗಂಗೆಯರ ಅಕ್ರಮ ಸಂಬಂಧದ ಅನೈತಿಕತೆಯನ್ನು ವಿಷಯವನ್ನು ಪ್ರಾಮುಖ್ಯವಾಗಿಸುತ್ತದೆ. ಸಂಗ್ಯಾಬಾಳ್ಯ ನಾಟಕದ ಸಂಗೀತವನ್ನು ಹಾಗೂ ಅದರ ಸಂಭಾಷಣೆಯ ನೆರಳನ್ನು ದೂರವಿಟ್ಟಲ್ಲಿ ಮಾತ್ರ ಇದೊಂದು ಸ್ವತಂತ್ರ ನಾಟಕವಾಗುತ್ತದೆ. ಇಲ್ಲದಿದ್ದರೆ ಇದು ಮತ್ತೊಂದು ಸಂಗ್ಯಾ-ಬಾಳ್ಯದ ಪ್ರತಿರೂಪವಾಗುತ್ತದೆ. ಸಂಗೀತ ಸಂಪೂರ್ಣವಾಗಿ ಸೋತು ಹೋಗಿವೆ.

-ಕೆ.ತಿಪ್ಪೇಸ್ವಾಮಿ, ಸಿರುಗುಪ

ಭಾ.ಜ.ಪ.ದ ಬೇರು

ಈ ಸಂಗ ಪರಿವಾರಗಳ ತಿಳಿಯದವರಾರು?
ಇವು ಎಲ್ಲ ಭಾ.ಜ.ಪ. ಪಕ್ಷದ್ದೇ ಬೇರು
ಭಾರತದ ಏಕತೆಯ ಒಡೆಯತ್ತ ದಿವಸ
ಮಾಡುತ್ತಾ ಬಂದಿಹವು ಮನೆ ಮುರುಕ ಕೆಲಸ

ದೇಶ ಭಕ್ತರ ವೇಷ

ಮತಕಾಗಿ ನೆತ್ತರನು ಹರಿಸುತಿಹ ಜನಕೆ
ದೇಶ ಭಕ್ತರು ಎಂದು ತಲೆಬಾಗಬೇಕೆ?
ಅಮಾನುಷರು ಇವರು ಬರೆ ವೇಷ ಹೊರಗೆ
ನೆತ್ತರಿನ ಕಲೆ ನೋಡಿ ಇಣುಕೊಮ್ಮೆ ಒಳಗೆ

- ವಿಡಂಬಾರಿ

ಇವರು ದುಡಿವ ಜನರ ದನಿಗಳು

ಚುನಾವಣೆ ಬಂತೆಂದರೆ, ಕೋಟಿಗಟ್ಟಲೆ ಹಣ ಖರ್ಚು ಮಾಡುವ, ಶೋಷಕರಿಗೆ ಶೋಷಣೆಯನ್ನು ಮುಂದುವರೆಸಲು ಬೇಕಾದ ಸರ್ಕಾರಿ ಯಂತ್ರವನ್ನು ಹಿಡಿತಕ್ಕೆ ತೆಗೆದುಕೊಳ್ಳುವ ಹೆಬ್ಬಯಕೆಯಾದರೆ, ದುಡಿಯುವ ಜನರ, ಬಡ ಜನರ ಬದುಕಿನ ಬದಲಾವಣೆ ಅಭಿವೃದ್ಧಿಯೇ ಪ್ರಧಾನ ಆಶಯವಾಗಿರುವ ಕಮ್ಯುನಿಸ್ಟ್‌ರಿಗೆ ಇಂದಿನ ವ್ಯವಸ್ಥೆಯ ಮಿತಿಯಲ್ಲಿ ಜನಪರವಾಗಿ ಶ್ರಮಿಸುತ್ತಾ ಪರ್ಯಾಯ ಧೋರಣೆಗಳನ್ನು ಜನರ ಮುಂದಿಡುವ ಅವಕಾಶ. ಆ ನಿಟ್ಟಿನಲ್ಲಿ ಸಿಪಿಐ(ಎಂ)ಪಕ್ಷದ ವತಿಯಿಂದ ಮೊದಲ ಹಂತದ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ 5 ಅಭ್ಯರ್ಥಿಗಳ ಪರಿಚಯ ಇಲ್ಲಿದೆ.

ಬಾಗೇಪಲ್ಲಿ - ಜಿ.ವಿ. ಶ್ರೀರಾಮ ರೆಡ್ಡಿ

ಜನಪರ ರಾಜಕೀಯದಲ್ಲಿ ಆಸಕ್ತಿ ಉಳ್ಳವರೆಲ್ಲರಿಗೂ ವಿಧಾನ ಸಭೆ ಎಂದಾಕ್ಷಣ ತಕ್ಷಣ ನೆನಪಾಗುವುದು ಶಾಸಕ ಜಿ.ವಿ. ಶ್ರೀರಾಮರೆಡ್ಡಿಯವರ ಹೆಸರು. ರಾಜ್ಯದ ಯಾವುದೇ ವಿಭಾಗದ ಜನರ ಸಮಸ್ಯೆ ಇರಲಿ, ಅಲ್ಪ ಸಂಖ್ಯಾತರ ವಿರುದ್ಧ ಕೋಮುವಾದಿಗಳು ನಡೆಸಿದ ದೌರ್ಜನ್ಯವೇ ಆಗಲಿ -ಸಮರ್ಥವಾಗಿ ವಿಧಾನಸಭೆಯಲ್ಲಿ ಎತ್ತಿ ಹೇಳುವ ಕೆಲಸವನ್ನು ಮಾಡುತ್ತಿರುವವರು ಶ್ರೀರಾಮರೆಡ್ಡಿಯವರು ಎಂದರೆ ತಪ್ಪಾಗಲಾರದು.

ಈಗಾಗಲೇ 1994 ಮತ್ತು 2004ರಲ್ಲಿ ಶಾಸಕರಾಗಿ ಬಾಗೇಪಲ್ಲಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದ ಶ್ರೀರಾಮರೆಡ್ಡಿಯವರು ಪುನಃ ಅದೇ ಕ್ಷೇತ್ರದಿಂದ ಸಿಪಿಐ(ಎಂ) ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದಾರೆ. ಸಂಗಾತಿಗಳ ನಡುವೆ ಕಾಮ್ರೇಡ್ ಜಿ.ವಿ.ಎಸ್. ಎಂದೇ ಕರೆಯಿಸಿಕೊಳ್ಳುವ ಶ್ರೀರಾಮರೆಡ್ಡಿಯವರು ರಾಜ್ಯದಲ್ಲಿ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ(ಎಸ್‌ಎಫ್‌ಐ) ಸ್ಥಾಪಕರಲ್ಲೊಬ್ಬರಾಗಿ ಎಡಚಳುವಳಿಗೆ ಧುಮುಕಿದವರು. ಅದನ್ನು ಕಟ್ಟಿ ಬೆಳೆಸುವಲ್ಲಿ ಶ್ರಮಿಸಿದವರು.

ನಂತರ ಯುವಜನ ಸಂಘಟನೆಯಾದ ಡಿವೈಎಫ್‌ಐಯನ್ನು ಕಟ್ಟಿ ಬೆಳೆಸಲು ಶ್ರಮಿಸಿದವರು. ಮಾತ್ರವಲ್ಲದೆ, ಕೃಷಿ ಕೂಲಿಕಾರರ ಸಂಘ, ರೈತ ಸಂಘಗಳನ್ನು ಬೆಳೆಸಲು ಕೊಡುಗೆ ನೀಡಿದರು. ಈಗ ಇವರು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರೂ ಆಗಿದ್ದಾರೆ.


ಜಿ.ವಿ.ಶ್ರೀರಾಮರೆಡ್ಡಿ

ಜಾತ್ಯಾತೀತ ಜನತಾದಳ ಕುಮಾರಸ್ವಾಮಿಯವರ ನೇತೃತ್ವದಲ್ಲಿ ಕೋಮುವಾದಿ ಬಿಜೆಪಿಯನ್ನು ಅಪ್ಪಿಕೊಂಡಾಗ, ಶ್ರೀರಾಮರೆಡ್ಡಿಯವರು ಮುಂದಿಟ್ಟ ಮಾತುಗಳು ಜಾತ್ಯತೀತತೆಯಲ್ಲಿ ನಂಬಿಕೆ ಇಟ್ಟ ಜನರಿಂದ ಪ್ರಶಂಸೆಗೆ ಒಳಗಾಯಿತು. ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಹಲವಾರು ರೈತ ಹೋರಾಟಗಳಲ್ಲಿ ಭಾಗವಹಿಸಿದ್ದ ಶ್ರೀರಾಮರೆಡ್ಡಿಯವರು, ಶಾಸಕರಾದ ನಂತರವೂ ಕೋಲಾರ ಜಿಲ್ಲೆಗೆ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ರೂಪಿಸಬೇಕೆಂದು ಜಿಲ್ಲೆಯಲ್ಲಿ ವಿವಿಧ ರೀತಿಯ ಹೋರಾಟಗಳನ್ನು ನಡೆಸಿ ರಾಜಧಾನಿ ಬೆಂಗಳೂರಿಗೆ ಪಾದಯಾತ್ರೆ ನಡೆಸಿ, ಸರ್ಕಾರದ ಗಮನ ಸೆಳೆದರು.

ಕಳೆದ ವರ್ಷ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150ನೇ ವರ್ಷ, ಭಗತ್‌ಸಿಂಗ್ ಹಾಗೂ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ 60 ವರ್ಷಗಳ ಜಂಟಿ ಆಚರಣೆಯ ಸಂದರ್ಭದಲ್ಲಿ ದೇಶಪ್ರೇಮಿ ಜನೋತ್ಸವವನ್ನು ಜಿಲ್ಲೆಯಾದ್ಯಂತ ನಡೆಸುವುದರ ಮೂಲಕ ಜನರಲ್ಲಿ ಸಾಮ್ರಾಜ್ಯ ಶಾಹಿ ಶೋಷಣೆಯ ವಿರುದ್ಧ ಪ್ರಜ್ಞೆ ಮೂಡಿಸುವಲ್ಲಿ ಶ್ರಮಿಸಿದರು.

ಕೇಂದ್ರ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧವೂ ಹಲವಾರು ಹಂತದ ಪ್ರಚಾರ, ಆಂದೋಲನ ಸಂಘಟಿಸುವುದರ ಮೂಲಕ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಆರ್ಥಿಕ ನೀತಿಯಲ್ಲಿ ಭಿನ್ನವಾಗಿಲ್ಲ ಎಂಬುದನ್ನು ಜನತೆಗೆ ವಿವರಿಸಿದರು.

ಶಾಸಕರಾಗಿ ಕ್ಷೇತ್ರದಲ್ಲಿ ಕೆಲಸ : ಎರಡು ಅವಧಿಗಳಲ್ಲಿ ಶಾಸಕರಾಗಿ ಕ್ಷೇತ್ರದಲ್ಲಿ ಶ್ರೀರಾಮರೆಡ್ಡಿಯವರು ಮಾಡಿದ ಕೆಲಸದ ಪಟ್ಟಿ ಬಹಳ ದೊಡ್ಡದಾಗುತ್ತದೆ.

ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಶಾಶ್ವತ ಕುಡಿಯುವ ನೀರಿಗಾಗಿ ಸಿಪಿಐ(ಎಂ) ನೇತೃತ್ವದಲ್ಲಿ ಹೋರಾಟ ನಡೆಸಿದ ಶ್ರೀರಾಮರೆಡ್ಡಿಯವರು ಚಿತ್ರಾವತಿ ನದಿಗೆ ಅಣೆಕಟ್ಟು ಕಟ್ಟಿಸುವುದರ ಮೂಲಕ ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣಗಳಿಗೆ ಕುಡಿಯುವ ನೀರು ಸರಬರಾಜು ಒದಗಿಸಿದ್ದಲ್ಲದೆ ಸುತ್ತಲಿನ 128 ಹಳ್ಳಿಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲು ಆರಂಭವಾಗಿದೆ.

ಶಿಕ್ಷಣ ಅವಕಾಶಗಳ ವಿಸ್ತರಣೆಯ ನಿಟ್ಟಿನಲ್ಲಿ 15 ಸರ್ಕಾರಿ ಪ್ರಾಥಮಿಕ ಶಾಲೆಗಳು, 7 ಪ್ರೌಢಶಾಲೆಗಳು, 2 ಪದವಿ ಪೂರ್ವ ಕಾಲೇಜು ಹಾಗೂ ಒಂದು ಪ್ರಥಮ ಕಾಲೇಜನ್ನು ಮಂಜೂರು ಮಾಡಿಸಿರುತ್ತಾರೆ. ಸ್ಥಳೀಯರಿಗೆ ಉದ್ಯೋಗವಕಾಶ ಹೆಚ್ಚಿಸಲು 200 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಸ್ಥಾಪನೆಯಾಗಿರುತ್ತದೆ. ಒಟ್ಟಾರೆಯಾಗಿ ವಿಧಾನಸಭೆಯ ಒಳಗೆ ಹಾಗೂ ಹೊರಗೆ ಜನರ ಸಮಸ್ಯೆಗಳಿಗೆ ಚಳುವಳಿ ಸಂಘಟಿಸುತ್ತಾ ಶಾಸಕರಾಗಿ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನಡೆಸುವುದರ ಮೂಲಕ ಇಂದಿನ ವ್ಯವಸ್ಥೆ ಇತಿಮಿತಿಯಲ್ಲೂ ಜನ ದನಿಯಾಗಿ ಹೇಗೆ ಕೆಲಸ ಮಾಡಬಹುದೆಂದು ತೋರಿಸಿ ಕೊಟ್ಟಿದ್ದಾರೆ.


ಆರ್.ಚಂದ್ರತೇಜಸ್ವಿ

ದೊಡ್ಡಬಳ್ಳಾಪುರ - ಆರ್.ಚಂದ್ರತೇಜಸ್ವಿ

ದೊಡ್ಡಬಳ್ಳಾಪುರ ರೈತ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದ ರಾಮಭದ್ರಯ್ಯನವರ ಮಗ ಆರ್.ಚಂದ್ರತೇಜಸ್ವಿಯವರು ತಂದೆಯವರ ನೆರಳಿನಲ್ಲಿಯೇ ಎಡ ಚಳುವಳಿಗೆ ಆಕರ್ಷಿತರಾದವರು. ಸ್ವಾತಂತ್ರ್ಯ ಹೋರಾಟಗಾರ ಹಾಗೂ ರೈತ ಚಳುವಳಿಯನ್ನು ಕಟ್ಟಿದ ಇತ್ತೀಚೆಗೆ ನಿಧನರಾದ ಮುಗುವಾಳಪ್ಪನವರು ಸಹ ತೇಜಸ್ವಿಯವರಿಗೆ ಆದರ್ಶ ಪ್ರಾಯರು.ಅಂತೆಯೇ ವಿದ್ಯಾರ್ಥಿ ದೆಸೆಯಲ್ಲಿಯೇ ಎಸ್‌ಎಫ್‌ಐ ಕಟ್ಟುವುದರ ಮೂಲಕ ವಿದ್ಯಾರ್ಥಿಗಳ ಸಮಸ್ಯೆಗಳ ವಿರುದ್ಧ ಹೋರಾಡಿದವರು.

ಜೀವನದ ಆಸರೆಯಾಗಿ ಪ್ರೌಢಶಾಲಾ ಶಿಕ್ಷಕರಾಗಿ ಸೇರಬೇಕಾಗಿ ಬಂದರೂ ಪೂರ್ಣಾವಧಿ ಕಾರ್ಯಕರ್ತರಾಗಿ ದುಡಿಯಬೇಕೆಂದು ಪಕ್ಷದ ಕರೆ ಬಂದಾಗ ಶಿಕ್ಷಕ ಹುದ್ದೆಗೆ ರಾಜೀನಾಮೆ ನೀಡಿ ಕಮ್ಯುನಿಸ್ಟ್ ಚಳುವಳಿಗೆ ತನ್ನನ್ನು ಮುಡುಪಾಗಿಟ್ಟುಕೊಂಡರು.

ಸಿಪಿಐ(ಎಂ)ನ ದೊಡ್ಡ ಬಳ್ಳಾಪುರ ತಾಲ್ಲೂಕುಸಮಿತಿಯ ಕಾರ್ಯದರ್ಶಿ ಯಾಗಿರುವ ಅವರು ನಾಗರೀಕ ಸೌಲಭ್ಯಗಳಿಗಾಗಿ, ಬಡಜನರಿಗೆ ಹಸಿರು ಕಾರ್ಡ್‌ಗಾಗಿ, ಭ್ರಷ್ಟಾಚಾರದ ವಿರುದ್ಧ ನಿರಂತರ ಹೋರಾಟ ನಡೆಸಿದವರು. ದೊಡ್ಡಬಳ್ಳಾಪುರದ ಆರ್ಥಿಕತೆಗೆ ಮೂಲಸೆಲೆಯಾಗಿರುವ ನೇಕಾರರು ಸಂಕಷ್ಟಕ್ಕೊಳಗಾಗಿ ಚಳುವಳಿ ನಡೆಸುವ ಸಂದರ್ಭದಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಭುಜಕ್ಕೆ ಭುಜ ಕೊಟ್ಟು ದುಡಿದರು.

ಸಿಪಿಐ(ಎಂ) ನ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುವ ತೇಜಸ್ವಿಯವರು ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಸಮಿತಿಯ ಸದಸ್ಯರಾಗಿರುತ್ತಾರೆ.


ಗೌರಮ್ಮ

ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಹೆಸರಿನಲ್ಲಿ ಕೋಟ್ಯಾಧಿಪತಿಗಳು ಹಣವನ್ನು ನೀರಿನಂತೆ ಖರ್ಚು ಮಾಡುತ್ತಿರುವಾಗ ಇದು ಜನರ ರಾಜಕೀಯದಲ್ಲಿ ಜನರ ಪರವಾಗಿರುವ ರಾಜಕೀಯ ಬೇರೆಯೇ ಇದೆ ಎಂದು ದೊಡ್ಡಬಳ್ಳಾಪುರ ಮತದಾರರಿಗೆ ತೋರಿಸಿಕೊಟ್ಟಿದ್ದಾರೆ ಕಾಮ್ರೇಡ್ ಚಂದ್ರ ತೇಜಸ್ವಿಯವರು.

ಕೃಷ್ಣರಾಜಪುರ - ಗೌರಮ್ಮ

1993-94 ಕೃಷ್ಣರಾಜಪುರದ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ ಗೌರಮ್ಮನವರು ಮಾಲೀಕರ ದೌರ್ಜನ್ಯದ ವಿರುದ್ಧ ಕಾರ್ಮಿಕರನ್ನು ಸಂಘಟಿಸುತ್ತಾ ಬೆಳೆದವರು. ಮಹಿಳಾ ಕಾರ್ಮಿಕರೇ ಹೆಚ್ಚಾಗಿದ್ದ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಮಹಿಳೆಯರು ಅನುಭವಿಸುತ್ತಿದ್ದ ನೋವಿಗೆ ಸ್ಪಂದಿಸುತ್ತಾ ಕಾರ್ಖಾನೆಗಳಲ್ಲಿ ಮಾತ್ರ ವಲ್ಲದೆ, ಸ್ಲಂಗಳಲ್ಲೂ ಮಹಿಳೆಯರನ್ನು ಸಂಘಟಿಸಲು ತೊಡಗಿದರು.

ಇಂತಹ ಹೋರಾಟಗಳಿಂದ ಪೋಲೀಸರ ದೌರ್ಜನ್ಯ ಮತ್ತು ಮಾಲೀಕರ ಗೂಂಡಾಗಿರಿಯನ್ನು ಎದುರಿಸಿದ್ದು ಮಾತ್ರವಲ್ಲದೆ, ಕೆಲಸವನ್ನು ಕಳೆದುಕೊಂಡ ಗೌರಮ್ಮನವರು ಪಡೆದ ಪೂರ್ಣಾವಧಿ ಕಾರ್ಯಕರ್ತೆಯಾಗಿ ಮುಂದುವರಿದರು.

ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಹಾಗೂ ಸಿಪಿಐ(ಎಂ) ನ ಬೆಂಬಲದಿಂದ ಕುಡಿಯುವ ನೀರಿಗಾಗಿ, ಹಕ್ಕು ಪತ್ರಗಳಿಗಾಗಿ ಬೆಂಗಳೂರಿನ ಕೆ.ಆರ್.ಪುರಂ ಬಳಿ ಇರುವ ವಿಜನಾಪುರ ಸ್ಲಂ ನಿವಾಸಿಗಳು ಹೋರಾಟ ನಡೆಸಿದಾಗ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಗೌರಮ್ಮ ನವರು ರಸ್ತೆ, ಒಳಚರಂಡಿ, ಮನೆ ನಿವೇಶನಕ್ಕೆ ಒತ್ತಾಯಿಸಿ ನಡೆದ ಹೋರಾಟಗಳಲ್ಲೂ ಮುಂಚೂಣಿಯಲ್ಲಿದ್ದರು.

ಬಿಜೆಪಿ ಮತ್ತು ಜೆಡಿ(ಎಸ್) ನೇತೃತ್ವದ ಸರ್ಕಾರವು ಜಾರಿಗೆ ತಂದಿದ್ದ ಅಕ್ರಮ-ಸಕ್ರಮ ಯೋಜನೆ ಹಾಗೂ ಮೌಲ್ಯಾಧಾರಿತ ತೆರಿಗೆ ಪದ್ಧತಿಯ ವಿರುದ್ಧವೂ ಜನರನ್ನು ಸಂಘಟಿಸಿದ್ದರು.

ಕೃಷ್ಣರಾಜಪುರ ಕ್ಷೇತ್ರವು ಹಿಂದಿನ ವರ್ತೂರು ಕ್ಷೇತ್ರದ ಭಾಗವಾಗಿತ್ತು. 1983ರಲ್ಲಿ ಕರ್ನಾಟಕ ಕಾರ್ಮಿಕ ವರ್ಗದ ಪ್ರಮುಖ ನಾಯಕ ಸೂರ್ಯನಾರಾಯಣ ರಾವ್ ಸ್ಪರ್ಧಿಸಿ ಗೆದ್ದಿದ್ದರು. ಆಶ್ಚರ್ಯವೆಂದರೆ ಈ ಬಾರಿಯಾಗಲಿ ಅಥವಾ ಹಿಂದಿನ ವರ್ತೂರು ಕ್ಷೇತ್ರದಲ್ಲಿಯೇ ಇದುವರೆಗೂ ಯಾವುದೇ ಮಹಿಳಾ ಅಭ್ಯರ್ಥಿ ಸ್ಪರ್ಧಿಸಿರಲಿಲ್ಲ. ಅಂದರೆ ಪ್ರಥಮ ಬಾರಿಗೆ ಮಹಿಳಾ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಸಿಪಿಐ(ಎಂ) ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ರಾಗಿರುವ ಗೌರಮ್ಮನವರು ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಸಹ ಕಾರ್ಯದರ್ಶಿಯೂ ಆಗಿರುತ್ತಾರೆ.


ಕೆ.ಜಿ.ಎಫ್. -ತಂಗರಾಜ್

ಸಂಗಾತಿ ಪಿ.ತಂಗರಾಜ್ BSc, LLBಯವರು ವಿದ್ಯಾರ್ಥಿಯಾಗಿರುವಾಗಲೇ ವಿದ್ಯಾರ್ಥಿ ಸಂಘಟನೆಯನ್ನು (ಎಸ್‌ಎಫ್‌ಐ) ಕಟ್ಟಿ ಹೋರಾಟ ನಡೆಸಿದವರಾಗಿದ್ದಾರೆ. ಈಗ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ (DYFI) ಬಂಗಾರಪೇಟೆ ತಾಲ್ಲೂಕು ಕಾರ್ಯದರ್ಶಿಯಾಗಿಯೂ, ಆಟೋ ಚಾಲಕರ ಸಂಘ (ಸಿಐಟಿಯು) ಅಧ್ಯಕ್ಷರಾಗಿಯೂ ಹಾಗೂ ಬಿಇಎಂಎಲ್ ಕಾಂಟ್ರಾಕ್ಟ್ ಕಾರ್ಮಿಕರ ಸಂಘದ ಜಂಟೀ ಕಾರ್ಯದರ್ಶಿಯಾಗಿಯೂ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿಗೆ ದಿನಪಯಣಿಗರಾಗಿ ಹೋಗಿಬರುವ ಜನರ ಹಿತರಕ್ಷಣೆಗಾಗಿ ಶ್ರಮಿಸುತ್ತಿರುವ ಸಂಗಾತಿಯಾಗಿದ್ದಾರೆ. ಈಗ ಸಿಪಿಐ(ಎಂ) ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ. ತನ್ನ ಎಳೆಯವಯಸ್ಸಿನಿಂದಲೇ ಬಡಜನರ ಹಿತಕಾಪಾಡಲು ದುಡಿಯುತ್ತಿರುವ ಕಾಮ್ರೇಡ್ ಪಿ.ತಂಗರಾಜ್‌ರವರು ಸಿಪಿಐ(ಎಂ)ನ ಅಭ್ಯರ್ಥಿಯಾಗಿದ್ದಾರೆ.

ಗೌರಿಬಿದನೂರು - ಜಿ.ಸಿದ್ದಗಂಗಪ್ಪ

ಸಿಪಿಐ(ಎಂ) ನ ಪ್ರಭಾವವಿರುವ ಬಾಗೇಪಲ್ಲಿಗೆ ಹೊಂದಿಕೊಂಡಿರುವ ಗೌರಿಬಿದನೂರಿನಲ್ಲಿ ಪ್ರಥಮಬಾರಿಗೆ ಜಿ.ಸಿದ್ದಗಂಗಪ್ಪ ಎಂಬುವವರು ಪಕ್ಷದ ವತಿಯಿಂದ ಸ್ಪರ್ಧಿಸುತ್ತಿದ್ದಾರೆ. 1988 ರಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರಾಗಿ ಎಡ ಚಳುವಳಿಯನ್ನು ಪ್ರವೇಶಿಸಿದ ಸಿದ್ದಗಂಗಪ್ಪನವರು ಸಂಘದ ಜಿಲ್ಲಾ ಉಪಾಧ್ಯಕ್ಷರಾಗಿದ್ದಾರೆ. ಸಿಪಿಐ(ಎಂ) ನ ತಾಲ್ಲೂಕು ಕಾರ್ಯದರ್ಶಿ ಹಾಗೂ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆಗಿದ್ದಾರೆ.

ಪಕ್ಷದ ಹಾಗೂ ರೈತರ ಸಂಘಗಳ ನೇತೃತ್ವದಲ್ಲಿ ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಟ ನಡೆಸಿದ ಸಿದ್ದಗಂಗಪ್ಪನವರು 1990ರಲ್ಲಿ ಗೌರಿಬಿದನೂರು ತಾಲ್ಲೂಕಿನ ಕರೇಕಲ್ಲಳ್ಳಿ ಪ್ರದೇಶದಲ್ಲಿ ಸರ್ಕಾರಿ ಸೈಟು ಲಪಟಾಯಿಸಿದ ಭೂಗಳ್ಳರ ವಿರುದ್ಧ ಯಶಸ್ವಿ ಹೋರಾಟ ನಡೆಸಿದರು.


ಪಿ.ತಂಗರಾಜ್

2002-03 ರಲ್ಲಿ ಗೌರಿಬಿದನೂರು ಸಕ್ಕರೆ ಕಾರ್ಖಾನೆಯ ಆಡಳಿತವು ರೈತರಿಗೆ 6 ಕೋಟಿ ರೂ. ಹಣ ಬಾಕಿ ಉಳಿಸಿ, ಮುಚ್ಚಿದಾಗ ಕಬ್ಬು ಬೆಳೆಗಾರರ ಹೋರಾಟಗಳನ್ನು ನಿರಂತರವಾಗಿ ನಡೆಸಿ ಬಾಕಿ ಹಣವನ್ನು ರೈತರಿಗೆ ಕೊಡಿಸುವಲ್ಲಿ ಯಶಸ್ವಿಯಾದರು.

ಪಕ್ಷದ ಕರೆಯ ಮೇರೆಗೆ ಅವಿಭಜಿತ ಕೋಲಾರಜಿಲ್ಲೆಯ ಶಾಶ್ವತ ಕುಡಿಯುವ ನೀರಿಗಾಗಿ ನಡೆದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದು, ಜನರ ಹಿತರಕ್ಷಣೆಗಾಗಿ ತನ್ನ ಸೇವೆಯನ್ನು ಮುಡಿಪಾಗಿಟ್ಟಿದ್ದಾರೆ.

ಜಗದಗಲ

ಶರತ್‌ಚಂದ್ರ

ಪರಾಗುವೆ : 'ಬಡವರ ಬಿಷಪ್' ಅಧ್ಯಕ್ಷ

ಲ್ಯಾಟಿನ್ ಅಮೆರಿಕದ ಮುಂದೊತ್ತಿ ಬರುತ್ತಿರುವ ಎಡಶಕ್ತಿಗಳ ಇನ್ನೊಂದು ಅಲೆ ಉತ್ತರ ಅಮೆರಿಕದ ಧಣಿಗಳಿಗೆ ಹೊಡೆದು ನಡುಕ ತಂದಿದೆ. ಪರಾಗುವೇ ಎಂಬ ಪುಟ್ಟ ದೇಶ ಎಡ ಅಭ್ಯರ್ಥಿಯನ್ನು ಅಧ್ಯಕ್ಷ ಚುನಾವಣೆಯಲ್ಲಿ ಗೆಲ್ಲಿಸಿದೆ. ಆ ಮೂಲಕ ಅರವತ್ತು ವರ್ಷಗಳಿಗೂ ಹೆಚ್ಚು ದೀರ್ಘವಾದ ಏಕಪಕ್ಷೀಯ ಸರ್ವಾಧಿಕಾರ ಕೊನೆಗೊಳಿಸಿದೆ. 'ಬಡವರ ಬಿಷಪ್' ಎಂದು ಕರೆಯಲಾಗುವ ಫೆರ್ನಾಂಡೋ ಲುಗೋ ಶೇ.41 ಮತಗಳಿಸಿ, ಆರು ದಶಕಗಳ ಕಾಲ ಆಳಿದ ಕೊಲರಾಡೋ ಪಕ್ಷದ ಅಭ್ಯರ್ಥಿಯನ್ನು ಸೋಲಿಸಿದರು. ಲುಗೋ ಎಡ-ಮಧ್ಯಮ ಪಂಥೀಯ ಪಕ್ಷಗಳ ಕೂಟವಾದ 'ಬದಲಾವಣೆಗೆ ದೇಶಪ್ರೇಮಿ ಕೂಟ'ದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಅವರು ರೋಮನ್ ಕ್ಯಾಥೋಲಿಕ್ ಪಾದರಿಯಾಗಿ ಬಿಷಪ್ ಹುದ್ದೆಯವರೆಗೆ ಏರಿದ್ದರು. ಲುಗೋ ಅವರಿಗೆ ರಾಜಕೀಯಕ್ಕೆ ಇಳಿಯದೆ ಬಡವರ ಸಮಸ್ಯೆ ಪರಿಹಾರಕ್ಕೆ ದುಡಿಯಲು ಸಾಧ್ಯವಿಲ್ಲ ಎಂದು ಅನಿಸಿ ಕೆಲವೇ ತಿಂಗಳುಗಳ ಹಿಂದೆ ಸಕ್ರಿಯ ರಾಜಕೀಯಕ್ಕೆ ಇಳಿದಿದ್ದರು. ಲ್ಯಾಟಿನ್ ಅಮೆರಿಕದ ಪಾದ್ರಿಗಳಲ್ಲಿ 60-70 ರ ದಶಕದಲ್ಲಿ ಪ್ರಬಲವಾಗಿದ್ದ ಬಡವರ ಪರ 'ವಿಮೋಚನಾ ಧಾರ್ಮಿಕ ಪಂಥ' ದಿಂದ ಅವರು ಪ್ರಭಾವಿತರಾಗಿದ್ದರು. ಪರಾಗುವೇಯ ಬಡವರ, ಆದಿವಾಸಿಗಳ ಪರ ನೀತಿಗಳಿಗೆ ಹೋರಾಡುತ್ತಿದ್ದ ಲೊಗೋ, ಜನತೆಗೆ ಬದಲಾವಣೆಯ ಹರಿಕಾರರಾಗಿ ಕಂಡಿದ್ದರೆ ಆಶ್ಚರ್ಯವೇನಿಲ್ಲ.



ಲ್ಯಾಟಿನ್ ಅಮೆರಿಕದ ಎರಡನೇ ಅತ್ಯಂತ ಬಡ ದೇಶವಾದ ಪರಾಗುವೇಯ ಶೇ.60ಕ್ಕೂ ಹೆಚ್ಚು ಜನ ಕಡುಬಡವರು. ಅದರಲ್ಲಿ ಬಹುಪಾಲು ಅಲ್ಲಿನ ಆದಿವಾಸಿಗಳು. ಅರವತ್ತು ವರ್ಷಗಳಿಗೂ ಹೆಚ್ಚು ಕಾಲ ಆಳಿದ ಕೊಲೊರಾಡೋ ಪಕ್ಷ ಸ್ಥಳೀಯ ಶ್ರೀಮಂತರ ಮತ್ತು ಅವರ ಉತ್ತರ ಅಮೆರಿಕದ ಧಣಿಗಳ ಪರವಾಗಿ ಸರ್ವಾಧಿಕಾರ ನಡೆಸಿತ್ತು.

ಲುಗೋ ವಿಜಯದಿಂದ ಲ್ಯಾಟಿನ್ ಅಮೆರಿಕದಲ್ಲಿ ಬರಿ ಬೆರಳೆಣಿಕೆಯ ದೇಶಗಳಲ್ಲಿ (ಕೊಲಂಬಿಯಾ, ಎಲ್ ಸಾಲ್ವಡೋರ್, ಮೆಕ್ಸಿಕೊ) ಮಾತ್ರ ಬಲಪಂಥೀಯ ಸರ್ಕಾರಗಳು ಇವೆ. ಉಳಿದೆಲ್ಲಾ ದೇಶಗಳಲ್ಲಿ ಎಡ ಒಲವಿನ ಸರ್ಕಾರಗಳು ಇವೆ. ಲೋಗೋ ಅಧ್ಯಕ್ಷರಾಗಿ ಪರಾಗುವೇಯ ಹಲವು ನೆನೆಗುದಿಗೆ ಬಿದ್ದ ಸಮಸ್ಯೆಗಳಿಗೆ ಪರಿಹಾರ ಹುಡುಕಬೇಕಿದೆ. ಇದರಲ್ಲಿ ನೆರೆಯ ಅರ್ಜೆಂಟಿನಾ, ಬ್ರೆಜಿಲ್ ಮತ್ತು ಆ ಪ್ರದೇಶದ ಎಡ ಒಲವಿನ ಸರ್ಕಾರಗಳ ನೆರವು, ಸಹಕಾರ ಸಿಗುತ್ತದೆ ಎಂಬ ನಿರೀಕ್ಷೆ ಇದೆ.

ಒಬಾಮಾ - ಹಿಲೆರಿ ಹಣಾಹಣಿ ಮುಂದುವರಿಕೆ

ಹಿಲರಿ ಪೆನ್ಸಿಲ್ವೆನಿಯಾ ಪ್ರಾಂತ್ಯದ ಡೆಮೊಕ್ರಾಟಿಕ್ ಪ್ರಾಥಮಿಕ ಚುನಾವಣೆ ಗೆದ್ದು ಸ್ಪರ್ಧೆಯಲ್ಲಿ ಮುಂದುವರೆದಿದ್ದಾರೆ. ಈ ಪ್ರಮುಖ ಸ್ಪರ್ಧೆಯಲ್ಲಿ ಸೋತಿದ್ದರೆ ಅವರು ಸ್ಪರ್ಧೆಯಿಂದ ನಿವೃತ್ತರಾಗಬೇಕೆಂಬ ಒತ್ತಡ ತೀವ್ರವಾಗುತ್ತಿತ್ತು. ಆದರೂ ಒಬಾಮಾ ಇನ್ನೂ ಒಟ್ಟಾರೆ ಪ್ರತಿನಿಧಿಗಳ ಸಂಖ್ಯೆ ದೃಷ್ಟಿಯಿಂದ ಮುಂದೆ ಇದ್ದಾರೆ. ಇನ್ನೂ ಕೆಲವು ಪ್ರಾಂತ್ಯಗಳಲ್ಲಿ ಪ್ರಾಥಮಿಕ ಚುನಾವಣೆ ನಡೆಯಬೇಕಿದ್ದು, ಚುನಾಯಿತ ಪ್ರತಿನಿಧಿಗಳಲ್ಲಿ ಹಿಲರಿ ಬಹುಮತ ಪಡೆಯುವ ಸಾಧ್ಯತೆ ಕಡಿಮೆ. ಸೂಪರ್ ಪ್ರತಿನಿಧಿಗಳು (ಡೆಮೊಕ್ರಾಟಿಕ್ ಪಕ್ಷದ ಪದಾಧಿಕಾರಿಗಳು, ಚುನಾಯಿತ ಶಾಸಕರು) ಡೆಮೊಕ್ರಾಟಿಕ್ ಅಧ್ಯಕ್ಷ ಅಭ್ಯರ್ಥಿ ಚುನಾಯಿಸಲಿದ್ದಾರೆ. ಪ್ರಾಥಮಿಕ ಚುನಾವಣೆಗಳಲ್ಲಿ ಹಿಲರಿ-ಒಬಾಮಾ ಹಣಾಹಣಿ ತೀವ್ರವಾಗಿ ನಡೆದಿದ್ದು ಅಪಪ್ರಚಾರ-ಟೀಕಾ ಪ್ರಹಾರ ತೀವ್ರವಾಗಿ ನಡೆದಿದೆ, ಅದು ಡೆಮೊಕ್ರಾಟಿಕ್ ಅಧ್ಯಕ್ಷೀಯ ಪ್ರಚಾರಕ್ಕೆ ಮುಂದೆ ತೊಂದರೆ ಉಂಟು ಮಾಡಬಹುದು. ರಿಪಬ್ಲಿಕನರು ಆ ಅಪಪ್ರಚಾರ-ಟೀಕಾ ಪ್ರಹಾರಗಳನ್ನೇ ಬಳಸಬಹುದು ಎಂದು ಪಕ್ಷದ ವರಿಷ್ಟರು ಆತಂಕಗೊಂಡಿದ್ದಾರೆ. ಆದರೆ ಹಿಲರಿ-ಒಬಾಮಾ ಹಣಾಹಣಿ ಹೆಚ್ಚಾಗಿ ಸಾರ್ವಜನಿಕರ ನೀತಿಗೆ ಸಂಬಂಧಿಸಿದ್ದಲ್ಲ. ಕ್ಷುಲ್ಲಕ ಅಥವಾ ವೈಯಕ್ತಿಕ ಟೀಕೆಗಳು. ಪ್ರತಿ ಹಿಲರಿ-ಒಬಾಮಾ ಹಣಾಹಣಿಯಲ್ಲಿ ಗೆಲ್ಲುವುದು ರಿಪಬ್ಲಿಕನ್ ಅಭ್ಯರ್ಥಿ ಜಾನ್ ಮೆಕೆನ್ ಎಂಬ ಜೋಕು ಪ್ರಚಲಿತವಿದೆ.

ಚೀನಿಯರ ಆಕ್ರೋಶಕ್ಕೆ ಬೆದರಿದ ಸಾರ್ಕೋಜಿ

ಒಲಿಂಪಿಕ್ಸ್ ಕ್ರೀಡೆ ಮತ್ತು ಒಲಿಂಪಿಕ್ಸ್ ಜ್ಯೋತಿಯ ಜಾಥಾ ತಡೆಯುವ 'ಸ್ವತಂತ್ರ ಟಿಬೆಟ್' ಹಿಂಸಾತ್ಮಕ ಚಳುವಳಿಯ ಹಿನ್ನೆಲೆಯಲ್ಲಿ ಕೆಲವು ಪಾಶ್ಚಿಮಾತ್ಯ ದೇಶಗಳ ನಾಯಕರು, ಮಾಧ್ಯಮಗಳ ವರ್ತನೆ ಅವರಿಗೆ ಬ್ಯೂಮರಾಂಗ್ ಆಗಿದೆ. 'ಮಾನವ ಹಕ್ಕುಗಳ ದಮನ' ಮಾಡುವ ಚೀನಾ ಸರ್ಕಾರದ ವಿರುಧ್ಧ ಚೀನಾದ ಜನತೆ ಮಧ್ಯೆ ಪ್ರಚಾರ-ಪ್ರಚೋದನೆ ಮಾಡುವ ಅವರ ಉದ್ದೇಶ ತಲೆಕೆಳಗಾಗಿದೆ. ಅವರ ವರ್ತನೆ ಚೀನಾದ ಜನತೆಯಲ್ಲಿ ದೇಶಪ್ರೇಮ, ಸ್ವಾಭಿಮಾನ ಬಡಿದೆಬ್ಬಿಸಿದ್ದು ಅವರ ಆಕ್ರೋಶ ಅವರನ್ನು ಬೆದರಿಸಿದೆ. ಅದರಲ್ಲೂ ಪ್ರಮುಖವಾಗಿ ಸಿ.ಎನ್.ಎನ್. ಸುದ್ದಿ ವಿಶ್ಲೇಷಕನೊಬ್ಬ ಮಾಡಿದ ಟೀಕೆ ಚೀನಿಯರನ್ನು ವಿಪರೀತವಾಗಿ ಕೆರಳಿಸಿದೆ. ಅಮೆರಿಕ್ಕೆ ಆಮದಾಗುವ ಚೀನಿ ಸರಕುಗಳು 'ಕಳಪೆ' ಮತ್ತು 'ಸೀಸದ ಪೈಂಟ್ ತುಂಬಿದ ನಾಯಿ ಆಹಾರ' ಎಂದೂ, 50 ವರ್ಷಗಳಿಂದಲೂ ಚೀನೀಯರು ಅದೇ 'ಗೂಂಡಾ ಮತ್ತು ಧಗಾಕೋರರು' ಎಂದೂ ಆತ ಹೇಳಿದ್ದ.

ಅದೇ ರೀತಿ 'ಸ್ವತಂತ್ರ ಟಿಬೆಟ್' ಹಿಂಸಾತ್ಮಕ ಚಳುವಳಿಯ ಅತಿರೇಕಗಳನ್ನು 'ಮಾನವ ಹಕ್ಕುಗಳ ಹೋರಾಟ' ಎಂದು ಮಾಧ್ಯಮಗಳು-ಕಂಪನಿಗಳು ಕುಮ್ಮಕ್ಕು ಕೊಟ್ಟಿದ್ದು, ಯಾವುದೇ ವಿಭಾಗಗಳಿಂದ ಖಂಡನೆ ಯಾಗದ್ದು, ಸರ್ಕಾರಗಳ ಅಪ್ರತ್ಯಕ್ಷ ಬೆಂಬಲ - ಚೀನಿಯರನ್ನು ರೊಚ್ಚಿಗೆಬ್ಬಿಸಿದೆ. ಮೊದಲ ಬಾರಿಗೆ ಹಲವಾರು ಕಡೆ ಸಾವಿರಾರು ಚೀನಿಯರು ಪಾಶ್ಚಿಮಾತ್ಯ ಸರ್ಕಾರಗಳ-ಕಂಪನಿಗಳ ವಿರುದ್ಧ ಪ್ರದರ್ಶನ ನಡೆಸಿದರು. ಫ್ರೆಂಚ್ ಸೂಪರ್ ಮಾರ್ಕೆಟ್ ಕಂಪನಿ ಕೆರಾಫೋರ್ ಸ್ಟೋರ್ ಗಳ ಮುಂದೆ ಪ್ರದರ್ಶನ ಮತ್ತು ಅದರ ಬಹಿಷ್ಕಾರಕ್ಕೆ ಒತ್ತಾಯ ಕೇಳಿ ಬಂತು. ಚೀನಾದಲ್ಲಿ ಸಿ.ಎನ್.ಎನ್. ಮೇಲೆ ನಿಷೇಧ ಹೇರಬೇಕೆಂದು ಲಕ್ಷಾಂತರ ಚೀನೀಯರು ಇಂಟರನೆಟ್ ಮೂಲಕ ಸಹಿ ಸಂಗ್ರಹ ಚಳುವಳಿ ನಡೆಸಿದರು. ಸರ್ಕಾರ ಈ ಅವಮಾನ ಸಹಿಸಬಾರದು. ಕಟು ನಿರ್ಧಾರ ತೆಗೆದುಕೊಳ್ಳಬೇಕು ಎಂದು ಚೀನೀ ಪತ್ರಿಕೆಗಳು, ಸುದ್ದಿ ವೆಬ್ ಸೈಟುಗಳಲ್ಲಿ ಲಕ್ಷಾಂತರ ಚೀನೀಯರು ಒತ್ತಾಯಿಸಿದರು.

ಚೀನೀಯರ ಆಕ್ರೋಶ ಮತ್ತು ಸ್ವಾಭಿಮಾನ ಪಾಶ್ಚಿಮಾತ್ಯ ಸರ್ಕಾರ-ಕಂಪನಿಗಳನ್ನು ಮಾತ್ರವಲ್ಲ, ಚೀನೀ ಸರ್ಕಾರಕ್ಕೂ ಆಶ್ಚರ್ಯ ತಂದಿದೆ. ಜನತೆ ತಾಳ್ಮೆ ಮತ್ತು ಸಂಯಮದಿಂದ ವರ್ತಿಸಬೇಕೆಂದು ಮನವಿ ಮಾಡಿಕೊಳ್ಳಬೇಕಾಯಿತು. ಚೀನೀಯರ ಪ್ರತಿಕ್ರಿಯೆಯಿಂದ ಗಾಬರಿಯಾದ ಫ್ರೆಂಚ್ ಸರ್ಕಾರ ಉನ್ನತ ಸಚಿವರು ಒಬ್ಬರನ್ನು ತಕ್ಷಣ ಬೀಜಿಂಗ್‌ಗೆ ರವಾನಿಸಿತು. ಆತ ಪ್ಯಾರಿಸಿನ ಒಲಿಂಪಿಕ್ಸ್ ಜ್ಯೋತಿಯ ಜಾಥಾದ ಪ್ರತಿಭಟನೆಯಲ್ಲಿ ಗಾಯಗೊಂಡ ಚೀನೀ ಒಲಿಂಪಿಕ್ಸ್ ಸ್ಪರ್ಧಿಯ ಮನೆಗೆ ತೆರಳಿ ಅಧ್ಯಕ್ಷ ಸಾರ್ಕೋಜಿಯವರ ಅಧಿಕೃತ ಕ್ಷಮಾಪಣ ಪತ್ರ ಓದಿದರು. ಅದು ಚಾನೆಲ್ ನ ಅಭಿಪ್ರಾಯ ಅಲ್ಲ. ಸುದ್ದಿ ವಿಶ್ಲೇಷಕನ ವೈಯಕ್ತಿಕ ಅಭಿಪ್ರಾಯ. ಯಾರಿಗಾದರೂ ನೋವಾಗಿದ್ದರೆ ಸ್ಸಾರಿ ಎಂದು ಸಿ.ಎನ್.ಎನ್. ಪೂರ್ತಿ ಕ್ಷಮಾಪಣೆಯಿಂದ ಜಾರಿಕೊಳ್ಳಲು ಯತ್ನಿಸಿದೆ.

ಅಮೆರಿಕಾ ಜೈಲು ಶಿಕ್ಷೆಯಲ್ಲಿ ನಂಬರ್ ವನ್!

ಅಮೆರಿಕ ಬಹಳ ವಿಷಯಗಳಲ್ಲಿ ನಂಬರ್ ವನ್. ಹಲವು ಒಳ್ಳೆಯದು. ಕೆಟ್ಟ ವಿಷಯಗಳಲ್ಲೂ. ಅತ್ಯಂತ ಶ್ರೀಮಂತ ದೇಶ ಮತ್ತು ಮಾನವ ಹಕ್ಕುಗಳ ಬಗ್ಗೆ ಎಲ್ಲರಿಗೂ ಬುದ್ಧಿ ಹೇಳುವ ಅದು. ಜೈಲು ಶಿಕ್ಷೆಯಲ್ಲಿ ಎಲ್ಲರಿಗೂ ಮುಂದಿದೆ. ಜಗತ್ತಿನ ಶೇ. 5 ರಷ್ಟು ಜನಸಂಖ್ಯೆ ಹೊಂದಿದೆ. ಆದರೆ ಜಗತ್ತಿನ ಜೈಲುವಾಸಿಗಳ ಕಾಲು ಭಾಗ ಜನ ಅಮೆರಿಕದಲ್ಲಿ ಇದ್ದಾರೆ. ಅತ್ಯಧಿಕ ಜೈಲುವಾಸಿಗಳು (23 ಲಕ್ಷ) ಇರುವ ದೇಶ ಅದು. ಅದರ ನಾಲ್ಕು ಪಟ್ಟು ಜನಸಂಖ್ಯೆ ಇರುವ ಚೀನಾದ ಜೈಲುವಾಸಿಗಳ ಸಂಖ್ಯೆ 16 ಲಕ್ಷ. ಜೈಲುವಾಸಿಗಳ ಸಾಂದ್ರತೆ (ಒಂದು ಲಕ್ಷ ಜನಸಂಖ್ಯೆಗೆ ಜೈಲುವಾಸಿಗಳ ಸಂಖ್ಯೆ 751) ಯಲ್ಲೂ ಅದು ನಂಬರ್ ವನ್. ಇದಕ್ಕೆ ಹೋಲಿಸಿದರೆ ಇಂಗ್ಲೆಂಡ್ (151), ಜರ್ಮನಿ (88), ಜಪಾನ್ (63) ಜೈಲುವಾಸಿಗಳ ಸಾಂದ್ರತೆ ಹೊಂದಿವೆ. ಜಗತ್ತಿನ ಎಲ್ಲಾ ದೇಶಗಳ ಸರಾಸರಿ ಸಾಂದ್ರತೆ 125. ಅಮೆರಿಕದ್ದು ಅದರ ಐದು ಪಟ್ಟು. ರಶ್ಯ ಮಾತ್ರ ಅದರ ಹತ್ತಿರ ಬರುತ್ತದೆ (627). ಇದು ಯಾವಾಗಲೂ ಹೀಗೆ ಇರಲಿಲ್ಲ. 1975 ರಿಂದ ಈಚೆಗೆ ಅಮೆರಿಕ ಇದನ್ನು ಸಾಧಿಸಿರುವುದು. 1925 ರಿಂದ 1975 ರ ವರೆಗೆ ಅದರ ಸಾಂದ್ರತೆ 110 ಇತ್ತು. ಗನ್ ಮುಕ್ತವಾಗಿ ಸುಲಭವಾಗಿ ಸಿಗುವುದು, 1975 ರಿಂದ ಈಚೆಗೆ ಅಪರಾಧ ಮತ್ತು ಮಾದಕ ದ್ರವ್ಯಗಳ ವಿರುದ್ಧದ ಹೋರಾಟದ ಹೆಸರಲ್ಲಿ ಕಟುವಾದ ಕಾನೂನುಗಳು, ತೀವ್ರ ಅಸಮಾನತೆ ಮತ್ತು ಸಾಮಾಜಿಕ ಭದ್ರತಾ ಕ್ರಮಗಳ ಅಭಾವ - ಇವು ಅಮೆರಿಕದ ನಂಬರ್ ವನ್ ಸ್ಥಾನಕ್ಕೆ ಕಾರಣವಾಗಿವೆ.



ಟೀ ಶರ್ಟ್‌ಗಳ ಮೇಲೆ ಶಾಯರಿ

ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವದ ಮತ್ತು ಪ್ರತಿಭಟನೆಯ ಗಾಳಿ ಜೋರಾಗಿ ಬೀಸುತ್ತಿದೆ. ಮುಶರಫ್ ವಿರುದ್ಧ ವಕೀಲರ ದಿಟ್ಟ ಹೋರಾಟದಿಂದ ಆರಂಭವಾಗಿ ಇನ್ನೂ ಮುಂದುವರೆದಿದೆ. ಇದು ಮಾಜಿ, ಹಾಲಿ ಮತ್ತು ಭಾವಿ ಸರ್ವಾಧಿಕಾರಿಗಳಿಗೆ ಎಚ್ಚರಿಕೆ ಕೊಡುತ್ತಿದೆ. ಇದರ ಎಲ್ಲೆಲ್ಲೂ ಕೇಳ ಬರುವ ಘೋಷಣೆಗಳಲ್ಲಿ,' ಟೀ-ಶರ್ಟ್‌ಗಳ ಮೇಲೆ ಕಾಣುತ್ತಿರುವ ಕ್ರಾಂತಿಕಾರಿ ಕವಿ ಫೈಜ್ ಅಹ್ಮದ್ ಫೈಜ್ ಅವರ ಶಾಯರಿ. 'ಸಬ್ ತಾಜ್ ಉಛಾಲೆ ಜಾಯೆಂಗೆ, ಸಬ್ ತಖ್ತ್ ಗಿರಾಯೆ ಜಾಯೆಂಗೆ, ಹಮ್ ದೇಖೆಂಗೆ' (ಎಲ್ಲಾ ಕಿರೀಟಗಳು, ಸಿಂಹಾಸನಗಳು ಉರುಳುವುದನ್ನು ನಾವು ನೋಡುತ್ತೇವೆ) - ಇಂತಹ ಒಂದು ಜನಪ್ರಿಯ ಶೇರ್ (ದ್ವಿಪದಿ). ಈ ಶೇರ್ ಜತೆ ಒಬ್ಬ ಸಿಂಹಾಸನ ಒದೆಯುವ ಮತ್ತು ಕೆಂಬಾವುಟ ಎತ್ತಿ ಹಿಡಿಯುವ ಚಿತ್ರ ಜನಪ್ರಿಯ ಟೀ-ಶರ್ಟ್ ಮೇಲೆ ಇದೆ.

ಮಾಧ್ಯಮ ಮತ್ತು ಜಾಗತೀಕರಣ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಭಾರತದಲ್ಲಿ ಸಾಕ್ಷರತೆಗೆ ವಿಶ್ವಬ್ಯಾಂಕ್ ದೊಡ್ಡ ಮಟ್ಟದಲ್ಲಿ ಧನಸಹಾಯ ಮಾಡುತ್ತಿದೆ. ವಿಶ್ವಬ್ಯಾಂಕ್ ಜಾಗತೀಕರಣವನ್ನು ಪ್ರಚಾರ ಮಾಡುವ ಒಂದು ಸಂಸ್ಥೆ. ಸಾಕ್ಷರತೆ ಹೆಚ್ಚಿದಷ್ಟೂ ಪತ್ರಿಕೆಗಳು ಹೆಚ್ಚು ಮಾರಾಟವಾಗುತ್ತದೆ. ಮೀಡಿಯಾ ಮಾಲಿಕರ ಆದಾಯ ಆಕಸ್ಮಿಕವೆಂಬಂತೆ ಏರುತ್ತದೆ. ಟಿ.ವಿ., ಕಂಪ್ಯೂಟರ್, ಮೊಬೈಲ್ ಇತ್ಯಾದಿಗಳ ಆಕರ್ಷಣೆ ಹೆಚ್ಚುತ್ತದೆ. ಆಕರ್ಷಕ ಜಾಹೀರಾತುಗಳು ನಮ್ಮ ಮಾನಸಿಕತೆಯನ್ನೇ ಬದಲಾಯಿಸಿಬಿಡುತ್ತವೆ. ಅದೇ ಬ್ರ್ಯಾಂಡಿನ ಟೂತ್‌ಪೇಸ್ಟ್, ಸಾಬೂನು ಇತ್ಯಾದಿಗಳ ಮಾರಾಟ ವರ್ಧಿಸುತ್ತದೆ. ಕ್ರಿಕೆಟ್‌ಗಳಿಗಾಗಿ ಕೋಟ್ಯಾಂತರ ರೂಪಾಯಿಗಳ ಜಾಹೀರಾತು ನೀಡಲಾಗುತ್ತದೆ. ಏಕೆಂದರೆ ಪರೋಕ್ಷವಾಗಿ ಅಷ್ಟೂ ಸರಕುಗಳು ಬಿಕರಿಯಾಗುತ್ತದೆ. ಉದ್ಯಮಪತಿಗಳಂತೂ ಕುಬೇರರಾಗುತ್ತಾರೆ. ಮೀಡಿಯಾ ಮಾಲಿಕರೂ ಕುಬೇರರಾಗುತ್ತಾರೆ. ಆದರೆ ಇವರ ಮಾಯಾಜಾಲಕ್ಕೆ ಸಿಲುಕಿದ ಜನ ಮಾತ್ರ ದಿನದಿಂದ ದಿನಕ್ಕೆ ಬಡವರಾಗುತ್ತಾ ಹೋಗುತ್ತಾರೆ.

ಈಗ ಪತ್ರಿಕೆಗಳಿಗಿಂತಲೂ ಹಿರಿಯ ಸ್ಥಾನವನ್ನು ಉಪಗ್ರಹಗಳು ಪಡೆದಿವೆ. 'ಸಂಚಾರ ಮಾಧ್ಯಮ'ವಾಗಿ 'ಉಪಗ್ರಹ'ಗಳ ಕಲ್ಪನೆ ಹೊಳೆದುದೇ ಅಮೆರಿಕಾದ ಬಂಡವಾಳಗಾರರಿಗೆ. ಅದರಿಂದ ಇಂದು ಇಲೆಕ್ಟ್ರಾನಿಕ್ ನಿಗಮ, ಸೈನ್ಯ ವ್ಯವಸ್ಥೆ, ಜಾಹೀರಾತು, ವ್ಯಾಪಾರ ನಿಗಮಗಳಿಗೆ ಉತ್ತರೋತ್ತರವಾಗಿ ಲಾಭವಾಗುತ್ತಾ ಹೋಗಿದೆ. ಎಂಡರಸನ್ ಅಂದು ಹೇಳಿದ್ದ: 'ಮುದ್ರಣದ ಸಂಶೋಧನೆಯೆಂಬುದು ರಾಷ್ಟ್ರವಾದಕ್ಕೆ ಜನ್ಮ ಕೊಟ್ಟಿತು'

ಎರಡನೆಯ ವಿಶ್ವಯುದ್ಧದ ಅನಂತರ ಕೈಗಾರಿಕಾ ವಿಶ್ವದಲ್ಲಿ ಆಫ್‌ಸೆಟ್ ಮುದ್ರಣ, ಕಂಪ್ಯೂಟರ್ ಟೈಪಿಂಗ್ ಪ್ರಚಲಿತವಾಯಿತು.

1980ರ ದಶಕದಲ್ಲಿ ಭಾರತೀಯ ಪತ್ರಿಕಾ ಮುದ್ರಣದಲ್ಲಿ ವಿಶೇಷ ಬದಲಾವಣೆಗಳಾದವು. ಇದು ಆರಂಭಗೊಂಡದ್ದು ಮರಾಠಿ ದೈನಿಕ 'ಸಕಾಳ್'ದಿಂದ. ಅದು 1932ರಲ್ಲಿ ರಾಷ್ಟ್ರೀಯ ಭಾವನೆಗಳನ್ನು ಹರಡಲು ಸ್ಥಾಪಿಸಲಾಗಿತ್ತು. 1976ರಲ್ಲಿ ಅದರ ಮಾರಾಟ 95,000 ಇತ್ತು. 1996ರಲ್ಲಿ ಅದು 3 ಲಕ್ಷ 10 ಸಾವಿರಕ್ಕೆ ಏರಿತ್ತು. ಎಲ್ಲಾ ರಾಷ್ಟ್ರವಾದಿ ಪತ್ರಿಕೆಗಳೂ ಬಂಡವಾಳವಾದದ ಪ್ರಬಲ ಸಮರ್ಥಕರಾದ ಬಂಡವಾಳಗಾರರ ಕೈಗಳಲ್ಲಿವೆ.

ಎಲ್ಲಕ್ಕಿಂತ ದೊಡ್ಡ ಹಿತ

ಬಂಡವಾಳಗಾರರ ಹಿತ ಎಲ್ಲಕ್ಕಿಂತ ದೊಡ್ಡ ಹಿತ. ಅದು ಸರ್ವೋಪರಿಯಾಗಿರುತ್ತದೆ. ಪ್ರಥಮ ವಿಶ್ವಯುದ್ಧದ ಕೊನೆಯ ಘಟ್ಟದಲ್ಲಿ ಸರಕಾರೀ ವಿಭಾಗವು ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸುತ್ತಿತ್ತು. 1920ರಲ್ಲಿ ಪತ್ರಿಕೆಗಳ ಮೇಲೆ ನಿಯಂತ್ರಣ ಸಾಧಿಸಲು ಸರಕಾರವು ಜಾಹೀರಾತುಗಳನ್ನು ಉಪಯೋಗಿಸಿತ್ತು. ಸರಕಾರದ ವಿಮರ್ಶೆ ಮಾಡದಿದ್ದ ಪತ್ರಿಕೆಗಳಿಗೆ ಹೆಚ್ಚು ಹೆಚ್ಚು ಅನುದಾನ ಸಿಗುತ್ತಿತ್ತು. ಸರಕಾರದ ವಿರುದ್ಧವಿದ್ದ ಪತ್ರಿಕೆಗಳನ್ನು black list ಗೆ ಸೇರಿಸಲಾಗುತ್ತಿತ್ತು. ಬ್ರಿಟಿಷ್ ಸರಕಾರದೊಂದಿಗೆ ಅತೀ ಹಳೆಯ ಪತ್ರಿಕೆ 'ಅಮೃತ ಬಜಾರ್ ಪತ್ರಿಕಾ' ವಿನಂತಿಸಿಕೊಂಡಿತ್ತು - "ನಾವು ನಿಮ್ಮ ನಿಜವಾದ ಮಿತ್ರರು. ನಾವು ಜನ ಭಾವನೆಯನ್ನು ನಿಮ್ಮೆಡೆಗೆ ತಲುಪಿಸುತ್ತೇವೆ. ಆದ್ದರಿಂದ ನಮ್ಮನ್ನು ನೀವು ಬಹಿಷ್ಕರಿಸಬೇಡಿ". ಸರ್ಕಾರದ black list ನಿಂದ ಇಂತಹ ಪತ್ರಿಕೆಗಳ ಹೆಸರನ್ನು ತೆಗೆದು ಹಾಕಲಾಗುತ್ತಿತ್ತು.

'ಹಿಂದೂ' ಪತ್ರಿಕೆ ಮಹಾತ್ಮಗಾಂಧಿಗೆ ಸ್ಪಷ್ಟೀಕರಣ ಕೊಟ್ಟಿತ್ತು: "ನಾವು ಪತ್ರಿಕೆ ನಡೆಸಲು ಸಾಕಷ್ಟು ಬಂಡವಾಳ ಹಾಕಿದ್ದೇವೆ. ಪ್ರಭುತ್ವವನ್ನು ವಿರೋಧಿಸಿ ಜಪ್ತಿ, ನಷ್ಟವನ್ನು ನಾವು ಭರಿಸಲಾರೆವು"

1942ರ ಕ್ವಿಟ್ ಇಂಡಿಯಾ ಚಳುವಳಿಯ ಕಾಲದಲ್ಲಿ ಭಾರತೀಯ ಪತ್ರಿಕಾ ಸಂಪಾದಕರ ಸಮ್ಮೇಳನ ನಡೆದಿತ್ತು. ಅಲ್ಲಿ ಹೀಗೆ ನಿರ್ಣಯಿಸಲಾಯಿತು: 'ವೃತ್ತಪತ್ರಿಕೆಗಳು ತಮ್ಮನ್ನು ತಾವು ನಿಯಂತ್ರಿಸಿಕೊಳ್ಳಬೇಕು. ಸಂಯಮದಿಂದಿರಬೇಕು' ಸರ್ಕಾರ ಮತ್ತು ಮಾಧ್ಯಮದ ನಡುವೆ ಘರ್ಷಣೆ ನಡೆಯಕೂಡದು. ಅದರಲ್ಲೂ ಬಹುರಾಷ್ಟ್ರೀಯ ಕಂಪೆನಿಗಳು ಅವರ ದನಿಗಳು, ಯಜಮಾನರು, ಪ್ರಾಯೋಜಕರು, ಪ್ರಮುಖ ಜಾಹೀರಾತು ಕಂಪೆನಿಗಳು 1996ರಲ್ಲಿ ಜಾಹೀರಾತಿಗಾಗಿ 4200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದವು.

ಜಾಗತೀಕರಣದ ಈ ಕಾಲಘಟ್ಟದಲ್ಲಿ:

- ಮಣಿಪುರದಲ್ಲಿ ನಡೆಯುತ್ತಿರುವ ಸೇನಾ ಪ್ರಭುತ್ವದ ವಸ್ತುಸ್ಥಿತಿ ಭಾರತದ ಮೀಡಿಯಾಗಳಲ್ಲಿ ಪ್ರಕಟವಾಗುವುದಿಲ್ಲ.
- ಮುಂಬಾಯಿಯ ಸಾವಿರಾರು ಗುಡಿಸಲುಗಳನ್ನು ಬುಲ್‌ಡೋಜರ್ ಉಪಯೋಗಿಸಿ ನೆಲಸಮ ಮಾಡಿದ ವಾರ್ತೆ ಪ್ರಕಟವಾಗುವುದಿಲ್ಲ. ದಿಲ್ಲಿಯಲ್ಲಿ ಸಾವಿರಾರು ಗುಡಿಸಲುಗಳನ್ನು ನಾಶ ಮಾಡಲಾಯಿತು. ಮೀಡಿಯಾದಲ್ಲಿ ಅದರ ಪ್ರಸ್ತಾಪವಾಗಲಿ, ವಿರೋಧವಾಗಲಿ ಪ್ರಕಟವಾಗಲಿಲ್ಲ.
- ದಿಲ್ಲಿಯ ರಾಮಲೀಲಾ ಮೈದಾನದಲ್ಲಿ 'ಜಾಗತೀಕರಣ' ವಿರುದ್ಧ ಲಕ್ಷಾಂತರ ಜನ ಆದಿವಾಸಿಗಳು, ಕಾರ್ಮಿಕರು, ಮಹಿಳೆಯರು ಹೋರಾಟ ಮಾಡಿದರು. ಪೋಲಿಸರು ಬರ್ಬರವಾಗಿ ಲಾಠಿಚಾರ್ಜ್ ಮಾಡಿದರು. ಜನಸ್ತೋಮವನ್ನು ದಿಲ್ಲಿಯಿಂದಲೇ ಓಡಿಸಿದರು. ಆದರೆ ಮೀಡಿಯಾಕ್ಕೆ ಅದು ಸುದ್ದಿಯೇ ಅಲ್ಲ!. ಮೀಡಿಯಾದಲ್ಲಿ ಒಂದು ಅತ್ಯಂತ ಪ್ರಚಲಿತ ಶಬ್ದ - 'up market' ಅಂದರೆ ಉಣ್ಣಲು ಉಡಲು ಹಾಗೂ ಸಾಕಷ್ಟು ಸೌಲಭ್ಯವಿರುವ ವರ್ಗದ ಮಾರ್ಕೆಟ್. ಈ up marketನ ಮಾನಸಿಕತೆಯನ್ನು ಮೀಡಿಯಾಗಳು ರೂಪಿಸುತ್ತವೆ. ಈ up marketನ ವಕ್ತಾರರು ಜಿ.ಎಮ್. ಫೋರ್ಡ್, ಶೆಲ್, ಮಿತ್ಸುಯಿ, ಲಕ್ಸ್‌ಜಾನ್ ಮೊದಲಾದ ಬಹುರಾಷ್ಟ್ರೀಯ ಕಂಪೆನಿಗಳು. ಇವುಗಳ ಆದಾಯವು ಎಷ್ಟೋ ದೇಶಗಳ ಒಟ್ಟು ರಾಷ್ಟ್ರೀಯ ಆದಾಯಕ್ಕಿಂತ ಹೆಚ್ಚು.

ಕಂಪ್ಯೂಟರ್ ಸಾಫ್ಟ್‌ವೇರ್‌ನ ಬಿಲ್‌ಗೇಟ್ಸ್ ಸಂಪತ್ತು 150 ದೇಶಗಳ ಒಟ್ಟು ಆದಾಯಕ್ಕೆ ಸಮ.

ಅಮೆರಿಕಾದ 358 ಬಿಲಿಯಾಧಿಪತಿಗಳ ಬಳಿ ಇರುವ ಸಂಪತ್ತು ಅರ್ಧ ಜಗತ್ತಿನ ಸಂಪತ್ತಿಗಿಂತ ಹೆಚ್ಚು.

ಅಂತರಾಷ್ಟ್ರೀಯ ವ್ಯಾಪಾರದ ಮೂರನೇ ಎರಡು ಭಾಗ ನಿಜವಾಗಿಯೂ ಅಂತರಾಷ್ಟ್ರೀಯ ವ್ಯಾಪಾರವಲ್ಲ - ಅದು ಬರೇ ಹೆಸರಿಗೆ ಮಾತ್ರ. ಇದು ಬಹುರಾಷ್ಟ್ರೀಯ ಕಂಪನಿಗಳ ಪರಸ್ಪರ ವ್ಯಾಪಾರದ ಒಂದು ಗೌರವಾನ್ವಿತ ಹೆಸರು ಅಷ್ಟೇ.

ಜರ್ಮನಿಯ ಮಾನಹಾಯಿಮ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರಜ್ಞ - ಮೆನ್‌ಫೆಡ್ ಹೇಳುವ ಪ್ರಕಾರ ಮುಂದಿನ ದಿನಗಳಲ್ಲಿ ಜಗತ್ತಿನ ಆರ್ಥಿಕ ಮತ್ತು ರಾಜಕೀಯ ಚುಕ್ಕಾಣಿಯನ್ನು ಬಹುರಾಷ್ಟ್ರೀಯ ಕಂಪೆನಿಗಳೇ ನಡೆಸುತ್ತವೆ. ನಮ್ಮ ರಾಜಕಾರಣಿಗಳೂ ಈ ಬಹುರಾಷ್ಟ್ರೀಯ ದೈತ್ಯರ ಚಾಕರಿಯಲ್ಲಿಯೇ ಧನ್ಯತಾಭಾವವನ್ನು ಕಾಣುತ್ತಾರೆ.

ಚಿಲಿಯಲ್ಲಿ

ಚಿಲಿಯಲ್ಲಿ ಪ್ರಜಾಪ್ರಭುತ್ವದ ನಾಶಕ್ಕೆ ಹೋರಾಟ ಮಾಡಿದ್ದೇ ಮುಖ್ಯವಾಗಿ ಮಾಧ್ಯಮಗಳು. ಅಮೆರಿಕಾದ CIA ಅಲಿಂಡೆಯ ವಿರೋಧಿ ದಿನಪತ್ರಿಕೆ 'ಅಲ್ ಮರ್‌ಕ್ಯೂರಿಯೊ'ಕ್ಕೆ ಗುಪ್ತವಾಗಿ 11.5 ಮಿಲಿಯ ಡಾಲರ್ ಕೊಟ್ಟಿತ್ತು. ಎಲ್ ಮರ್‌ಕ್ಯೂರಿಯೊ - ಅಗಸ್ಟಿನ್ ಲಡ್‌ವರ್ಡ್ಸ್‌ನ ಪತ್ರಿಕೆ. ಆತ ಪೆಪ್ಸಿ ಕೋಲಾದ ಅಧ್ಯಕ್ಷ ಎಫ್. ಕೇಂಡಲ್‌ನ ಮಿತ್ರ. ಮಾಜಿ ರಾಷ್ಟ್ರಪತಿ ನಿಕ್ಸನ್‌ಗೆ ಹತ್ತಿರದವನು. ಅಮೆರಿಕಾದ CIAಯೊಟ್ಟಿಗೆ ಚಿಲಿಯ ಮಧ್ಯಮ ವರ್ಗವನ್ನು ಜೋಡಿಸುವ ಕೆಲಸವನ್ನು ಅಲ್‌ಮರ್ಕ್ಯುರಿಯೊ ಮಾಡಿತು. ಅಲಿಂಡೆ ಕೊಲೆಯಾದರು. ಪ್ರಜಾಪ್ರಭುತ್ವ ನಾಶವಾಯಿತು.

ಮೀಡಿಯಾದ ಒತ್ತಡಕ್ಕೆ ತಲೆಬಾಗಿ ಬದಲಾದ ರಾಜಕೀಯ ವ್ಯವಸ್ಥೆ ವಿದೇಶಿ ನಿವೇಶನಕ್ಕೆ FDI ಗೆ ಪೂರ್ಣ ಪ್ರಮಾಣದಲ್ಲಿ ಹೆಬ್ಬಾಗಿಲನ್ನು ತೆರೆಯಿತು.

ಬಾಡಿಗೆ ಭಂಟರು

ಇರಾಕಿನ ಮೇಲೆ ಆಕ್ರಮಣವಾಗುವಾಗ ಅಮೆರಿಕಾ ತನ್ನದೇ ಬಾಡಿಗೆ ಪತ್ರಕರ್ತರನ್ನು ಸೇನೆಯ ಜತೆಗೆ ಕಳುಹಿಸಿತ್ತು. ಅವರು ತಯಾರಿಸಿದ ವಾರ್ತೆಯೇ ಇಡೀ ಜಗತ್ತಿಗೆ ಸಮಾಚಾರದ ಮೂಲಕೇಂದ್ರ. ಆದರೆ ತನ್ನ ಪ್ರತ್ಯೇಕ ವರ್ಚಸ್ಸನ್ನು ಉಳಿಸಿಕೊಂಡ 'ಅಲ್‌ಜಜೀರಾ'ದ ಮೇಲೆ ಅಮೆರಿಕಾ ನಾನಾ ಬಗೆಯ ನಿರ್ಬಂಧಗಳನ್ನು ಹೇರುತ್ತಿದೆ.

ವಸ್ತುಸ್ಥಿತಿಯಲ್ಲಿ ಜಾಗತೀಕರಣಗೊಂಡ ಮಾಧ್ಯಮಗಳ ರಾಷ್ಟ್ರಗಳ ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳ ಹಿತವನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ಒತ್ತೆಯಿಡಲ್ಪಡುತ್ತವೆ. 80ರ ದಶಕಗಳ ತನಕ ಮಾಧ್ಯಮಕ್ಕೆ ಒಂದು ರಾಷ್ಟ್ರೀಯ ನೀತಿಯೆಂಬುದಿತ್ತು. ಈಗ ಅದು ಸಂಪೂರ್ಣವಾಗಿ ಅರ್ಥ ಕಳೆದುಕೊಂಡಿದೆ.

ಸಾಮ್ರಾಜ್ಯವಾದವು ಕೇವಲ ಆರ್ಥಿಕ ಮತ್ತು ರಾಜಕೀಯಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಅದು ಒಂದು ದೇಶದ ಅಂತಃಸತ್ವವನ್ನು ಸಂಪೂರ್ಣವಾಗಿ ನಾಶ ಮಾಡಿಬಿಡುತ್ತದೆ. ಸಂಸ್ಕೃತಿಯನ್ನು ಹಾಳುಗೆಡುತ್ತದೆ. ಇಲೆಕ್ಟ್ರಾನಿಕ್, ಪತ್ರಿಕಾ ಮಾಧ್ಯಮಗಳಿಂದಾದ ಸಾಂಸ್ಕೃತಿಕ ಹಾನಿ ಇಂದು ನಮ್ಮ ಕಣ್ಣೆದುರು ಪ್ರತ್ಯಕ್ಷವೇ ಇದೆ.

ಶಿಖಂಡಿ ಜರ್ನಲಿಸಂ

ಇಂದು ಮಾಧ್ಯಮ ಕೈಗಾರಿಕೆಯಲ್ಲಿ ಅಪಾಯಕಾರಿ ಪ್ರವೃತ್ತಿಗಳು ತೀವ್ರವಾಗಿ ಹೆಚ್ಚುತ್ತಿವೆ. ಈ ವರ್ಷದ ಆರಂಭದಲ್ಲಿ ದಿಲ್ಲಿಯಲ್ಲಿ ಎರಡು ದೊಡ್ಡ ಮಾಧ್ಯಮ ಸಂಸ್ಥಾನಗಳು ಸೇರಿ ಒಂದು ದೈನಿಕವನ್ನು ಆರಂಭಿಸಿವೆ. ಈ ಶಿಖಂಡಿ ಜರ್ನಲಿಸಮ್ ಮಾಧ್ಯಮ ಉದ್ಯಮದ ಮೇಲೆ ಪೂರ್ಣ ಹತೋಟಿ ಸಾಧಿಸುವ ಸೂಚನೆಗಳು ಕಾಣಿಸುತ್ತಿವೆ.

ಮಾಧ್ಯಮ ಒಂದು ಸಾಧಾರಣ ಕೈಗಾರಿಕೆಯಲ್ಲ. ಅದು ಒಂದು ದೇಶದ ಸಾರ್ವಭೌಮತೆಯನ್ನು ಉಳಿಸಲೂಬಹುದು, ನಾಶಗೊಳಿಸಲೂ ಬಹುದು. ಆದರೆ ಇಂದು ಮಾಧ್ಯಮದ ಉದ್ದೇಶ ವಸ್ತುಸ್ಥಿತಿ ವಿಶ್ಲೇಷಣೆ ನಡೆಸುವ, ಜನಸಮುದಾಯದ ಹಿತದಿಂದ ಹಸ್ತಕ್ಷೇಪ ನಡೆಸುವ, ಮಾರ್ಗದರ್ಶಕ ಜವಾಬ್ದಾರಿಯಿಂದ ಸಂಪೂರ್ಣವಾಗಿ ಹಿಂದೆ ಸರಿದಿದೆ. ಮನೋರಂಜನೆಯೆಂದರೆ ಕೇವಲ ಮಾಧ್ಯಮ ಮತ್ತು ಉಚ್ಚವರ್ಗದ ಕತೆಯನ್ನು ಬಡಿಸುವುದಷ್ಟೇ ಮಾಧ್ಯಮದ ಕಾಯಕವಾಗಿದೆ. ಕ್ರಿಕೆಟ್ ಆಟದ ವಿಚಾರದಲ್ಲಿ ಮೂರ್ಖತನದ ಪರಾಕಾಷ್ಠೆಯನ್ನು ಪ್ರದರ್ಶಿಸಿದರೆ, ಇನ್ನೊಂಡೆಗೆ ಕಾಮೋತ್ತೇಜಕ ಮಸಾಲೆಯನ್ನು ಉಣಬಡಿಸುತ್ತಾ ಜನರನ್ನು ಪಲಾಯನವಾದಿಯಾಗಿಸುತ್ತದೆ. ಓದುಗ ಅಥವಾ ದರ್ಶಕ ಓರ್ವ ವಿವೇಕಹೀನ ಗ್ರಾಹಕನಾಗಿ ಪರಿವರ್ತಿತನಾಗುತ್ತಿದ್ದಾನೆ.

ಇಂದು ರಾಷ್ಟ್ರೀಯ ಸ್ತರದಲ್ಲಿ ಮೂರು ಸಮಾಚಾರ ಚ್ಯಾನೆಲ್‌ಗಳು ವಿದೇಶಿ ಬಂಡವಾಳ ಮತ್ತು ಸರಕಾರದಿಂದ ನಡೆಯುತ್ತಿವೆ. ಡಿಟಿಎಚ್ ಸೇವೆಯಲ್ಲೂ ವಿದೇಶಿ ಹೂಡಿಕೆ ಆಗಿದೆ. ತಾಂತ್ರಿಕ ವಿಚಾರದಲ್ಲಿ ಮಾಧ್ಯಮಗಳು ಮೇಲ್ಮೆ ಸಾಧಿಸಿರಬಹುದು. ಆದರೆ ಕಾರ್ಯಕ್ರಮಗಳ ಗುಣಮಟ್ಟ ಮಾತ್ರ ತೀವ್ರವಾಗಿ ಕುಸಿದಿದೆ. ಜಾಗತೀಕರಣ ಮಾರುಕಟ್ಟೆಗೆ ಅನುಕೂಲಕರ ವಾತಾವರಣ ಸೃಷ್ಟಿಸುವಲ್ಲಿ ಇಂದು ಮೀಡಿಯಾ ಯಶಸ್ವಿಯಾಗಿದೆ.

ಯು.ಎನ್.ಐ. ನ ಕತೆ

ಸ್ವಾತಂತ್ರ್ಯಾನಂತರ ಸಮಾಚಾರ ಕೇಂದ್ರ 'ರಾಯ್‌ಟರ್'ನ ಸ್ಥಾನವನ್ನು ಪಿ.ಟಿ.ಐ. ಪಡೆಯಿತು. 1958ರಲ್ಲಿ 'ಯುನೈಟೆಡ್ ಪ್ರೆಸ್ ಆಫ್ ಇಂಡಿಯಾ' 'ಯು.ಪಿ.ಐ.ಇ' ಮುಚ್ಚುಗಡೆಯಾದ ಮೇಲೆ ಪಿ.ಟಿ.ಐ. ಏಕಮಾತ್ರ ಸಮಾಚಾರ ಏಜೆನ್ಸಿಯಾಗಿ ಉಳಿಯಿತು. ಅದರ ಏಕಸ್ವಾಮ್ಯದ ಅಪಾಯವನ್ನು ಮನಗಂಡ ಮೊದಲ ಪ್ರೆಸ್ ಆಯೋಗವು ಇನ್ನೊಂದು ಸಮಾಚಾರ ಏಜೆನ್ಸಿಯ ಸ್ಥಾಪನೆಗೆ ಶಿಫಾರಸ್ಸು ಮಾಡಿತು. ಜವಾಹರಲಾಲ್ ನೆಹ್ರೂರವರು ಈ ಬಗ್ಗೆ ಸಮಿತಿ ರಚನೆ ಮಾಡಿ 1961ರಲ್ಲಿ 'ಯು.ಎನ್.ಐ'ಯನ್ನು ಸ್ಥಾಪಿಸಿದರು. ಅದರ ಉದ್ದೇಶ: ರಾಷ್ಟ್ರೀಯ ಏಕತೆ, ಅಖಂಡತೆ ಮತ್ತು ಸುರಕ್ಷೆಗಾಗಿ ಶ್ರಮಿಸುವುದು ಮತ್ತು ಯಾವುದೇ ಕೋಮುವಾದಿ ಹಾಗೂ ಅಂತರಾಷ್ಟ್ರೀಯ ಒತ್ತಡಗಳಿಗೆ ಮಣಿಯದೇ ಇರುವ ಮುಕ್ತ, ಸ್ವತಂತ್ರ ಸಮಿತಿಯಾಗಿ ಕಾರ್ಯನಿರ್ವಹಿಸುವುದು. ಇದರ ಸ್ಥಾಪನೆ ಯಾವುದೇ ವ್ಯಾಪಾರೀ ಅಥವಾ ವ್ಯಾವಹಾರಿಕ ಉದ್ದೇಶಕ್ಕಾಗಿ ಆಗಿರಲಿಲ್ಲ. ವರ್ತಮಾನ ಪತ್ರಿಕೆಗಳು ತಮ್ಮ ಖರ್ಚಿನ ಶೇ 2ನ್ನು ಕೊಡುವ ಮೂಲಕ ಅದರ ಸೇವೆಯನ್ನು ಪಡೆದುಕೊಳ್ಳಬಹುದಾಗಿತ್ತು. ಇದರಿಂದ ನೂರಾರು ಸಣ್ಣ ಪತ್ರಿಕೆಗಳು ಸಹ ಉಪಯೋಗ ಪಡೆದವು. 1961ರಲ್ಲಿ ಸಣ್ಣ ಬಂಡವಾಳದಿಂದ ಸ್ಥಾಪನೆಯಾದ ಈ ಸಮಾಚಾರ ಏಜೆನ್ಸಿ 1998ರಲ್ಲಿ ಬೃಹದಾಕಾರವಾಗಿ ಬೆಳೆದಿತ್ತು. ಅದರ ಫಿಕ್ಸೆಡ್ ಡೆಪಾಸಿಟ್ 30 ಕೋಟಿಗೂ ಹೆಚ್ಚಿತ್ತು. 350 ಕ್ಕೂ ಹೆಚ್ಚು ಅಧಿಕಾರಿಗಳು ದೇಶ ವಿದೇಶಗಳಲ್ಲಿ ದುಡಿಯುತ್ತಿದ್ದರೆ ಸಾವಿರಕ್ಕೂ ಹೆಚ್ಚು ಕಾರ್ಮಿಕರು ಸಮಾಚಾರ ಏಜೆನ್ಸಿಯ ನಿರ್ವಹಣೆ ಮಾಡುತ್ತಿದ್ದರು.

ಆದರೆ ನೋಡನೋಡುತ್ತಿದ್ದಂತೆಯೇ 2005ರಲ್ಲಿ ಏಕಾಏಕಿ 60 ಶೇ. ಶೇರುಗಳನ್ನು ಖಾಸಾಗಿ ಗೋಯೆಲ್ ಕಂಪೆನಿಗೆ ಸರಕಾರ ಮಾರಿತು. ದಿಲ್ಲಿಯ ಮಧ್ಯದಲ್ಲಿರುವ ಆಕಾಶವಾಣಿ ಮತ್ತು ಕನಾಟ್‌ಪ್ಲೇಸ್‌ಗೆ ಅತೀ ಹತ್ತಿರದಲ್ಲಿರುವ ಜಮೀನನ್ನು ರಿಯಾಯತಿ ದರದಲ್ಲಿ ಯು.ಎನ್.ಐ.ಗೆ ನೀಡಲಾಗಿತ್ತು. ಇಂದು ಅದರ ಬೆಲೆ ಮಿಲಿಯಾಂತರ ರೂಪಾಯಿಗಳು. ದೇಶದ ವಿವಿಧ ಪ್ರದೇಶಗಳಲ್ಲಿ ಇರುವ ಯು.ಎನ್.ಐ. ಕಾರ್ಯಾಲಯಗಳ ಒಟ್ಟು ಸಂಪತ್ತು 1000 ಕೋಟಿಗಿಂತ ಹೆಚ್ಚಿದೆ. ಇದನ್ನೆಲ್ಲ ಯಾವುದೇ ಜನಕಲ್ಯಾಣ ಅಥವಾ ರಾಷ್ಟ್ರಕಲ್ಯಾಣದ ಯಾವುದೇ ರೆಕಾರ್ಡ್ ಇಲ್ಲದ ಒಂದು ಲಾಭಕೋರ ಖಾಸಾಗಿ ಕಂಪೆನಿಗೆ ಮಾರಿ ತಿನ್ನಿಸುವುದರಲ್ಲಿ ಯಾವ ಅರ್ಥವಿದೆ? ಶಾಸಕ ದಲ್ಲಾಳಿಗೆ ಮಾತ್ರ ನಿಜಕ್ಕೂ 'ಅರ್ಥ'ವಿದೆ!.

ಇದನ್ನು ಖಾಸಗಿ ಕಂಪೆನಿಗೆ ಮಾರುವ ಹುನ್ನಾರದಲ್ಲಿ ಯು.ಎನ್.ಐ.ಯ ವ್ಯವಸ್ಥಾಪಕ ಸಮಿತಿಯನ್ನು ಬದಲಾಯಿಸಲಾಯಿತು. ಪತ್ರಕರ್ತರು, ಕೆಲಸಗಾರರು ಮೂಲೆಗೆ ತಳ್ಳಲ್ಪಟ್ಟರು. ಕಟ್ಟಡಗಳ ರಿಪೇರಿ ಹಾಗೂ ಸೌಂದರ್ಯವೃದ್ಧಿಗಾಗಿ 'ಬೆಂಗಳೂರು ಮತ್ತು ಭೋಪಾಲ್‌ನ ಕಟ್ಟಡಗಳಿಗೆ' ಸರ್ಕಾರ ನೀರಿನಂತೆ ಹಣ ಖರ್ಚು ಮಾಡಿತು. ಹೊಸ ಆಡಳಿತ ಮಂಡಳಿಯ ನಿರ್ದೇಶಕರು ಅಯೋಗ್ಯರಿದ್ದರು. ಹಲವಾರು ವಾರ್ತಾಪತ್ರಿಕೆಗಳವರು ಇದರ ಅವ್ಯವಸ್ಥೆಯಿಂದಾಗಿ ಸೇವೆ ಪಡೆಯುವುದನ್ನು ನಿಲ್ಲಿಸಿದರು. ಕೆಲವೇ ಸಮಯದಲ್ಲಿ 30 ಕೋಟಿ ಫಿಕ್ಸೆಡ್ ಡಿಪಾಸಿಟ್ ಇಡುವ ಸಂಸ್ಥೆಗಳನ್ನು ದಿವಾಳಿ ತೆಗೆದು ವಾರ್ಷಿಕ 5 ಕೋಟಿ ಕೊರತೆ ತೋರಿಸಲಾಯಿತು. ಇದಿಷ್ಟನ್ನೂ ತ್ವರಿತ ಗತಿಯಲ್ಲಿ ಮಾಡಿ ಮುಗಿಸಿ ನಷ್ಟದಲ್ಲಿರುವ ಯು.ಎನ್.ಐ. ಯನ್ನು ಉಳಿಸುವ ಘೋಷಣೆ ಮಾಡಿ ಖಾಸಗಿ ಕಂಪೆನಿಗೆ ಮಾರಲಾಯಿತು! ಇದು ಜಾಗತೀಕರಣದ ದೇಶ ಹಿತ ಸಾಧನೆ! ಉದಾರೀಕರಣ ಮತ್ತು ಖಾಸಗೀಕರಣದ ನಿಜಸ್ವರೂಪ. ನೆಹರೂಜೀ ಘೋಷಿಸಿದ ಪಾರದರ್ಶಕತೆ, ದೇಶದ ಸ್ವಾಧೀನತೆ ಮತ್ತು ಸುರಕ್ಷೆ ರಾಷ್ಟ್ರೀಯ ಹಿತಗಳೆಲ್ಲಾ ನೋಡುನೋಡುತ್ತಿದ್ದಂತೆಯೇ ಮಣ್ಣು ಪಾಲಾಯಿತು. ಈ ಮಹತ್‌ಕಾರ್ಯ ನಡೆದುದು 2006ರಲ್ಲಿ.



ಇದೋ ಬಂದ ಬಣ್ಣದ 'ಹರಿಶ್ಚಂದ್ರ'

1963 ರಿಂದ 2008 ಕ್ಕೆ 45 ವರ್ಷ ತುಂಬಿದ ಬಳಿಕವೂ ಹಳೆಯ ಚಿತ್ರವೊಂದು ಬಣ್ಣ ಬೆಳೆದುಕೊಂಡು ತೆರೆಯಮೇಲೆ ಬಂದಿದೆ. ಆದರೂ ಬಹಳ ದಿನಗಳಿಂದ ಹೆಜ್ಜೆ ಹಾಕದೆ, ಕುಣಿಯದ ಜಡ್ಡು ಹಿಡಿದ ಮೈಯಿಗೆ ಎರಡು ಸ್ಟೆಪ್ ಹಾಕಲು ಅವಕಾಶ ಕೊಟ್ಟು 'Balcony' ಎಂಬ 'Restricted Audience' ವರ್ಗದ ಮಧ್ಯದಲ್ಲಿ ಕುಳಿತಿದ್ದರೂ ಲೆಕ್ಕಿಸದೆ ಮನಬಂದಂತೆ ಕುಣಿದು ಕುಪ್ಪಳಿಸಿದ್ದು, 'ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ' ಎಂಬ ಹಾಡಿಗೆ! ಮಂಡ್ಯದ ಗುರುಶ್ರೀ ಥಿಯೇಟರ್‌ನಲ್ಲಿ, ಸತ್ಯ ಹರಿಶ್ಚಂದ್ರ ಚಿತ್ರವನ್ನು ವೀಕ್ಷಿಸುತ್ತಾ.

ಒಂದು ಜನಪ್ರಿಯ ಚಿತ್ರವಾದ 'ಸತ್ಯ ಹರಿಶ್ಚಂದ್ರ'ವನ್ನು ಸುಮಾರು ಎರಡೂವರೆ ಕೋಟಿ ರೂಪಾಯಿಯನ್ನು ವ್ಯಯಿಸಿ ಬಣ್ಣದಲ್ಲಿ ಕೆ.ಸಿ.ಎನ್.ಗೌಡರು ತೆರೆಯಮೇಲೆ ತಂದಿದ್ದಾರೆ. ಆದರೂ ಇದೊಂದು 'Historical Repitition of Imitation' ಅಂದರೆ, ಪಾಶ್ಚಿಮಾತ್ಯದಿಂದಲೇ ಎಲ್ಲವನ್ನೂ ಕಲಿಯುವ ನಾವು ಇಲ್ಲೂ ಅದೆ ತಂತ್ರವನ್ನು ಬಳಸಿದ್ದೇವೆ. ಸೆಲ್ಬೆಲ್ ಡಿ' ಮಿಲ್ಲಿಯ ಚಿತ್ರ 'ಟೆನ್ ಕಮಾಂಡ್‌ಮೆಂಟ್ಸ್' ಅನ್ನು ಮೊಟ್ಟ ಮೊದಲು ಹಾಲಿವುಡ್‌ನಲ್ಲಿ Digital colour ಗೆ ಬದಲಾಯಿಸಿ ಮರುಸೃಷ್ಟಿಸಲಾಗಿತ್ತು. Hollywood ನಲ್ಲಿ ಏನೇ ಬಂದರೂ ಅದನ್ನು ಕಣ್ಮುಚ್ಚಿ ಸ್ವೀಕರಿಸುವ Bollywood ಮಂದಿಯ ಪ್ರಯತ್ನದಿಂದಾಗಿ 'ಮೊಘಲ್-ಇ-ಆಜಮ್' ಚಿತ್ರ ವರ್ಣಮಯಗೊಂಡಿತು. ನಾವೇಕೆ ಸುಮ್ಮನಿರಬೇಕು? ಹಾಗಾಗಿಯೇ ಸತ್ಯಹರಿಶ್ಚಂದ್ರನಿಗೆ ನಾವೂ ಬಣ್ಣ ಬಳಿದು



'modren touch' ನೀಡಿದ್ದು!

Goldstone Media Limited ಕಂಪನಿಯ ತಂತ್ರಜ್ಞರು ಅನಗತ್ಯವಾಗಿದ್ದ ಎಲ್ಲಾ ದೃಶ್ಯಾವಳಿಗಳನ್ನು ಎಡಿಟ್ ಮಾಡಿ Slow motion ನಂತಹ ಟಚ್ ನೀಡಿ ಸತ್ಯ ಹರಿಶ್ಚಂದ್ರನನ್ನು ಆಧುನೀಕರಿಸಿದ್ದಾರೆ. Modernised ವಿಧಾನದಲ್ಲಿ ಇದೊಂದು ಅದ್ಭುತ ಟೆಕ್ನಿಕ್ ಕೂಡ. ಕೆಲವೊಮ್ಮೆ ಉಪೇಂದ್ರನ ಸಿನಿಮಾಗಳ ಮೂವ್‌ಮೆಂಟ್‌ನಂತೆ ಕಾಣುವುದು ಅಹಿತವೆನಿಸುತ್ತದೆ. ಪೆಂಡ್ಯಾಲರ ಅದ್ಭುತ ಸಂಗೀತದ ತುಣುಕುಗಳನ್ನು ಹಾಗೇ ಬಳಸಿದ್ದರೂ ಮರುಲೇಪನ ಮಾಡುವಾಗ ರಾಜೇಶ್ ರಾಮನಾಥ್ ಸ್ವಲ್ಪ ಎಡವಿದ್ದಾರೆ. ಹಾರ್ಮೋನಿಯಂಗಳು, ಪುರಾತನ ದೇಸೀ ವಾದ್ಯಗಳನ್ನು ಬಳಸಬೇಕಾದ ಬಹುಭಾಗಗಳಲ್ಲಿ ಕೀಬೋರ್ಡ್, ರಿಧಂ ಪ್ಯಾಡ್‌ಗಳನ್ನು ಬಳಸಿ ಸ್ವಲ್ಪ ತಲೆನೋವಾಗುವಂತೆ ಮಾಡಿದ್ದಾರೆ. ವೆಸ್ಟರ್ನ್ ಕ್ಲಾಸಿಕ್ ಮೋಡ್ ಆಫ್ ಮ್ಯೂಸಿಕ್ ನಲ್ಲಷ್ಟೇ ಕೆಲಸ ಮಾಡಬಲ್ಲ ರಾಮನಾಥ್ ಪ್ರತಿಭೆ ವೇಸ್ಟ್ ಎಂದು ತೋರುತ್ತದೆ.

ಹೀಗೆ ಹತ್ತು-ಹಲವು ಮಿಸ್ಟೇಕ್‌ಗಳನ್ನು ಚಿತ್ರ ಒಳಗೊಂಡಿದ್ದರೂ ಇದೆಲ್ಲವನ್ನೂ ಮೀರಿಸಿ ಕಂಗಳಲಿ ನೀರು ತರಿಸುವ ರಾಜ್‌ಕುಮಾರ್‌ರವರ ಅಭಿನಯ ನಿಜಕ್ಕೂ ಧೈತ್ಯ ಸ್ವರೂಪದ್ದು, ಸತ್ಯಸಂದನಾಗಿ ಆಜ್ಞೆ ಪಾಲಿಸುವ ದೈನ್ಯಭಾವ, ತನ್ನನ್ನೇ ಮಾರಿಕೊಂಡಾಗ, ಸ್ವಾಮಿ ಭಕ್ತಿಯಲ್ಲಿ ತಲ್ಲೀನರಾಗುವ ತನ್ಮಯತೆ, ಹೆಂಡತಿಯನ್ನೇ ಕೊಲ್ಲಬೇಕಾದ ಸಂದರ್ಭ ಬಂದಾಗ ದೃಢ ಮನಸ್ಸು ಮಾಡುವ ಕಾಠಿಣ್ಯ ಎಲ್ಲವೂ ನಟನೆಯ ಯಶಸ್ಸಿನ ಬಹು ದೊಡ್ಡ ಸಾಕ್ಷಿ. ಇದಕ್ಕೆ ಪೂರಕವಾಗಿ ನರಸಿಂಹರಾಜುರವರ ಅಭಿನಯದಲ್ಲಿರುವ Sense of humar ಚಿತ್ರವು ಬೋರು ಹೊಡೆಯದಂತೆ ಪ್ರೇಕ್ಷಕರನ್ನು ಸೆರೆ ಹಿಡಿಯುತ್ತದೆ.

ಎಷ್ಟೋ ಕಷ್ಟ-ನಷ್ಟ ಬಂದು, ರಾಜನಾಗಿದ್ದವ ಸ್ಮಶಾನ ಕಾಯಬೇಕಾಗಿ ಬಂದು, ಹೆಂಡತಿಯನ್ನೇ ಕೊಲ್ಲುವ ಪ್ರಸಂಗ ಬಂದರೂ 'ಅಸತ್ಯ'ಕ್ಕೆ ತಲೆಬಾಗದೆ 'ಸತ್ಯ'ವನ್ನೇ ಅನುಸರಿಸುವ ಸತ್ಯ ಹರಿಶ್ಚಂದ್ರ 'ಪ್ರಾಮಾಣಿಕತೆಯ ಪ್ರತೀಕ'. ಕಥೆಯನ್ನು ಬಹುತೇಕ ಎಲ್ಲರೂ ಬಲ್ಲರು. ಆದ್ದರಿಂದಾಗಿ ಅದನ್ನು ಹೇಳಬೇಕಾದ ಅಗತ್ಯವಿಲ್ಲ ಎನಿಸುತ್ತದೆ. ಜೊತೆಗೆ ಸ್ಥಾನಮಾನಕ್ಕಾಗಿ, ಹಣಕ್ಕಾಗಿ, ಪ್ರತಿಷ್ಠೆಗಾಗಿ, ಯಾವುದೇ ನೀಚ ಕೆಲಸವನ್ನು ಮಾಡಲು ಹಿಂಜರಿಯದ ಜನರು ಹೆಚ್ಚಾಗಿರುವ ಇಂದಿನ ದಿನಗಳಲ್ಲಿ ಹರಿಶ್ಚಂದ್ರನ ಕಥೆ ಜನಮಾನಸದ ಮೇಲೆ ಎಂತಹ ಪರಿಣಾಮ ಬೀರಬಲ್ಲದು ನೋಡಬೇಕು. ಇದು ಏನಾದರೂ ಸ್ವಲ್ಪ ಪರಿಣಾಮ ಬೀರಿದರೆ ಮಾತ್ರವೇ ಕೆ.ಸಿ.ಎನ್.ಗೌಡರ ಶ್ರಮ ಸಾರ್ಥಕ. ಇಷ್ಟಾದರೂ ಅವರು ಹಾಕಿರುವ ಹಣಕ್ಕೇನು ಮೋಸ ಇಲ್ಲ ಬಿಡಿ. ಅದು ಮೂರು ದಿನಗಳಲ್ಲಿ ವಾಪಸ್ಸು ಬರುತ್ತದೆ ಎಂಬ Commerical 'ಸತ್ಯ'ವೂ ಅವರ 'ಕಲಾ ಪ್ರೇಮ'ದ ಜೊತೆಗೆ, ಅವರ ಮನಸ್ಸಿನಲ್ಲಿದೆ! ○

ಸಿಂಧನೂರಿನಲ್ಲಿ ನಾಟಕೋತ್ಸವ : ಸಮುದಾಯದ 4 ನಾಟಕಗಳು

ಶಿವಾಲಯದಿಂದ ಏನನ್ನ ತಂದಿರಿ - ಜಲಗಾರನ ಪ್ರಶ್ನೆ

ಪಂಪಭಾರತ: ಸಿಂಧನೂರಿನಲ್ಲಿ ದಿನಾಂಕ:18.04.2008 ರಿಂದ 21.04.2008ರವರೆಗೆ ನಡೆದ ನಾಟಕೋತ್ಸವದಲ್ಲಿ ನಾಲ್ಕು ನಾಟಕಗಳನ್ನು ಪ್ರದರ್ಶಿಸಲಾಯಿತು. 18.04.08ರಂದು ಬೆಂಗಳೂರು ಸಮುದಾಯ ತಂಡವು ಪ್ರದರ್ಶಿಸಿದ ನಾಟಕ ಪಂಪ ಭಾರತ. ರಚನೆ: ಡಾ: ಕೆ.ವೈ. ನಾರಾಯಣಸ್ವಾಮಿ. ನಿರ್ದೇಶನ ಪ್ರಮೋದ್ ಶಿಗ್ಗಾಂವ್, ಸಂಗೀತ ಗಜಾನನ ಬಿ.ನಾಯಕ್. (ಈ ನಾಟಕದ ವಸ್ತು ಬಗೆಗೆ ಪತ್ರಿಕೆಯಲ್ಲಿ ಪ್ರಕಟವಾಗಿದೆ)

ಜಲಗಾರ

ರಚನೆ- ರಾಷ್ಟ್ರಕವಿ ಕುವೆಂಪು, ನಿರ್ದೇಶನ ಮಂಡ್ಯ, ಸಂಗೀತ ವೀರೇಶ ಸಾಲಿಮಠ ಸಿಂಧನೂರು ಸಮುದಾಯ ತಂಡ ಈ ನಾಟಕವನ್ನು ಪ್ರದರ್ಶಿಸಿತು. ಪೌರಕಾರ್ಮಿಕನ ಜೀವನವೇ ಕಥಾವಸ್ತುವಾಗಿರುವ ನಾಟಕ ತುಂಬಾ ಸೊಗಸಾಗಿ ಮೂಡಿ ಬಂದಿತು. ಜಲಗಾರನ ಬದುಕು ಬೆಳ್ಳಿ ಚುಕ್ಕಿ ಮೂಡುವುದಕ್ಕಿಂತ ಮೊದಲೇ ಪ್ರಾರಂಭವಾಗಿ ಸೂರ್ಯಾಸ್ತದೊಂದಿಗೆ ಕೊನೆಗೊಳ್ಳುತ್ತದೆ. ಜಲಗಾರನು ಹಬ್ಬ ಹರಿದಿನಗಳೆನ್ನದೆ ಉತ್ಸವಗಳ ದಿನದಂದು ಸಹ ತನ್ನ ಕಾಯಕ ಬಿಡದೆ ಇಡೀ ಊರನ್ನೇ ಸ್ವಚ್ಛವಾಗಿಡುವಲ್ಲಿ ತನ್ನ ಸಾರ್ಥಕ್ಯ ಪಡೆಯುತ್ತಾನೆ. ಕಾಯಕದಲ್ಲಿಯೇ ಪರಶಿವನನ್ನು ಕಾಣುವ ಕಾಯಕದ ಕರ್ಮಯೋಗಿಯಂತೆ ದುಡಿಯುತ್ತಾನೆ. ಮೇಲ್ಜಾತಿಯ ಜನರು ತನ್ನ ಮಗನನ್ನು ದೇವಸ್ಥಾನದ ಒಳಗೆ ಬಿಡದೆ ಹೊರದಬ್ಬಿದ್ದನ್ನು ನೋವಿನಿಂದ ಹೇಳುವ ಜಲಗಾರನು ಅದನ್ನು ಪ್ರತಿಭಟಿಸುವಲ್ಲಿ ವಿಫಲನಾಗುತ್ತಾನೆ. ದಾರಿಯಲ್ಲಿ ಜನರು ಭಿಕ್ಷುಕನೊಬ್ಬನನ್ನು ಹಿಂಸಿಸುತ್ತಾ ಅಮಾನುಷವಾಗಿ ವರ್ತಿಸುವುದನ್ನು ಕಂಡ ಕಲಹ ಜಲಗಾರ ತುಂಬಾ ನೊಂದುಕೊಳ್ಳುತ್ತಾನೆ. ತನ್ನ ಬುತ್ತಿಯಲ್ಲಿ ಅರ್ಧವನ್ನು ಆ ಭಿಕ್ಷುಕನಿಗೆ ನೀಡಿ ತಾನೂ ಅವನ ಜೊತೆಗೆ ಉಣ್ಣುತ್ತಾನೆ. ಹಸಿದವರ ನೋವು ಹಸಿದವರಿಗಲ್ಲದೆ


ನಾಟಕೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಸುರೇಂದ್ರರಾವ್

ಬೇರಾರಿಗೆ ಗೊತ್ತಾದೀತು ಎಂಬ ಅವನ ಮಾತು ಜಗತ್ತಿನ ಹಸಿದ ಹೊಟ್ಟೆಗಳ ಕುರಿತು ಹೇಳಿದಂತೆನಿಸುತ್ತದೆ. ಅವನ ಮಾತು ಪ್ರೇಕ್ಷಕರ ಅಂತರ್ಯವನ್ನು ಮಾನವೀಯ ನೆಲೆಯಲ್ಲಿ ಕದಕುತ್ತದೆ. ಜಲಗಾರರು ಅನುಭವಿಸುವ ಸಾಮಾಜಿಕ ಅಪಮಾನ, ಹಿಂಸೆ, ನೋವು, ದೇವಾಲಯಗಳಲ್ಲಿ ಪ್ರವೇಶ ನಿರಾಕರಣೆ, ಅವರ ದುಡಿಮೆಯ ಶೋಷಣೆಯನ್ನು ಇಂದಿನ ದಿನದ ನೆಲೆಯಲ್ಲಿ ಪ್ರಸ್ತುತಪಡಿಸಲಾಯಿತು. ಹಿನ್ನೆಲೆ ಸಂಗೀತ ಇನ್ನೂ ಮಧುರವಾಗಿ, ಇಂಪಾಗಿ ಇರಬೇಕಾಗಿತ್ತು. ಹಾಗೆಯೇ ಜಲಗಾರನು ಜಾತ್ರೆಗೆ ಹೋಗಿ ಬಂದ ಪುರೋಹಿತರನ್ನು ಕೇಳಿದ ಪ್ರಶ್ನೆ ಶಿವಾಲಯದಿಂದ ಏನನ್ನು ತಂದಿರಿ. ಶಿವನನ್ನು ತರಲಿಲ್ಲವೇ ಎಂದು ಕೇಳುವ ಅವನ ಪ್ರಶ್ನೆ ನಿಜಕ್ಕೂ ಸಾಮಾಜಿಕ ಅಸಮಾನತೆ, ಶೋಷಣೆಯ ಈ ವ್ಯವಸ್ಥೆಯಲ್ಲಿ ಸತ್ಯ, ಪ್ರಾಮಾಣಿಕತೆ ಹಾಗೂ ಸಹೋದರತೆಯನ್ನು ದಟ್ಟ ಅನುಭವ ನೀಡಿತು.

ಕಿರುಗೆಜ್ಜೆ ಘಲ್ ಘಲ್

ರಚನೆ ಶಂಕ್ರಯ್ಯ ಘಂಟಿ. ನಿರ್ದೇಶನ ಮತ್ತು ಸಂಗೀತ ವಾಸುದೇವ ಗಂಗೇರ. ಗುಲ್ಬರ್ಗಾ ಸಮುದಾಯ ತಂಡವು ಈ ಮಕ್ಕಳ ನಾಟಕವನ್ನು ಪ್ರದರ್ಶಿಸಿತು. ಮಕ್ಕಳನ್ನು ಲವಲವಿಕೆಯಿಂದ ನಟಿಸುವಂತೆ ಅಣಿಗೊಳಿಸುವಲ್ಲಿ ನಿರ್ದೇಶಕರ ಶ್ರಮ ತುಂಬಾ ಇದೆ. ಅಚ್ಚುಕಟ್ಟಾದ ಸಂಭಾಷಣೆ ಅಬ್ಬರದ ಸಂಗೀತದ ನಡುವೆ ತಾರೆಗಳನ್ನು ಕೈಲಿ ಹಿಡಿದ ಮಕ್ಕಳು ತಾರೆಗಳಂತೆ ಮಿನುಗಿದರು. ಹನುಮನ ಪ್ರೇಮ ಹಾಗೂ ಅವನ ಗೆಳೆತಿಯ ಸ್ನೇಹಮಯಿ ಸನ್ನಿವೇಶ, ಸಂಗಡಿಗರೊಂದಿಗೆ ಮಕ್ಕಳ ಸಂಭಾಷಣೆ ಮತ್ತು ನೈಜ ಅಭಿನಯ ತುಂಬಾ ಚೆನ್ನಾಗಿತ್ತು. ಕಥಾವಸ್ತು, ಹನುಮ ತನ್ನ ಗೆಳತಿಯನ್ನು ಉಳಿಸಿಕೊಳ್ಳಲು ಮಾಡುವ ಪ್ರಯತ್ನ ಪಡುವ ಕಷ್ಟ ಮನೋಜ್ಞವಾಗಿತ್ತು. ಅಜ್ಜಿಯು ಸಹ ತನ್ನ ಮೊಮ್ಮಗಳನ್ನು ರಾಜನ ಮಗನೊಂದಿಗೆ ಕಳುಹಿಸುವುದನ್ನು ವಿರೋಧಿಸಿ, ಬಡವ ಹನುಮನಿಗೆ ಸಹಕರಿಸುವುದು ಜನಮೆಚ್ಚುಗೆ ಪಡೆಯುವ ವಿಷಯ. ರಾಜಕುಮಾರನ ದರ್ಪ, ರಾಜನ ದಾಷ್ಟ್ಯ, ಅವನು ಭಟರ ಮೂಲಕ ಸಾರುವ ಆಜ್ಞೆಗಳು ಆಳುವವರು ಬಹುಶಃ ಎಲ್ಲಾ ಕಾಲದಲ್ಲೂ ಒಂದೇ ರೀತಿ ಇರುತ್ತಾರೆ ಎನಿಸುತ್ತದೆ. ಜನರ ಶಕ್ತಿ ಬೆಂಬಲದ ನಗಾರಿಯನ್ನು ರಾಜನು ಹನುಮನಿಂದ ಬೇಡುವುದು, ಕಳೆದುಕೊಂಡ ಜನ ಬೆಂಬಲವನ್ನು ಬೇಡಿದಂತೆನಿಸುತ್ತದೆ. ನಗಾರಿ ಶಬ್ದದ ಮೂಲಕ ಜನ ಸಾಮಾನ್ಯರ ಅಸಾಮಾನ್ಯ ಶಕ್ತಿಯನ್ನು ಅರಸನು ಗುರ್ತಿಸುವುದು ಮಾರ್ಮಿಕವಾಗಿದೆ. ನಾಟಕದಲ್ಲಿ ಹಿನ್ನೆಲೆ ಸಂಗೀತವಾಗಿ ಚಲನಚಿತ್ರ ಗೀತೆಗಳನ್ನು

ಪುಟ 12 ಕ್ಕೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH